
ಸಂಪುಟ 23 ಸಂಚಿಕೆ 17-18
ಮೇ 8, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಮೇ ದಿನದ
ವಿಶೇಷ
ಲೇಖನಗಳು



ಜಾಗತೀಕರಣದ ಬೆಂಕಿ:
ಬೇಯುತ್ತಿರುವ ದುಡಿವ ಜನ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 64

ಶಿಕ್ಷಣ ಕ್ಷೇತ್ರದ ಮೇಲೆ ದುರಾಕ್ರಮಣ

ತನ್ನ ಅಧಿಕಾರದಾಹದ ತೃಪ್ತಿಗಾಗಿ ಕಾಂಗ್ರೆಸ್ ಪಕ್ಷ ಸಮಾಜ ಘಾತುಕರಿಗೆ ಉದ್ಯೋಗ ನೀಡಿ ಅವರನ್ನು ಜನರ ಮೇಲೆ ಛೂ ಬಿಟ್ಟಿತ್ತು. ಆ ವರ್ಗ ವೃತ್ತಿಪರ ಕ್ರಿಮಿನಲ್ ಆಗಿ ಪರಿವರ್ತನೆಗೊಂಡಿತ್ತು. ಕಮ್ಯುನಿಸ್ಟರು ಹಾಗೂ ಅವರ ಬೆಂಬಲಿಗರನ್ನು ಮುಗಿಸುವುದಷ್ಟೇ ಅವರ ಏಕೈಕ ಗುರಿ ಹಾಗೂ ಮಂತ್ರವಾಗಿತ್ತು. 1972-77 ರ ಅವಧಿಯಲ್ಲಿ ಕಾಂಗ್ರೆಸ್ ಮಾಡಿದ್ದು ಆ ಕೆಲಸವಲ್ಲದೆ ಬೇರೇನೂ ಅಲ್ಲ.

ಈ ಅವಧಿಯಲ್ಲಿ ಮಹಿಳೆಯರ ಸ್ಥಾನ ಮಾನವನ್ನು ತೀರಾ ಕೆಳಮಟ್ಟಕ್ಕೆ ಇಳಿಸಲಾಯಿತು. ನಿಜ ಹೇಳಬೇಕೆಂದರೆ, ಬ್ರಿಟಿಷರು ಕೂಡ ಆ ಮಟ್ಟಕ್ಕೆ ಇಳಿದಿರಲಿಲ್ಲ. ಮಹಿಳೆಯರನ್ನು ಗುಂಡಿಟ್ಟು ಸಾಯಿಸಲಾಯಿತು. ಸಿಪಿಐ(ಎಂ) ಬೆಂಬಲಿಗರಿಗೆ ಕಿರುಕುಳ ನೀಡಲಾಯಿತು. ಅವರ ವಿರುದ್ಧ ಸುಳ್ಳು ಮೊಕದ್ದಮೆಗಳನ್ನು ಹೂಡಲಾಯಿತು. ಮಹಿಳೆಯರನ್ನು ಅವಮಾನಗೊಳಿಸುವ ಪರಿ ರಾಜ್ಯದ ಮೂಲೆ ಮೂಲೆಯಲ್ಲೂ ಚರ್ಚೆಗೆ ಒಳಗಾಯಿತು.

ಕಾಂಗ್ರೆಸ್ ದುರಾಕ್ರಮಣಕ್ಕೆ ಬಲಿಪಶುವಾದ ಇನ್ನೊಂದು ಕ್ಷೇತ್ರ ಶಿಕ್ಷಣ. ಯುವ ಮನಸ್ಸುಗಳು ಆರೋಗ್ಯಕರ ವಾತಾವರಣದಲ್ಲಿ ಅರಳುವ ಅವಕಾಶವೇ ಇರಲಿಲ್ಲ. ಶಿಕ್ಷಣದ ಪ್ರತಿ ವಿಷಯವನ್ನು ಕಾಂಗ್ರೆಸ್ ಗೂಂಡಾಗಳೇ ಆಳುತ್ತಿದ್ದರು. ಪರೀಕ್ಷೆಗಳಲ್ಲಿ ನಕಲು ಹೊಡೆಯಲು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿತ್ತು! ವಿದ್ಯಾರ್ಥಿಗಳು ಅಧ್ಯಯನದಿಂದ ದೂರವಾಗುತ್ತಿದ್ದರು. ಕಾಂಗ್ರೆಸ್‌ನ ವಿದ್ಯಾರ್ಥಿ ಸಂಘಟನೆಗಳು ಬಹುತೇಕ ಎಲ್ಲ ಶಿಕ್ಷಣ ಸಂಸ್ಥೆಗಳನ್ನು ಹೊಕ್ಕಿದ್ದವು. ಶಿಕ್ಷಣ ಕ್ಷೇತ್ರ ಅವರ ಆದಾಯದ ಪ್ರಮುಖ ಮೂಲವಾಗಿತ್ತು.

ಅನೇಕ ಶಿಕ್ಷಕರ ಕೊಲೆಯಾಯಿತು. ಹಲವರು ಶಿಕ್ಷಕ ವೃತ್ತಿಯನ್ನೇ ಬಿಡುವ ಮಾಡಲಾಯಿತು. ಇಂಥ ಅರಾಜಕತೆಯನ್ನು ಪ್ರತಿಭಟಿಸಲು ಮುಂದಾದ 132 ಎಸ್‌ಎಫ್‌ಐ ಕಾರ್ಯಕರ್ತರ ಹತ್ಯೆಯಾಯಿತು.

ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ಎರಡು ವರ್ಷ ಸ್ನಾತಕೋತ್ತರ ಪರೀಕ್ಷೆಗಳನ್ನೇ ನಡೆಸಲಾಗಲಿಲ್ಲ. ವೈದ್ಯಕೀಯ ಪರೀಕ್ಷೆಗಳ ಗತಿಯೂ ಅದೇ ಆಯಿತು. ಕಲ್ಕತ್ತ ವಿಶ್ವವಿದ್ಯಾಲಯದ ಪದವಿ ಹೊರಗಿನವರ ಕಣ್ಣಿನಲ್ಲಿ ಅಪಹಾಸ್ಯದ ವಿಷಯವಾಯಿತು. ಪಶ್ಚಿಮ ಬಂಗಾಳದ ವಿಶ್ವವಿದ್ಯಾಲಯಗಳ ಎಂಬಿಬಿಎಸ್ ಪದವಿಯನ್ನು ಬ್ರಿಟಿಷ್ ಸರ್ಕಾರ ಅಮಾನ್ಯಗೊಳಿಸಿತು.

ಇದು ಒಂದು ಮುಖ. ಪ್ರಜಾಪ್ರಭುತ್ವದ ನಿಯಮಾವಳಿಗಳಿಗೆ ಅಸಹನೀಯ ಅಗೌರವ ಹಾಗೂ ಕಾಂಗ್ರೆಸ್ಸಿನ ಕೈಗಳಲ್ಲಿ ಜನತೆಯು ನಿಧಾನಕ್ಕೆ ಕುಸಿಯುತ್ತಿರುವುದು ಕತೆಯ ಇನ್ನೊಂದು ಮುಖವಾಗಿದೆ.

ನಾವು ಬಲಿಷ್ಠರಾಗಿದ್ದೇವೆ ಎನ್ನುವುದನ್ನು ತೋರಿಸಲಷ್ಟೆ ಅಲ್ಲ, ಇಡೀ ರಾಜ್ಯವನ್ನು ಅನಾಹುತದಿಂದ ಉಳಿಸಲು ಬಂಗಾಳದಲ್ಲಿ ಅಸೆಂಬ್ಲಿ ಚುನಾವಣೆ ನಡೆಯುವುದು ಅಗತ್ಯವಾಗಿತ್ತು. ಕೊಲೆಗಳನ್ನು ನಡೆಸುತ್ತಾ ಮುಂದುವರಿಯಬಹುದು ಎಂದು ಎಸ್.ಎಸ್. ರಾಯ್ ಭಾವಿಸಿದ್ದರು ಆದರೆ, ಅಂತಿಮವಾಗಿ ತೀರ್ಪು ನೀಡುವವರು ಜನರೇ ಎಂಬುದು ಪಾಪ ಅವರಿಗೆ ಗೊತ್ತಿರಲಿಲ್ಲ.

ಅವರ ಸರಕಾರದ ಅವಧಿ ಮುಗಿಯಿತು ಆದರೆ 42ನೇ ತಿದ್ದುಪಡಿಯ ಪ್ರಕಾರ ಅವರು ಇನ್ನೂ ಒಂದು ವರ್ಷ ಮುಂದುವರಿಯಬಹುದಿತ್ತು. ದೆಹಲಿಯ ಜಸ್ಲೋಕ್ ಆಸ್ಪತ್ರೆಯಲ್ಲಿದ್ದ ಜಯಪ್ರಕಾಶ ನಾರಾಯಣ್ ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು. ಪಶ್ಚಿಮ ಬಂಗಾಳದಲ್ಲಿ ತಕ್ಷಣವೇ ಚುನಾವಣೆ ನಡೆಯಬೇಕೆಂಬುದು ಇಡೀ ದೇಶದ ಬಯಕೆಯಾಗಿತ್ತು.

ವಿಧಾನಸಭೆಗಳನ್ನು ವಿಸರ್ಜಿಸುವಂತೆ ಸೂಚಿಸಿ ಪಶ್ಚಿಮಬಂಗಾಳ ಸಹಿತ ಒಂಬತ್ತು ರಾಜ್ಯಗಳ ರಾಜ್ಯಪಾಲರಿಗೆ ಪತ್ರಗಳನ್ನು ಕಳಿಸಿರುವುದಾಗಿ ಕೇಂದ್ರ ಗೃಹ ಸಚಿವ ಚರಣ್ ಸಿಂಗ್ ಏಪ್ರಿಲ್ 18 ರಂದು ಪ್ರಕಟಿಸಿದರು.

ಕೆಲವು ರಾಜ್ಯಗಳು ಇದನ್ನು ಸುಪ್ರಿಂಕೋರ್ಟಿನಲ್ಲಿ ಪ್ರಶ್ನಿಸಿದವು. ಆದರೆ ಅವುಗಳಿಗೆ ಪುರಸ್ಕಾರ ಸಿಗಲಿಲ್ಲ. ಮೇ ಒಂದರಂದು ಒಂಬತ್ತು ವಿಧಾನಸಭೆಗಳನ್ನು ವಿಸರ್ಜಿಸಿ ಚುನಾವಣೆಗಳನ್ನು ಘೋಷಿಸಲಾಯಿತು. ತಮಿಳುನಾಡು ಮತ್ತು ಕೇಂದ್ರಾಡಳಿತ ಪ್ರದೇಶ ದೆಹಲಿಗೂ ಅವುಗಳ ಜತೆ ಚುನಾವಣೆ ಪ್ರಕಟಿಸಲಾಯಿತು. ಪ. ಬಂಗಾಳದಲ್ಲಿ ಜೂನ್ 11 ಮತ್ತು 14 ರಂದು ಎರಡು ಹಂತಗಳಲ್ಲಿ ಮತದಾನ ನಡೆಯುವುದೆಂದು ನಿಗದಿಯಾಯಿತು.

ಹಿಂದಿನ ಮೈತ್ರಿಯೇ ಮುಂದುವರಿಯಬೇಕೆಂಬುದು ನಮ್ಮ ಇಚ್ಛೆಯಾಗಿತ್ತು. ದುರದೃಷ್ಟವಶಾತ್, ಪ. ಬಂಗಾಳ ಜನತಾ ಪಕ್ಷದ ಕೆಲವು ನಾಯಕರು ಜನತೆಯ ತೀರ್ಪಿನ ಮಹತ್ವವನ್ನು ಅರಿಯಲಿಲ್ಲ. ತಾವು ಸ್ಪರ್ಧಿಸುವ ಕ್ಷೇತ್ರಗಳ ಸಂಖ್ಯೆಯ ವಿಚಾರವಾಗಿ ಅವರು ಏಕಪಕ್ಷೀಯ ಹೇಳಿಕೆಗಳನ್ನು ಆರಂಭಿಸಿದರು.

ನಮ್ಮ ಪಕ್ಷದ ನಾಲ್ವರು ಪಾಲಿಟ್ ಬ್ಯೂರೋ ಸದಸ್ಯರಾದ ಎಂ. ಬಸವಪುನ್ನಯ್ಯ, ಇಎಂಎಸ್. ನಂಬೂದರಿಪಾಡ್, ಸುರ್ಜಿತ್ ಮತ್ತು ನಾನು ಜನತಾಪಕ್ಷದ ಅಧ್ಯಕ್ಷ ಚಂದ್ರಶೇಖರರನ್ನು ಭೇಟಿಯಾದೆವು. ವಿಷಯವನ್ನು ಪರಿಶೀಲಿಸುವುದಾಗಿ ಅವರು ಹೇಳಿದರು.

ಜನತಾಪಕ್ಷದ ಇಬ್ಬರು ಪ್ರಧಾನ ಕಾರ್ಯದರ್ಶಿಗಳಾದ ಮಧು ಲಿಮಯೆ ಮತ್ತು ಬಿಜೊಯ್ ಸಿಂಗ್ ನಹರ್ ಅವರ ಬೆನ್ನಲ್ಲೇ ಕಲ್ಕತ್ತಕ್ಕೆ ಬಂದರು. ಸ್ಥಾನ ಹೊಂದಾಣಿಕೆ ಮಾತುಕತೆಗಾಗಿ ನಾವು ಡಾ। ಪ್ರತಾಪ್ ಚಂದರ್ ಅವರ ಮನೆಯಲ್ಲಿ ಸಭೆ ಸೇರಿದೆವು. ಅಶೋಕ್ ಘೋಷ್, ಮಖನ್ ಪಾಲ್ ಮತ್ತು ನಾನು ಎಡಪಕ್ಷಗಳ ಪ್ರತಿನಿಧಿಗಳಾಗಿದ್ದೆವು. ಬಿಜೆಪಿಯ ಮತ್ತು ಸ್ವತಃ ಡಾ। ಚಂದರ್ ಜನತಾಪಕ್ಷವನ್ನು ಪ್ರತಿನಿಧಿಸಿದರು.

ನಮಗೆ ಕೇವಲ 80 ಸ್ಥಾನಗಳನ್ನು ಬಿಟ್ಟುಕೊಡುವುದಾಗಿ ಹಾಗೂ ರಾಜ್ಯದಲ್ಲಿ ಸರಕಾರ ರಚಿಸುವುದಕ್ಕೆ ಸಾಧ್ಯವಾಗುವಷ್ಟು ಕ್ಷೇತ್ರಗಳಲ್ಲಿ ಜನತಾಪಕ್ಷ ಸ್ಪರ್ಧಿಸಲಿದೆ ಎಂದು ಜನತಾಪಕ್ಷದ ಪ. ಬಂಗಾಳ ಘಟಕದ ನಾಯಕರು ಹೇಳಿರುವುದನ್ನು ನಾನು ಸಭೆಯಲ್ಲಿ ಪ್ರಸ್ತಾವಿಸಿದೆ.

(ಮುಂದುವರಿಯುವುದು)

ನನ್ನ ನೆನಪಿನ ಮೇ ದಿನಾಚರಣೆ

1947 ರ ಮೇ ದಿನಾಚರಣೆ

1945 ರಿಂದಲೇ ಬಿಜಾಪುರದಲ್ಲಿ ಮೇ ದಿನಾಚರಣೆ ಪ್ರಾರಂಭವಾಗಿ ಬೀಡಿ, ಮುನಿಸಿಪಲ್ ಕಾರ್ಮಿಕರಲ್ಲದೆ ವಿದ್ಯಾರ್ಥಿ ಸಂಘಟನೆ, ಎಐಎಸ್‌ಎಫ್ ಸೇರಿ ಕಾರ್ಮಿಕ ದಿನಾಚರಣೆ. ಪ್ರಥಮ ದಿನಾಚರಣೆ ಬಿಜಾಪುರದಲ್ಲಿ ಮೆರಗು ತಂದಿತ್ತು. ಹರಿಜನ-ಮುಸ್ಲಿಮ್ ಮಹಿಳೆಯರು, ವಿದ್ಯಾರ್ಥಿಗಳು ಕೈಯಲ್ಲಿ ಕೆಂಬಾವುಟ ಹಿಡಿದು ಘೋಷಣೆ ಕೂಗುತ್ತಾ ಮೆರವಣಿಗೆ ಮಾಡಿದ್ದು ಜನರು ಮೂಗಿನ ಮೇಲೆ ಬೊಟ್ಟು ಇಡುವಂತಾಗಿತ್ತು. ಆದರೆ 1947 ರ ಮೇ ದಿನಾಚರಣೆಗೆ ಹೊಸ ಸೊಬಗು. ಭಾರತ ದೇಶದ ಜನರ ಕನಸು 'ಸ್ವಾತಂತ್ರ್ಯ' ನನಸಾಗುವ ಕಾಲ ಸನ್ನಿಹಿತ. ಚಿಕಾಗೋ ಕಾರ್ಮಿಕರು ಎಂಟು ತಾಸು ದುಡಿಮೆಗಾಗಿ ನಡೆಸಿದ ಹೋರಾಟದ ಸ್ಫೂರ್ತಿಯನ್ನು ಕಾರ್ಮಿಕ ವರ್ಗ ಇಮ್ಮಡಿಗೊಳಿಸಿ ಭಾರತ ದೇಶದ ಸ್ವಾತಂತ್ರ್ಯದ ಹೊಸ್ತಿಲನಲ್ಲಿರುವ ಸಂಧಿಕಾಲ ತಲುಪುವ ಸ್ಥಿತಿ. ಕಾರ್ಮಿಕರಲ್ಲಿ ಹೊಸ ಚೈತನ್ಯ - ಹೊಸಸ್ಫೂರ್ತಿ. ಸೇವೆಯ, ವಾಸದ ತಮ್ಮ ಜೀವನದ ಪರಿಸ್ಥಿತಿ ಬದಲಾಗುತ್ತದೆಂಬ ಹರ್ಷ. ಮುನಸಿಪಲ್ ಕೆಲಸಗಾರರಿಗೆ, ಮಜೂರಿ ಹೆಚ್ಚಾಗುತ್ತದೆಂದು, ಬೀಡಿ ಕೆಲಸಗಾರರಿಗೆ, ಟಾಂಗಾ, ಎಣ್ಣೆಗಾಣ, ಎಕ್ಕಾಗಾಡಿಯವರಿಗೆಲ್ಲ ತಮ್ಮದೇ ಆದ ಆಸೆ ಆಕಾಂಕ್ಷೆಗಳು,.ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನಂತರ ನೌಕರಿಯ ಆಸೆ. ಗುಲಾಮಗಿರಿಯಿಂದ ಸ್ವಾತಂತ್ರ್ಯಕ್ಕೆ ಕೆಂಬಾವುಟದಡಿಯಲ್ಲಿ ಸಂಘಟಿತರಾಗಿ ಹೋರಾಡುತ್ತಿರುವ ಮುಸ್ಲಿಂ ಮಹಿಳೆಯರನ್ನು ಒಡೆಯುವ ಪ್ರಯತ್ನ ಮುಸ್ಲಿಂ ಲೀಗ್ ನಡೆಸುತ್ತಿದ್ದು ಮೇ ದಿನಾಚರಣೆ ಸ್ಫೂರ್ತಿ ಅದನ್ನು ಮಣ್ಣು ಮುಕ್ಕಿಸಿತು.

ಬಿಜಾಪುರ ನಗರದಲ್ಲಿ ಎಂದಿಗೂ ಕಾಣದಂಥ ಸಾವಿರಾರು ಕೆಂಬಾವುಟ ಹಿಡಿದು ಮುಗಿಲು ಮುರಿಯುವ ಘೋಷಣೆಗಳೊಂದಿಗೆ ಎರಡು ಸಾವಿರದಷ್ಟು ಕಾರ್ಮಿಕರ ಮೆರವಣಿಗೆ. ಇಷ್ಟು ದೊಡ್ಡ ಕಾರ್ಮಿಕ ಮೆರವಣಿಗೆ ಬಿಜಾಪುರಕ್ಕೆ ಪ್ರಥಮ ದೇಣಿಗೆ. ಸಾವಿರಕ್ಕೂ ಮೇಲ್ಪಟ್ಟು ಮುಸ್ಲಿಂ ಬೀಡಿ ಕಾರ್ಮಿಕರು, ಎರಡು ನೂರರಷ್ಟು ದಲಿತ ಮತ್ತು ಹಿಂದುಳಿದ ವರ್ಗದ ಮುನಸಿಪಲ್ ಕಾರ್ಮಿಕರು, ನೂರಾರು ವಿದ್ಯಾರ್ಥಿಗಳು, ಇತರ ಕಾರ್ಮಿಕರೆಲ್ಲ ಘೋಷಣೆಯ ಗುಡುಗಿನಿಂದ ಜನರನ್ನೆಬ್ಬಿಸಿ, ಕಾರ್ಮಿಕರು ತಮ್ಮ ಹಕ್ಕಿಗಾಗಿ ಮಾತ್ರ ಹೋರಾಡುವುದಿಲ್ಲ. ದೇಶದ ಸ್ವಾತಂತ್ರ್ಯಕ್ಕಾಗಿಯೂ ಪಣ ತೊಟ್ಟು ದುಡಿಯುತ್ತಿದ್ದಾರೆಂಬುದನ್ನು ದಾರಿಯುದ್ದಕ್ಕೂ ನಿಂತಿದ್ದ ಜನಸಮುದಾಯಕ್ಕೆ ಮನದಟ್ಟು ಮಾಡಿಕೊಡುತ್ತಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕ ವರ್ಗದ ಚರಿತ್ರಾರ್ಹಪಾತ್ರವನ್ನು ಎತ್ತಿ ತೋರಿಸುತ್ತಿದ್ದರು.



1945 ರಲ್ಲಿ ಎನ್.ಕೆ.ಉಪಾಧ್ಯಾಯ

ಒಂದು ಕಡೆ ಜಗತ್ತಿನ ಮೂರನೇ ಒಂದು ಭಾಗದಲ್ಲಿ ಕ್ರಾಂತಿವೀರ ಲೆನಿನ್ ಮಾರ್ಕ್ಸ್‌ವಾದದ ಸಿದ್ಧಾಂತದಡಿಯಲ್ಲಿ ಶೋಷಣೆ ರಹಿತ ಸಮಾಜವಾದಿ ಸಮಾಜ ನಿರ್ಮಾಣ ಮಾಡಿದ್ದನ್ನು ಬೊಟ್ಟು ಮಾಡಿ ತೋರಿಸುತ್ತ ಮತ್ತೊಂದು ಕಡೆ ರಶ್ಯನ್ ಮಹಾಕ್ರಾಂತಿಯಿಂದ ಸ್ಫೂರ್ತಿ ಪಡೆದ ಭಾರತದ ಜನತೆ ಸ್ವಾತಂತ್ರ್ಯ ಪಡೆಯುವತ್ತ ಸಾಗಿರುವುದನ್ನು ತೋರಿಸುತ್ತ ಹೆಮ್ಮೆಯಿಂದ, ಆತ್ಮವಿಶ್ವಾಸದಿಂದ ಬಾಲಸಿಂಗ ಮಾಸ್ತರ, ಎನ್.ಕೆ.ಉಪಾಧ್ಯಾಯ, ಎಂ.ಎಂ.ಮಕಾನದಾರ ಮೊದಲಾದ ಮುಖಂಡರಿಂದ ಭಾಷಣ ಕೇಳಿಸಿಕೊಂಡು ಉತ್ಸಾಹಿತಗೊಂಡ ಮೇ ದಿನಾಚರಣೆ, ಭವಿಷ್ಯ ತಮ್ಮದಾಗಿಸಿಕೊಳ್ಳುವ ಉತ್ಸಾಹ.

ನೆನಪು ಎರಡು: 1996 ರ ಮೇ ದಿನಾಚರಣೆ

1996 ರ ಮೇ ದಿನಾಚರಣೆಯ ಉತ್ಸಾಹವೇ ಬೇರೆ. ಲೋಕಸಭೆ ಚುನಾವಣೆಯಲ್ಲಿ ಆರಿಸಿಬಂದು ದಿಲ್ಲಿಯಲ್ಲಿ ಹದಿಮೂರು ದಿವಸ ದರ್ಬಾರ ನಡೆಸಿದ ಬಿಜೆಪಿ ನೇತೃತ್ವದ ವಾಜಪೇಯಿ ಸರ್ಕಾರದ ಪತನ. ದೇವೇಗೌಡರು ಪ್ರಧಾನಮಂತ್ರಿಯಾಗಿ ಕೇಂದ್ರದಲ್ಲಿ ಸಂಯುಕ್ತ ರಂಗ ಸರ್ಕಾರ ರಚನೆ. ಕಾರ್ಮಿಕ

ಎನ್.ಕೆ. ಉಪಾಧ್ಯಾಯ

ವಿರೋಧಿ, ಕೋಮುವಾದಿ ಸರಕಾರದ ಪತನ. ಕಾರ್ಮಿಕ ವರ್ಗದ ಪಕ್ಷಗಳ ಬೆಂಬಲದಿಂದ ಸಂಯುಕ್ತ ರಂಗ ಸರಕಾರದ ಅಸ್ತಿತ್ವ ಕಾರ್ಮಿಕರಲ್ಲಿ ಹೊಸ ವಿಶ್ವಾಸ ಹುಟ್ಟಿಸಿತ್ತು. ಬೀಡಿ ಕಾರ್ಖಾನೆಗಳ ಮುಚ್ಚುವಿಕೆಯಿಂದಾಗಿ ಮಹಿಳಾ ಬೀಡಿ ಕಾರ್ಮಿಕರ ಸಂಖ್ಯೆ ಕ್ಷೀಣಿಸಿದ್ದರೂ, ಐದು ನೂರಕ್ಕೂ ಮೇಲ್ಪಟ್ಟ ಕೆ.ಎಸ್.ಆರ್.ಟಿ.ಸಿ.' ಕಾರ್ಮಿಕರು, ಮಧ್ಯಮವರ್ಗದ ಬ್ಯಾಂಕ್, ಎಲ್‌ಐಸಿ, ಕಾರ್ಮಿಕರು, ಔಷಧ ಪ್ರತಿನಿಧಿಗಳು, ಮುನಿಸಿಪಲ್ ಕಾರ್ಮಿಕರು, ರೈತರು ಬ್ಯಾಂಡ್-ಬಾಜ, ಘೋಷಣೆಗಳೊಂದಿಗೆ ತೆಗೆದ ಮೆರವಣಿಗೆ, ಆಚರಿಸಿದ ಮೇ ದಿನಾಚರಣೆ, ಎಂಥ ಪರಿಸ್ಥಿತಿ ಬಂದರೂ ಕಾರ್ಮಿಕವರ್ಗ ಚಿರಾಯುವಾಗಿರುತ್ತದೆ. ವಿಶ್ವದ ಕಾರ್ಮಿಕರು ಒಂದಾಗಿ ಶೋಷಣೆ ರಹಿತ ಸಮಾಜ ನಿರ್ಮಾಣಕ್ಕೆ ನಿರಂತರ ಹೋರಾಡುತ್ತದೆ. ಕಾರ್ಮಿಕ ವರ್ಗಕ್ಕೆ ಸೋಲಿಲ್ಲ. ಅಡೆತಡೆಗಳನ್ನು ಧಿಕ್ಕರಿಸಿ ಗೆಲುವಿನತ್ತ ಮುಂದೆ ಸಾಗುತ್ತದೆಂಬುದನ್ನು ತೋರಿಸಿಕೊಟ್ಟಿದೆ. ಅಂದಿನ ಮೆರವಣಿಗೆ ನೋಡಿ ಜನರೆಂದುಕೊಂಡರು 'ಕೆಂಬಾವುಟದ ನೇತೃತ್ವದಲ್ಲಿ ಸಾಗುವ ಮಧ್ಯಮವರ್ಗ ಇಷ್ಟು ಇದೆಯೇ?"

ಸ್ವಾತಂತ್ರ್ಯ ಸಂಗ್ರಾಮವನ್ನು ಧಿಕ್ಕರಿಸಿ, ಬ್ರಿಟಿಷರ ಜೋಡಿ ಕೈ ಜೋಡಿಸುತ್ತಿದ್ದ ಬಿಜೆಪಿ ಸರಕಾರ ಉರುಳಿ ಕಾರ್ಮಿಕ ವರ್ಗದ ಹಿತ ಸಾಧಿಸಬಹುದೆಂಬ ಮಹೋದ್ದೇಶದಿಂದ **ಕಾರ್ಮಿಕ ವರ್ಗ ಮೇ ದಿನಾಚರಣೆಯನ್ನು ಅತ್ಯುತ್ಸಾಹದಿಂದ ಆಚರಿಸಿತು. ಅಂದಿನ ಉತ್ಸಾಹ ಸ್ವಾತಂತ್ರ್ಯ ಗಳಿಕೆಗಾಗಿ, ಇಂದಿನ ಉತ್ಸಾಹ ಸ್ವಾತಂತ್ರ್ಯ ಉಳಿಸುವಿಕೆಗಾಗಿ, ಅದರ ರಕ್ಷಣೆಗಾಗಿ**

ಹೊಸ ಹೆಸರು ಸೂಚಿಸಿ

ಆತ್ಮೀಯರೇ,

ಪತ್ರಿಕೆಗೆ ಹೊಸ ಹೆಸರು, ಹೊಸ ರೂಪ ಕೊಡುವ ಸೂಚನೆಗಳನ್ನು ಕಳಿಸಬೇಕೆಂದು ತಮಗೆಲ್ಲಾ ವಿನಂತಿಸಿದ್ದೆವು. ಈಗಾಗಲೇ ಹಲವಾರು ಪತ್ರಗಳು ತಲುಪಿವೆ. ಪ್ರೀತಿಯ, ಕಳಕಳಿಯ ಅನೇಕ ಸಲಹೆಗಳ ಅಂಶಗಳೂ ಇದರಲ್ಲಿವೆ. ನಿಜ ಇವು ಮೊದಲ ಪ್ರತಿಕ್ರಿಯೆಗಳು... ಇನ್ನೂ ಸೂಚನೆ ಕಳಿಸಲು ಸಮಯವಿದೆ. ತಪ್ಪದೇ ತಾವೆಲ್ಲಾ ಬರೆಯಬೇಕೆಂಬುದು ನಮ್ಮ ಅಪೇಕ್ಷೆ. ದಯವಿಟ್ಟು ಕಳಿಸಿ. ಮರೆಯಬೇಡಿ ಸೂಚನೆಗಳು ಮೇ 15 ರೊಳಗೆ ನಮ್ಮ ಕೈ ಸೇರಲಿ

ಶಾಲೆ ಮುಚ್ಚುವ ಶಿಕ್ಷಣ ಸಚಿವರು ಬೇಕೆ?

ರಾಜ್ಯದಲ್ಲಿನ 2000 ಶಾಲೆಗಳನ್ನು ಮುಚ್ಚುವ ತಮ್ಮ ನಿರ್ಧಾರ ಅಚಲವೆಂದು ಯಾರ ಒತ್ತಡ-ಆಗ್ರಹಗಳನ್ನು ಕೇಳುವುದಿಲ್ಲವೆಂದು ಸಾರುತ್ತಾ ತಿರುಗುತ್ತಿದ್ದಾರೆ ಶಿಕ್ಷಣ ಸಚಿವ ವಿಶ್ವನಾಥರು. ತಾವೊಬ್ಬ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಚಿವರು ಎಂಬುದನ್ನೇ ಮರೆತಂತಿರೆ ಈ ಮಹಾಶಯರು ಅಥವಾ ಇದನ್ನು ಗಟ್ಟಿಯಾಗಿ ಹೇಳಿದಷ್ಟು ವಿಶಬ್ಯಾಂಕ್‌ನ ತೋಳಗಳು ನಾಣ್ಯ ಇನ್ನೂ ಉದುರಿಸುತ್ತವೆ ಎಂಬ ದೂರಾಲೋಚನೆ ಇರಬಹುದು. 36 ಕೋಟಿ ರೂ.ಗಳನ್ನು ಉಳಿಸಲು 2000 ಶಾಲೆಗಳು ಯಕಃಶ್ಚಿತವಾಗಿರಬಹುದು. ಆದರೆ ಗ್ರಾಮ ಗ್ರಾಮಗಳ ಜನತೆಗೆ, ಜನಸಾಮಾನ್ಯರಿಗೆ ಇದು 2000 ಎಂಬುದು ಎದೆ ಧಸಕ್ಕೆನ್ನುವ ವಿಚಾರವಾಗಿದೆ. ಇಂತಹ ಘನೋದ್ದೇಶವನ್ನು ಶಿಕ್ಷಣದ ಕಾರ್ಯಪಡೆ ಅಧ್ಯಕ್ಷ ಡಾ|| ರಾಜಾರಾಮಣ್ಣ ಹಾಗೂ ನಾಡಿನ ಪ್ರಜ್ಞಾವಂತರು ವಿರೋಧಿಸಿದ್ದಾರೆ. ಸಚಿವರು ಹೋದಲ್ಲೆಲ್ಲಾ ಹಲವರು ಪ್ರಶ್ನಿಸಿದ್ದಾರೆ. ಆ ಬಳಿಕ ಶಾಲೆಗಳನ್ನು ಮುಚ್ಚುವುದಿಲ್ಲವೆಂದೂ, ಅವುಗಳನ್ನು ವಿಲೀನಗೊಳಿಸಲಾಗುವುದೆಂದೂ ಸಮಜಾಯಿಷಿ ನೀಡಲಿದ್ದಾರೆ. ವಿಲೀನಕ್ಕೆ, ಮುಚ್ಚುವುದಕ್ಕೂ ಏನು ವ್ಯತ್ಯಾಸವಿದೆ ಎಂಬುದನ್ನು ಬುದ್ಧಿ ಇರುವ ವಿದ್ಯಾಮಂತ್ರಿಗಳೇ ಹೇಳಬೇಕು.ಮುಚ್ಚುವ ಶಾಲೆಗಳ ಶಿಕ್ಷಕರನ್ನು ಪಕ್ಕದ ಶಾಲೆಗಳಿಗೆ ವರ್ಗಾಯಿಸಲಾಗುವುದು, ಆದ್ದರಿಂದ ಆತಂಕಬೇಡ ಎಂಬ ಭರವಸೆಯಿಂದ 36ಕೋಟಿ ಹೇಗೆ ಉಳಿತಾಯವಾಗುವುದು ಎಂಬುದು ನಿಜಕ್ಕೂ ಅಗೋಚರ ವಿಚಾರ ಮತ್ತು ಸರ್ಕಾರದ ಸಮಜಾಯಿಷಿ. ಅದರ ಉದ್ದೇಶದ ಪ್ರಾಮಾಣಿಕತೆ ಪ್ರಶ್ನಾರ್ಹ. ಸರಾಯಿ ಲಾಬಿಗಳಿಗೆ 250 ಕೋಟಿ ರೂಪಾಯಿಗಳನ್ನು ಮುಫತ್ ಆಗಿ ನೀಡುವ ಸರ್ಕಾರದ ಆದ್ಯತೆಗಳೇನಾದರೂ ಏನು? ಎಂಬುದು ಮುಖ್ಯಪ್ರಶ್ನೆ. ಸರ್ವರಿಗೂ ಉಚಿತ ಸಾರ್ವತ್ರಿಕ ಶಿಕ್ಷಣ ನೀಡಲಾಗುವುದು ಎಂಬ ಸಂವಿಧಾನದ ಭರವಸೆಗೆ ಇವರು ತೋರುತ್ತಿರುವುದು ನಾಯಿಗಿಂತ ಕಡೆ ಪಾಡು.

ಎಲ್ಲೇ ಆಗಲೀ, ಶಾಲೆಯನ್ನು ಮುಚ್ಚುಲು ಬಲು ಸುಲಭ. ಆದರೆ ಶಾಲೆ ಆರಂಭಿಸುವುದು ಅಷ್ಟೇನೂ ಸರಳವಲ್ಲ. ಇಂದು ರಾಜ್ಯದಲ್ಲಿ ಸರ್ಕಾರದ ಅಂಕಿ ಅಂಶಗಳೇ ಹೇಳುವಂತೆ ಪ್ರಾಥಮಿಕ - ಮಾಧ್ಯಮಿಕ ಶಾಲೆಗಳಲ್ಲಿ 1 ರಿಂದ 7 ರೊಳಗೆ ಶಾಲೆ ಬಿಡುವವರ ಸಂಖ್ಯೆ 43.75 (1997-98) ಇದರಲ್ಲಿ ಬಾಲಕರು ಶೇ 41.34, ಬಾಲಕಿಯರು ಶೇ 46.28 ಅತಿ ಹೆಚ್ಚಿನ ಪ್ರಮಾಣ ಗ್ರಾಮಾಂತರದಲ್ಲೇ ಶಾಲೆ ಬಿಡುವವರು. ಅದರಲ್ಲಿಯೂ ಕರ್ನಾಟಕದ ಅತ್ಯಂ ಹಿಂದುಳಿದ ಜಿಲ್ಲೆಗಳಾದ ಬೀದರ್, ವಿಜಾಪುರ, ಗುಲ್ಬರ್ಗಾಗಳೇ ಮೊದಲ ಸ್ಥಾನದಲ್ಲಿವೆ. ಅಂದರೆ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳು ಎಂದರ್ಥ. ಇಲ್ಲೆಲ್ಲಾ ಸರ್ಕಾರಿ ಶಾಲೆಗಳಿದ್ದು, ಪುಸ್ತಕ, ಬಟ್ಟೆ, ಅಕ್ಕಿ ಕೊಡಲಾಗುತ್ತಿದೆ ಎಂದರೂ ಶಾಲೆಗೆ ಶರಣು ಹೊಡೆವ, ಭವಿಷ್ಯತ್ತನ್ನೇ ಬದುಕಿನ ಕ್ರೂರ ವಾಸ್ತವಕ್ಕೆ ಬಲಿಕೊಡುವ ಏಕಲವ್ಯರೇ ಅಧಿಕ. ಇದರಲ್ಲಿಯೂ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗದ ಸಮಾಜಿಕವಾಗಿ, ಆರ್ಥಿಕವಾಗಿ ತಳ ತಲುಪಿರುವ ವಿಭಾಗಗಳ ಮಕ್ಕಳೇ ಗಣನೀಯ. ಶಾಲೆ ಬಿಡುವುದಕ್ಕೂ ಬಡತನಕ್ಕೂ ಸಂಬಂಧವಿದೆ ಎಂದು ಅಧ್ಯಯನದ ವರದಿಯಲ್ಲಿ ಗುರುತಿಸುತ್ತಿದ್ದ ಸರ್ಕಾರ ಈಗ ಅದನ್ನು ಹೇಳಬಾರದೆಂದು ಸಮುದಾಯದತ್ತ ಶಾಲೆ ಸ್ಕೀಂನಲ್ಲಿ ಶಿಕ್ಷಕರಿಗೆ ಒತ್ತಡ ಹೇರುತ್ತಿರುವುದು ನಿಜ ಸಂಗತಿ ಮರೆ ಮಾಚುವ ನಿರ್ಧಾರ. ಮಕ್ಕಳು ಕೆಲವು ಶಾಲೆಗಳಿಗೆ ಬರುತ್ತಿಲ್ಲವೆಂದೇ ಇಟ್ಟುಕೊಳ್ಳೋಣ. ಯಾಕೆ ಬರುತ್ತಿಲ್ಲ ಎಂದು ಸಚಿವರಾದರೂ ಯೋಚಿಸಬಾರದೆ. ಇದ್ದುದರಲ್ಲೇ ಓದಲು ಪ್ರಯಾಸ ಪಡುವವರು, ನೆರೆಯ ಶಾಲೆಗಳಿಗೆ, ಪಕ್ಕದೂರಿಗೆ ಹೋಗಲು ಸಾಧ್ಯವೇ? ಶಾಲೆಯ ಬೇಡಿಕೆ ಕುಗ್ಗಿಲ್ಲ, ಬದಲಾಗಿ ಈಗಲೂ ಬೇಡಿಕೆ ಇದೆ. ಖಾಸಗಿ ಶಾಲೆಗಳು ನಾಯಿ ಕೊಡೆಗಳಂತೆ ಬೆಳೆಸಲು ಪೂರಾ ಅನುಮತಿ ನೀಡಿರುವುದು ಜನರನ್ನು ಅತ್ತ ತಳ್ಳುತ್ತಿರುವುದು ಸರ್ಕಾರವಲ್ಲವೇ? ಅಗಲೂ ಖಾಸಗೀಕರಣದ ಸುಲಿಗೆ ಧೋರಣೆಗೆ ಒತ್ತ ನೀಡಿರುವುದು ಕಾಣುವುದಲ್ಲವೇ? ಈಗ ಸಚಿವರು ಇರುವುದು ಇಲಾಖೆಯಲ್ಲಿ ಪ್ರಗತಿ ಸಾಧಿಸಲು ಅಲ್ಲ ಬದಲಾಗಿ ಬೇಗ ಅದನ್ನು ಮುಚ್ಚಿಹಾಕಿ, ಕೊನೆಗೆ ಸರ್ಕಾರದ ಎಲ್ಲವನ್ನೂ ಖಾಸಗಿಯವರಿಗೆ ಧಾರೆ ಎರೆಯಲು ನಡೆಸಿದ ಹುನ್ನಾರವಿರದೇ?

ಇಂತಹ 'ದೃಢ ಹೆಜ್ಜೆಗಳು' ಸಚಿವರ ಬೋಳು ಬುರುಡೆಯಿಂದ ಬಂದದ್ದೇನೂ ಅಲ್ಲ. ಐಎಂಎಫ್, ವಿಶ್ವಬ್ಯಾಂಕ್‌ಗಳು ಶಿಕ್ಷಣವನ್ನು ಸರ್ಕಾರ ಪೂರ್ತಿಯಾಗಿ ಕೈಬಿಟ್ಟ, ಅನುತ್ಪಾದಕವೆಂದು ಸಾರಿ ಖಾಸಗೀಕರಿಸಲು ಒತ್ತಾಯಿಸುತ್ತಿವೆ. ಹಣ ಕಡಿತ ಮಾಡಲು ಶರತ್ತು ಹಾಕಿ, ಒತ್ತಡ ಹೇರಿ, ಬಜೆಟ್‌ಗಳಲ್ಲಿ ಕಡಿತ ಮಾಡಲಾಗುತ್ತಿದೆ. ಈಗಾಗಲೇ ಅನುದಾನ ಪಡೆಯುತ್ತಿದ್ದ ಅಧ್ಯಾಪಕರ ವೇತನದ ಶೇ 15 ಕಡಿತವಾಗಿದೆ. ಇನ್ನೂ ಕಡಿತ ಮಾಡಲಾಗುವುದು ಎಂದು ಹೇಳಲಾಗುತ್ತಿದೆ. ಶಿಕ್ಷಕರ ನೇಮಕಾತಿ ನಿಲ್ಲಿಸಲಾಗಿದೆ. ಸರ್ಕಾರದ ಪ್ರಮಾಣವನ್ನು ಕಮ್ಮಿ ಮಾಡಬೇಕೆಂಬುದೇ ವಿಶ್ವಬ್ಯಾಂಕ್‌ನ ಒತ್ತಡ. ಶಿಕ್ಷಣ ಸಚಿವರು ಹಾಗೂ ಸರ್ಕಾರದ ಉತ್ಸಾಹ ನೋಡಿದರೆ ಇವರು ಇರುವುದು ಇಲಾಖೆ ಉಳಿಸಲೋ ಅಥವಾ ಮುಚ್ಚಲೋ ಎಂಬ ಪ್ರಶ್ನೆ ಕಾಡದಿರದು. ಇನ್ನಾದರೂ ಜನರ ನಿರೀಕ್ಷೆ, ಅಗತ್ಯಗಳಿಗೆ ಸ್ಪಂದಿಸಿ, ಶಾಲೆ ಮುಚ್ಚುವ ತಮ್ಮ ನಿರ್ಧಾರವನ್ನು ಕೈಬಿಡಲಿ.

ಮೇ ದಿನೋತ್ಸವ

ಈ ಸಂಚಿಕೆ...........

ಹೆಜ್ಜೆ ಹೆಜ್ಜೆಗೂ ರಕ್ತಕಾಣಿಕೆಯ ಅರ್ಪಿಸುತ್ತಿದೆ ಬದುಕು
ಆದರೂ ಕತ್ತಲೆಯೊಡನೆ ಹೋರಾಡುವ ಹಣತೆಗಳಿವೆ

- ಕವಿ ಸಾಹಿರ್ ಲೂದಿಯಾನ್ವಿ

ಜಗದ ದುಡಿವ ಜನರ ನಡುವೆ ಐಕ್ಯತೆ, ಸಮರಧೀರರಿಗೆ ಸೌಹಾರ್ದತೆ, ಬೆಳೆಸಿ, ಅವರ ಹಕ್ಕುಗಳು ದಕ್ಕಿಸಿಕೊಳ್ಳಲು ರಕ್ತಚೆಲ್ಲಿದರೂ,ಪ್ರಾಣ ಹೋದರೂ ಹಿಮ್ಮೆಟ್ಟದೆ ಸೆಣಸಿ ಗೆಲ್ಲಲು ಸ್ಫೂರ್ತಿ ನೀಡಿದ ಮಹಾನ್ ದಿನ ಮೇ ದಿನ. ಮತ್ತದರ ಪರಂಪರೆ. ಶತಶತಮಾನಗಳುದ್ದಕ್ಕೂ ನಿಲ್ಲದ ಈ ಹೋರಾಟ, ದುಡಿವ ಜನ ಬಂಡಾಯದ ಬಾವುಟ ಹಾರಿಸಿ ಹೊರಟ ಮೆರವಣಿಗೆ ಬೆಳೆಯುತ್ತಲೇ ಇದೆ. 'ತುಂಡು ಭೂಮಿಯಲ್ಲ, ಒಂದು ದೇಶವಲ್ಲ' ಇಡೀ ಭೂಗೋಳವನ್ನೇ ಗೆಲ್ಲುವ, ದಕ್ಕಿಸಿಕೊಳ್ಳುವ ಕ್ರಾಂತಿಕಾರಿ ಹೋರಾಟ. ಹಲವು ದೇಶವನ್ನು ಗೆದ್ದ ದುಡಿವ ವರ್ಗದ ಅಧಿಪತ್ಯದ ಸಮಾಜವಾದಿ ಸಮಾಜ ನಿರ್ಮಾಣದ ಅನುಭವ ಹೇಗೆ ಮರೆಯಲು ಸಾಧ್ಯ.

ಈ ನಡೆಯಲ್ಲಿ ಏಳು ಬೀಳುಗಳೂ ಇವೆ ನಿಜ. ಈ ನಡೆಯಲ್ಲಿ ವ್ಯವಸ್ಥೆ ಕುಸಿದ ನಂತರ ಲೋಕದ ಎಲ್ಲಾ ಪ್ರತಿಗಾಮಿಗಳು, ಸಾಮ್ರಾಜ್ಯಶಾಹಿಗಳೂ ತೋಳಗಳಂತೆ ಅರಚಿದವು, 'ಸಮಾಜವಾದಕ್ಕೆ ಸಾವು' ಎಂದು ತಮ್ಮನ್ನು ತಡೆವರಾರೂ ಇಲ್ಲ, ಸುಲಿಗೆಯ ದಾಸ್ಯದ ಈ ಬಂಡವಾಳಶಾಹಿಯೇ ಅಂತಿಮ ಘಟ್ಟವೆಂದರು. ಜಾಗತೀಕರಣದ ಮಂತ್ರದ ಮಂಕುಬೂದಿ ಎರಚಿ ಸ್ವರ್ಗ ಸೃಷ್ಟಿಸುವ ಮಾತನ್ನಾಡಿದರು. ಜಗತ್ತಿನ....ಎಲ್ಲವನ್ನೂ ಬಾಚುವ, ದೋಚುವ ದುಸ್ಸಾಹಸಕ್ಕೆ ಇಳಿದರು. ಇಂತಹ ದುಷ್ಟರ ಆಟಕ್ಕೆ ಭಾರತದಂತಹ ಹಲವು ದೇಶಗಳ ಆಳುವವರೂ ತಾಳಹಾಕಿ ಕುಣಿದರು. ಆದರೆ ಇದನ್ನೆದುರಿಸಿ ನಿಂತ ಕ್ಯೂಬಾ, ವಿಯೆಟ್ನಾಂ, ಚೀನಾದಂತಹ ಸಮಾಜವಾದಿ ದೇಶಗಳೂ ಇವೆ. ಆದರೀಗ ಈ ಜಾಗತೀಕರಣವೆಂಬುದು ಏನೆಂದು ತಿಳಿಯತೊಡಗಿದೆ. ದುಡಿವ ಕಾರ್ಮಿಕ, ರೈತ-ಕೂಲಿಕಾರ- ಯುವಜನ-ಮಹಿಳೆಯರು ಎಚ್ಚೆತ್ತು ಹೋರಾಟಕ್ಕೆ ಇಳಿದಿವೆ.

ಈ ಜಾಗತೀಕರಣ ದುಡಿವ ಜನರ ಪಾಲಿಗೆ ಏನು ತಂದಿದೆ ಎಂತಹ ಸ್ಥಿತಿ ನಿರ್ಮಿಸಿದೆ ಎಂಬುದನ್ನು ಬಿಡಿಸಿಡಲು ಒಂದು ಕಿರು ಯತ್ನ ನಡೆಸಿದೆ ದುಡಿವ ಜನರ ಪ್ರಾಣಮಿತ್ರ ಪತ್ರಿಕೆ. ಅದು ಅಮೆರಿಕಾದಲ್ಲಿ, ಭಾರತದಲ್ಲಿ ನಮ್ಮ ಕರ್ನಾಟಕದಲ್ಲಿ ಏನು ಸೃಷ್ಟಿಸಿದೆ ಎಂಬುದರ ಕೆಲವು ವರದಿಗಳು ಇಲ್ಲಿವೆ. ಆದ್ದರಿಂದಲೇ ಈ ಸಂಚಿಕೆಯ 'ಕೇಂದ್ರ ವಿಚಾರವೇ ಜಾಗತೀಕರಣ, ದುಡಿವ ಜನರ ಸ್ಥಿತಿ-ಗತಿ' ಎಂಬುದು. ಈ ಪರಿಣಾಮಗಳ ಬಗ್ಗೆ ಎಣಿ ಇಲ್ಲದಷ್ಟು ಲೇಖನಗಳನ್ನು ಹಿಂದೆ ಪ್ರಕಟಿಸಲಾಗಿದೆ.

ಹಾಗೆಯೇ ಕರ್ನಾಟಕದಲ್ಲಿ ಮೇ ದಿನ ಆಚರಿಸಿದ ಕೆಲವು ನೆನಪುಗಳನ್ನು ಹಿರಿಯ ಸಂಗಾತಿಗಳು ಇಲ್ಲಿ ಹಂಚಿಕೊಂಡಿದ್ದಾರೆ.

ಅಸ್ಪೃಶ್ಯತೆ, ಮಹಿಳಾ ಸಮಸ್ಯೆಗಳ ಬಗ್ಗೆ ಹಿಂದೆ ಮೇ ಸಂಚಿಕೆ ಪ್ರಕಟವಾಗಿದೆ. ಈ ಪುಟ್ಟ ಹಣತೆಯನ್ನು ತಾವು ಸ್ವಾಗತಿಸುವಿರೆಂದು ಆಶಿಸುತ್ತೇವೆ.

- ಸಂಪಾದಕ

ಕರ್ನಾಟಕ ಈ ವಾರ ಒಂದು ನೋಟ

ನಗರ ಸಭಾ ಚುನಾವಣೆಗಳು

ಎಸ್.ವೈ.ಗುರುಶಾಂತ್

ಜನರ ಕೈಗೆ ಅಧಿಕಾರ ನೀಡುವಲ್ಲಿ ಆಳುವವರು ನಡೆಸುವ ರಂಪಾಟವೇ ಅವರ ನಿಜ ಕಾಳಜಿಯನ್ನು ತೋರಿಸುತ್ತದೆ. ಅಂತೂ ಕೋರ್ಟ್‌ನ ಕಟೆಕಟೆ ಹತ್ತಿ ಅಲ್ಲಿಂದ ಬಯಿಸಿಕೊಂಡ ಮೇಲೆಯೇ ಈಗ ಮೇ 3 ರಂದು ನಗರಸಭೆಗಳ ಚುನಾವಣೆಗಳು ಘೋಷಿತವಾಗಿವೆ. ಹೋರಾಟವೂ ನಡೆದಿದೆ.

ಈಗ ಚುನಾವಣೆ ಇರುವುದು 3737 ಸ್ಥಾನಗಳಿಗೆ ಸ್ಪರ್ಧಿಸಿರುವ ಅಭ್ಯರ್ಥಿಗಳೇ 13ಸಾವಿರಕ್ಕೂ ಹೆಚ್ಚು. ಜನಸೇವೆ ಮಾಡಲು ಎಷ್ಟೊಂದು ಉತ್ಸಾಹ ಎಂದು ಹೇಳಬಹುದಾದರೂ, ಈ ರಾಜಕೀಯ ಅಧಿಕಾರವನ್ನು ಏಣಿಯಾಗಿ ಉಪಯೋಗಿಸುವ ಅಥವಾ ಸಾರ್ವಜನಿಕ ಆಸ್ತಿ, ಹಣ ಲಪಟಾಯಿಸಿ ಶ್ರೀಮಂತರಾಗುವ, ಸಾರ್ವಜನಿಕರ ಸೇವೆಗೆ ಶುಲ್ಕ ವಸೂಲು ಮಾಡಿಕೊಳ್ಳುವ ಇರಾದೆ ಇಲ್ಲದಿಲ್ಲ. ಎಷ್ಟೋ ಮುನಿಸಿಪಾಲಿಟಿಗಳು ಭ್ರಷ್ಟತೆಯ ಕಸದತೊಟ್ಟಿಗಳಾಗಿ ಮಾರ್ಪಾಡಾಗಿರುವುದು ಇವೆ. ಸಂಪನ್ಮೂಲಗಳಿಲ್ಲದೇ ಸೊರಗುತ್ತಿರುವ ಈ ನಗರಸಭೆಗಳ ಸ್ಥಾನ ಹಿಡಿಯಲು ಚುನಾವಣೆಯಲ್ಲಿ ಖರ್ಚು ಮಾಡುವ ಹಣದ ಪ್ರಮಾಣವೇ ನಿಜ ಉದ್ದೇಶ ಬಹಿರಂಗಪಡಿಸಿತು. ಎಲ್ಲದರಂತೆ ಇಲ್ಲೂ ಈ ಸ್ಥಿತಿ ಇದ್ದರೂ, ನಗರ ಸಭೆಗಳಿಗೆ ಜನಸಾಮಾನ್ಯರ ಹಿತಗಳನ್ನು, ಕಾಯಲು, ಮಹತ್ವದ ಪಾತ್ರವಿದೆ. ಹಾಗೆ ನೋಡಿದರೆ ಶುಚಿತ್ವ, ಆರೋಗ್ಯ, ಶಿಕ್ಷಣ, ನಾಗರೀಕ ಸೌಲಭ್ಯಗಳು, ಕ್ರೀಡೆ, ಮನರಂಜನೆ, ಅಲ್ಲದೇ ಕಾನೂನು-ಸುವ್ಯವಸ್ಥೆಯನ್ನು ನಿರ್ದೇಶಿಸುವ, ಹಕ್ಕು-ಅಧಿಕಾರ ಈ ಸಂಸ್ಥೆಗಳಿಗಿದೆ. ಆದರೆ ದುರಂತವೆಂದರೆ ಕಸ ಎತ್ತುವ ಕೆಲಸವಷ್ಟೇ ಮುನಿಸಿಪಾಲಿಟಿಗಳನ್ನು ಎನ್ನುವಂತೆ ಮಾಡಲಾಗಿದೆ.

ಇವೆಲ್ಲದರ ನಡುವೆ ಈ ಚುನಾವಣೆಯಲ್ಲಿ ಎಂತಹವರನ್ನು ಆರಿಸಬೇಕೆನ್ನುವುದು ಪ್ರಮುಖ ಪ್ರಶ್ನೆ. ಹೇಳಿಕೇಳಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೂ ಅಭಿವೃದ್ಧಿಯೆಂದರೆ ವಿಶ್ವಬ್ಯಾಂಕ್, ಐಎಂಎಫ್‌ನ್ನು ಬೇಡಿಕೊಂಡು ಹಣ ತರುವುದು ಎಂದೇ ನಂಬಿಸುತ್ತಿದ್ದಾರೆ. ನಗರಗಳ ಅಭಿವೃದ್ಧಿಗೆ ಈಗ ವಿಶ್ವಬ್ಯಾಂಕ್‌ನ ನೆರವನ್ನು ನೆಚ್ಚಿದ್ದಾರೆ ಪರಿಣಾಮ, ನೀರು ಪೂರೈಕೆ, ವಿದ್ಯುತ್, ರಸ್ತೆ ನಿರ್ವಹಣೆ, ಗೃಹನಿರ್ಮಾಣ, ಆಸ್ಪತ್ರೆಗಳ ಆಧುನೀಕರಣ ಈ ಹಣವನ್ನೇ ಪಡೆಯಲಾಗುತ್ತಿದೆ. ಈ ರಂಗವನ್ನೆಲ್ಲಾ ಕೃಷ್ಣರ ಕಾಂಗ್ರೆಸ್ ಸರ್ಕಾರ ಖಾಸಗಿಯವರಿಗೆ ಒಪ್ಪಿಸಲು ನಿರ್ಧರಿಸಿದೆ. ದೇಶ ವಿದೇಶದ ಕಂಪನಿಗಳ ಜೊತೆ ಒಪ್ಪಂದಗಳೇರ್ಪಟ್ಟಿವೆ. ಅವರು ವಿಧಿಸಿದ ಭಾರಿ ಶರತ್ತುಗಳಿಗೆ ಸರ್ಕಾರ ತಲೆಬಾಗಿದೆ. ಜನರನ್ನು ಸುಲಿಯಲು ಅವರಿಗೆ ಮುಕ್ತ ಪರವಾನಗಿ ನೀಡಲಾಗಿದೆ. ಅಂದರೆ ಇನ್ನು ನಗರಗಳ ಜನತೆಗೆ ವಾಹನ ಪಾರ್ಕಿಂಗ್, ಪಾರ್ಕ್‌ಗಳ ಪ್ರವೇಶವನ್ನು

ಪುಟ 10 ಕ್ಕೆ ನೋಡಿ

ಕಾರ್ಮಿಕರು ಅವರ ಕುಟುಂಬ ಭಾಗವಹಿಸುತ್ತಿದ್ದ ಮೇ ದಿನ

ದ.ಕ. ಜಿಲ್ಲೆಯಲ್ಲಿ ಮೇ ದಿನಾಚರಣೆ ಆರಂಭ

"ಹಿಂದೆ ಮಲಬಾರ್ ಪ್ರದೇಶಕ್ಕೆ ಸೇರಿದ ದ.ಕ. ಜಿಲ್ಲೆಯ ಪ್ರದೇಶಗಳಲ್ಲಿ ಸುಮಾರು ಅಂದಾಜು ಪ್ರಕಾರ 1943 ರಿಂದ ಮೇ ದಿನಾಚರಣೆಯ ಆಚರಣೆಯನ್ನು ಗುರುತಿಸಬಹುದು. ಕಮ್ಯೂನಿಸ್ಟ್ ಪಾರ್ಟಿ ಬ್ಯಾನ್ ಆಗಿದ್ದಾಗಲೂ (1948-51) ಮೇ ದಿನ ಮಾತ್ರ ಯಾವುದೇ ಕಾರಣದಿಂದ ಬ್ಯಾನ್ ಆಗಿರಲಿಲ್ಲ, ಕಾರ್ಮಿಕರು ತಮ್ಮ ದಿನಾಚರಣೆಯನ್ನು ಅತ್ಯಂತ ಉತ್ಸಾಹ, ಧೈರ್ಯದಿಂದ ಆಚರಿಸುತ್ತಿದ್ದರು. ಜಾತಿ, ಮತ ಭೇದ ಮರೆತು ತಮ್ಮದೇ ದಿನವೆಂದು ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಪ್ರಭಾತ್ ಭೇರಿ ಬಹಳ ಆಕರ್ಷಣೀಯ ಭಾಗ. ಜನ ಇದರಿಂದ ಬಡಿದೇಳುತ್ತಿದ್ದರು. ಅಂದು ಕಾರ್ಮಿಕರಷ್ಟೇ ಉತ್ಸಾಹದಿಂದ ಸಾರ್ವಜನಿಕರು ಭಾಗವಹಿಸುತ್ತಿದ್ದುದು ಮಹತ್ವದ ವಿಚಾರ. ಸ್ವಯಂ ಸೇವಕರು ಮೇ ದಿನಾಚರಣೆಯ ಎಲ್ಲಾ ಕೆಲಸಗಳಲ್ಲೂ ಸ್ಫೂರ್ತಿಯಿಂದ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ವೇದಿಕೆ ಸಿದ್ಧತೆ, ಪ್ರಚಾರ, ನಿಧಿ ಸಂಗ್ರಹ ಎಲ್ಲದರಲ್ಲೂ ಇವರದು ಉತ್ಸಾಹದ ಹೆಜ್ಜೆ. ಇವರೆಲ್ಲರ ಒಳಗೊಳ್ಳುವಿಕೆ, ಉತ್ಸಾಹ ಇಡೀ ದಿನಾಚರಣೆಗೆ ಹಬ್ಬದ ವಾತಾವರಣ ಕಲ್ಪಿಸುತ್ತಿತ್ತು. ಬೀದಿ ಗಲ್ಲಿಗಳಲ್ಲಿ ಸ್ಕ್ವಾಡ್ (ತಂಡ)ಗಳು ಸಂಚರಿಸಿ ಮೇಗಫೋನ್‌ನಲ್ಲಿ ಪ್ರಚಾರ ನಡೆಸುತ್ತಿದ್ದರು. ಅಕ್ಟೋಬರ್ ಕ್ರಾಂತಿಯ ದಿನಾಚರಣೆಯ ದಿನದಷ್ಟೇ ಇದು ಮಹತ್ವ ಪಡೆದಿತ್ತು"

"ಮೊದಮೊದಲು ಮೇ ದಿನಾಚರಣೆ ಮಾಡಲು ಪೋಲೀಸರು ಬಿಡುತ್ತಿರಲಿಲ್ಲ. ಬಿಡಿಬಿಡಿಯಾಗಿ ಹತ್ತಾರು ಕಿ.ಮಿ. ನಡೆದು ಅಲ್ಲಿ ಒಂದೆಡೆ ಸೇರಿ ಮೇ ದಿನ ಆಚರಿಸಿ ಬರಲಾಗುತ್ತಿತ್ತು.

- ಬಿ.ವಿ.ಕಕ್ಕಿಲಾಯ ನೆನಪಿನಿಂದ



ಹಂಚು, ಗೋಡಂಬಿ ಪ್ರೆಸ್, ಬೀಡಿ, ನೆಯ್ಗೆ ಹೀಗೆ ಎಲ್ಲಾ ವಿಭಾಗದ ಕಾರ್ಮಿಕರು ತಮ್ಮ ಕುಟುಂಬದೊಂದಿಗೆ ಬಂದು ಮೆರವಣಿಗೆ, ಸಭೆಯಲ್ಲಿ ಭಾಗವಹಿಸುತ್ತಿದ್ದರು. ಎಲ್ಲರೂ ಬ್ಯಾಡ್ಜ್ ಖರೀದಿಸುತ್ತಿದ್ದರು ಮಾತ್ರವಲ್ಲ ಅದನ್ನು ಉತ್ಸಾಹದಿಂದ ಧರಿಸುತ್ತಿದ್ದರು. ಕೆಂಬಾವುಟ ಎಲ್ಲರಲ್ಲೂ ಸ್ಫೂರ್ತಿ ತುಂಬುತ್ತಿತ್ತು. ಮುಖಂಡರ ಭಾಷಣಗಳನ್ನು ಉತ್ಸಾಹದಿಂದ ಆಲಿಸುತ್ತಿದ್ದರು. ಕೇಂದ್ರೀಕೃತ ಕಾರ್ಯಕ್ರಮವಲ್ಲದೆ ಪ್ರದೇಶ ಮಟ್ಟದಲ್ಲೂ ಮೇ ದಿನಾಚರಣೆಯಲ್ಲಿ ಕಾರ್ಮಿಕರು ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು.

- ಪಿ.ರಾಮಚಂದ್ರರಾವ್ ನೆನಪಿನಿಂದ

ಸೌಹಾರ್ದತೆ ಮತ್ತು ಸಂಘರ್ಷದತ್ತ ಕಾರ್ಮಿಕರು

2001 ಮೇ ದಿನಾಚರಣೆ ಬಹಳ ಮಹತ್ವದ್ದಾಗಿದೆ. ಮೇ ದಿನಾಚರಣೆಯಂದು ಕಾರ್ಮಿಕರು ಅಂತರ್ರಾಷ್ಟ್ರೀಯ ಹಾಗೂ ರಾಷ್ಟ್ರೀಯ ರಂಗದಲ್ಲಿ ಆದ ಬೆಳವಣಿಗೆಗಳನ್ನು ವಿಮರ್ಶಿಸಿ ಕಾರ್ಮಿಕರ ಹಕ್ಕುಗಳನ್ನು ಹಾಗೂ ಸಾಮ್ರಾಜ್ಯಶಾಹಿಗಳ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಶೋಷಣೆಯನ್ನು ವಿರೋಧಿಸುವ ದಿನ.

ಚಿಕಾಗೋ ನಗರದಲ್ಲಿ 1886ರಲ್ಲಿ ಮೊದಲ ಬಾರಿಗೆ 8 ಗಂಟೆ ಕೆಲಸಕ್ಕಾಗಿ ಹೋರಾಟ ಆರಂಭವಾಯಿತು. ಆಡಳಿತವರ್ಗದ ದಬ್ಬಾಳಿಕೆ ಮಾತ್ರವಲ್ಲದೆ, 4 ಜನ ಕಾರ್ಮಿಕರನ್ನು ಮಾರ್ಕೆಟ್‌ನಲ್ಲಿ ಗಲ್ಲಿಗೇರಿಸಲಾಯಿತು. ಪ್ರಪಂಚದ ಬಂಡವಾಳಶಾಹಿಗಳ ಧೋರಣೆಯನ್ನು ಎದುರಿಸ ಬೇಕಾದರೆ ಎಲ್ಲ ಕಾರ್ಮಿಕರು ಒಂದಾಗಬೇಕೆಂದು ಪ್ಯಾರಿಸಿನಲ್ಲಿ ಅಂತರ್ರಾಷ್ಟ್ರೀಯ ಸಭೆ ನಡೆಯಿತು. 8 ಗಂಟೆ ಕೆಲಸಮತ್ತು ಕಾರ್ಮಿಕರ ಇತರ ಹಕ್ಕುಗಳಿಗಾಗಿ ನಿರಂತರ ಹೋರಾಟ ನಡೆಸಲು ಪ್ರತಿಜ್ಞೆ ಮಾಡಿ ಜಗತ್ತಿನಾದ್ಯಂತ ಮೇ ಡೇ ನಡೆಸಲು ತೀರ್ಮಾನ ನಡೆಸಲಾಯಿತು.

ಕಳೆದ ಮೂರು ವರ್ಷಗಳಲ್ಲಿ ಜಗತ್ತಿನಲ್ಲಿ ಹಲವಾರು ಬದಲಾವಣೆಗಳು ಕಂಡು ಬಂದಿವೆ. 1917 ನೇ ಇಸವಿಯಲ್ಲಿ ಸೋವಿಯತ್ ಕ್ರಾಂತಿನಡೆದು ದುಡಿಯುವ ವರ್ಗ ಅಧಿಕಾರಕ್ಕೆ ಬಂದಿತು. ಎರಡನೇ ಮಹಾಯುದ್ಧದಲ್ಲಿ ಕಾಂ. ಸ್ಟಾಲಿನ್ ನಾಯಕತ್ವದಲ್ಲಿ ಫ್ಯಾಶಿಸ್ಟರ ಆಕ್ರಮಣವನ್ನು ಮುಂದುವರಿಸಲು ಬೀದಿ ಬೀದಿಯಲ್ಲಿ ಕಾಳಗ ನಡೆದು 2 ಮಿಲಿಯನ್ ಜನರುಹುತಾತ್ಮರಾದರು. ಮುಂದುವರೆದ ಹೋರಾಟದಿಂದಾಗಿ ಕೆಂಪು ಸೈನ್ಯ ಗೆಲುವಿನಿಂದ ಮುನ್ನುಗ್ಗಿ, ಫ್ಯಾಶಿಸ್ಟರನ್ನು ಪುಡಿಗುಟ್ಟಿತು, ಕೊನೆಗೆ ಹಿಟ್ಲರ್ ವಿಷ ತೆಗೆದುಕೊಳ್ಳುವಂತೆ ಮಾಡಿದ ರಷ್ಯಾ ಜನತೆಯ ಹೋರಾಟನಮ್ಮ ಮುಂದಿದೆ. ಮಾತ್ರವಲ್ಲ ಯುರೋಪಿನ 12 ರಾಷ್ಟ್ರಗಳನ್ನು ಕೆಂಪು ಸೇನೆ

ನಿತ್ಯ ಸಂಘರ್ಷದಲ್ಲಿ ಕಾರ್ಮಿಕ ವರ್ಗ



ವಿಮೋಚಿ ಮಾಡಿ ಸ್ವತಂತ್ರ ರಾಷ್ಟ್ರಗಳಾದವು. ಫಿಡೆಲ್ ಕ್ಯಾಸ್ಟ್ರೋ ನಾಯಕತ್ವದಲ್ಲಿ ಕ್ಯೂಬಾದಲ್ಲಿ ಅಲ್ಲಿಯ ಜನವಿರೋಧಿ ಸರ್ಕಾರವನ್ನು ಕಿತ್ತೊಗೆಯುವ ಕ್ರಾಂತಿಯಾಗಿದ್ದು ಇತಿಹಾಸ. ಹಾಗೇ ಚೀನಾದಲ್ಲಿ ನಡೆದ ಮಹಾನ್ ಕ್ರಾಂತಿ ಸಹ.

ಸೋವಿಯತ್ ಯೂನಿಯನ್‌ನಲ್ಲಿ ದುಡಿಯುವ ಸರ್ಕಾರ ಬಂದ ಮೇಲೆ ಕಾರ್ಮಿಕರಿಗೆ ಅನೇಕ ಸೌಲಭ್ಯಗಳು ದೊರೆತವು. ರೈತರಿಗೆ ಭೂಮಿ ಪ್ರಾಪ್ತಿಯಾಯಿತು. ಈ ಕ್ರಾಂತಿಯು ಮಿಕ್ಕೆಲ್ಲ ದೇಶಗಳ ಮೇಲೂ ಪ್ರಭಾವ ಬೀರಿತು. ಭಾರತ ದೇಶದ ಬಂಡವಾಳಶಾಹಿಗಳು ಇದನ್ನು ಗಮನಿಸಿ ಅನೇಕಸಾಮಾಜಿಕ ಸೌಲಭ್ಯಗಳನ್ನು ಕಾರ್ಮಿಕರಿಗೆ ಒದಗಿಸಿ ಕೊಟ್ಟರು. ಸಾಮ್ರಾಜ್ಯವಾದಿಗಳು ಭಾರತ ದೇಶವನ್ನು ಕೈಗಾರಿಕಾ ವಲಯದಿಂದ ಹೊರಗುಳಿಸಲು ಪ್ರಯತ್ನ ನಡೆಸಿದರೂ ಸೋವಿಯತ್ ಯೂನಿಯನ್ ಮತ್ತು ಇತರೆ ಯುರೋಪ್ ರಾಷ್ಟ್ರಗಳ ನೆರವಿನಿಂದ ಸಾರ್ವಜನಿಕ ವಲಯದಲ್ಲಿ ಕಾರ್ಖಾನೆಗಳು ಉದಯವಾಯಿತು. ಹಾಗೂ ನಮ್ಮ ದೇಶದ ಬಂಡವಾಳಶಾಹಿಗಳು ಮಿಶ್ರ ಆರ್ಥಿಕತೆ ಒಪ್ಪುವಂತಾದರು. ಹೀಗಾಗಿ ಭಾರತ ಕೈಗಾರಿಕಾವಲಯದಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವಾಯಿತು.

ಸೋವಿಯತ್ ರಾಷ್ಟ್ರಗಳ ಪತನದ ನಂತರ ಅಮೆರಿಕಾವು ಜಗತ್ತಿನ ಏಕೈಕ ಸೂಪರ್ ಪವರ್ ಆಗಿ ಐ.ಎಂ.ಎಫ್. , ವಿಶ್ವಬ್ಯಾಂಕ್, ಡಬ್ಲುಟಿಓ ಮುಂತಾದ ಸಂಸ್ಥೆಗಳು ಒತ್ತಡ ತಂದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸುಲಿಗೆ ಮಾಡುತ್ತಿರುವುದು ಹಾಗೂ ಆ ದೇಶಗಳ ಸಾರ್ವಭೌಮತ್ವ ಕಸಿಯುವ ಪ್ರಯತ್ನ ಮಾಡುತ್ತಿರುವುದ ಜನರಿಗೆ ತಿಳಿದ ಅಂಶ.

ನಮ್ಮ ದೇಶದಲ್ಲಿ ಪಂಡಿತ್ ಜವಹರಲಾಲ್ ನೆಹರೂಅವರ ಕಾಲದಲ್ಲಿ ಹತ್ತಿ ಗಿರಣಿ ಕಾರ್ಖಾನೆಗಳು ತಾಂತ್ರಿಕತೆಯ ಕೊರತೆಯಿಂದಾಗಿ ನಿರಂತರ ನಷ್ಟಗಳನ್ನು ಅನುಭವಿಸುತ್ತಿದ್ದ ಸಮಯದಲ್ಲಿ, ಆಧುನಿಕ ತಾಂತ್ರಿಕತೆಯನ್ನು ಅಳವಡಿಸಿಕೊಂಡು ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೋರೇಷನ್ ಆಗಿ ಪರಿವರ್ತನೆ ಗೊಂಡಿತು.

ಅದೇ ರೀತಿ ದೇಶದ ಆರ್ಥಿಕ ನೀತಿಯಲ್ಲಿ ಅಭಿವೃದ್ಧಿಗಳಾಗಿ ಬ್ಯಾಂಕ್ ರಾಷ್ಟ್ರೀಕರಣ ನಡೆಯಿತು. ದುರದೃಷ್ಟವೆಂದರೆ ಯಾವ ಸರ್ಕಾರವು ಈ ಕ್ರಮಗಳನ್ನು ತೆಗೆದುಕೊಂಡಿತ್ತೊ ಅದೇ ಸರ್ಕಾರವು ಐಎಂಎಫ್, ವಿಶ್ವಬ್ಯಾಂಕ್ ಮತ್ತು ಡಬ್ಲ್ಯುಟಿಓಗಳ ಒತ್ತಾಯಕ್ಕೆ ಮಣಿದು ಜಾಗತೀಕರಣ, ಖಾಸಗೀಕರಣ ಮುಂತಾದ ಕಾರ್ಮಿಕ ವಿರೋಧಿ ನೀತಿಗಳನ್ನು ಜನತೆಯ ಮೇಲೆ ಹೊರಸಿದ್ದಾರೆ.

ಲಾಭದಾಯಕವಾಗಿದ್ದ ಬ್ಯಾಂಕ್ ಉದ್ಯಮವನ್ನು ಖಾಸಗೀಕರಣ ಮಾಡುವುದು ದುರದೃಷ್ಟಕರ. ಇದೇ ರೀತಿ ಜೀವವಿಮೆಯನ್ನು ಹೊರದೇಶದ ಪೈಪೋಟಿಗೆ ಬಿಡಲು ತರಾತುರಿ ಶಾಸನಗಳನ್ನು ತಂದಿರುವುದು ಕರಾಳ ಸತ್ಯ. ಇತರ ದೇಶದ ಮಾಲುಗಳ ಆಮದುಗಳ ಮೇಲೆ ಇದ್ದ ನಿರ್ಬಂಧ ತೆಗೆದು ಶುಲ್ಕ ಕತ್ತರಿಸಿ ದೇಶದ ಕೈಗಾರಿಕೆಗಳು ಮುಚ್ಚುವ ಪರಿಸ್ಥಿತಿಯಲ್ಲಿದೆ. ಇದರ ಪರಿಣಾಮ ಈಗಾಗಲೇ ಸ್ಟೀಲ್ ಸೇಲ್ ಕೈಗಾರಿಕೆ ಅನುಭವಿಸುತ್ತಿದೆ. ಈನೀತಿಗಳ ವಿರುದ್ಧ ಅಥಾರಿಟಿ ನಮ್ಮ ರಾಷ್ಟ್ರದ ಕಾರ್ಮಿಕರು ಹೋರಾಟ ನಡೆಸುತ್ತಿದ್ದಾರೆ. ಅಂತರ್ ರಾಷ್ಟ್ರೀಯ ಮಟ್ಟದಲ್ಲೂ ಸಹ ಜಾಗತೀಕರಣದ ವಿರುದ್ಧನಿರಂತರ ಹೋರಾಟ ನಡೆಯುತ್ತಲೇ ಇದೆ. ಅಭಿವೃದ್ಧಿ ಹೊಂದದ ರಾಷ್ಟ್ರಗಳು ಅಂತರ್‌ರಾಷ್ಟ್ರೀಯ ಸಮ್ಮೇಳನಗಳನ್ನು ಏರ್ಪಡಿಸಿ ಈ ನೀತಿಗಳನ್ನು ಖಂಡಿಸುತ್ತಲಿವೆ. ಆದರೆ ಕೇಂದ್ರ ಸರ್ಕಾರದ ಆರ್ಥಿಕ ಮಂತ್ರಿಯಾದ ಯಶವಂತ ಸಿನ್ಹಾ ರವರು ನಮ್ಮ ದೇಶವನ್ನು ಒತ್ತೆ ಇಡಲು ಹೊರಟಿದ್ದಾರೆ. ಅದಕ್ಕೆ ಅನುಕೂಲವಾಗಿ ಕೈಗಾರಿಕಾ ಕಾಯ್ದೆಯನ್ನು ಬದಲಾಯಿಸುವ ಪ್ರಸ್ತಾಪವನ್ನು ಲೋಕಸಭೆಯಲ್ಲಿ ಈಗಾಗಲೇ ಮಂಡಿಸಿದ್ದಾರೆ. ಈ ಕಾಯ್ದೆ ಬದಲಾವಣೆ ಬಂದಲ್ಲಿ ಯಾವುದಾದರೂ ಕಾರ್ಖಾನೆ ಯಲ್ಲಿ ಒಂದು ಸಾವಿರಕ್ಕೂ ಕಡಿಮೆ ಕಾರ್ಮಿಕರು ಇದ್ದಲ್ಲಿ ಅವರಿಗೆ ಯಾವ ರಕ್ಷಣೆಯೂ ಇರುವುದಿಲ್ಲ. ಇಂತಹ ಕಾರ್ಖಾನೆಗಳನ್ನು ಮುಚ್ಚಲು ಅಥವಾ ಯಾವುದೇ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಲು ಸರ್ಕಾರದ ಪೂರ್ವಾನುಮತಿ ಬೇಕಿರುವುದಿಲ್ಲ. ನಿರಂತರವಾಗಿ ಕೆಲಸ ಇರುವುದಿಲ್ಲ. ಕಾಂಟ್ರಾಕ್ಟ್ ಕೆಲಸಗಾರರಿಂದ ಎಲ್ಲ ತರದ ಕೆಲಸಗಳನ್ನು ಮಾಡಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಹೈರ್ ಅಂಡ್ ಫೈರ್ ನೀತಿಯನ್ನು ಅನುಸರಿಸಿ ಅಮೇರಿಕದ ಜ್ಯೂನಿಯರ್ ಪಾರ್ಟನರ್ ಆಗಲು ಹೊರಟಿದೆ.

ನಮ್ಮ ರಾಜ್ಯ ಸರ್ಕಾರವು ಈ ದಿಕ್ಕಿನಲ್ಲಿ ಹಿಂದುಳಿದಿಲ್ಲ. ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಕೇಂದ್ರಸರ್ಕಾರದ ಕಾರ್ಮಿಕ ವಿರೋಧಿ ಬಜೆಟ್‌ನ್ನು ಸ್ವಾಗತಿಸಿದ್ದಾರೆ. ಆದರೆ ನಮ್ಮ ಕಾರ್ಮಿಕರು ಇದಕ್ಕೆ ತೀವ್ರ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಹಾಗೂ ಕೇಂದ್ರ ಸರ್ಕಾರದ ಧೋರಣೆಯ ವಿರುದ್ಧ ಏಪ್ರಿಲ್ 16 ರಂದು ಎರಡು ಗಂಟೆ ಕೆಲಸನಿರತ ನಿರಶದನಲ್ಲಿ ಭಾಗವಹಿಸಿದ್ದಾರೆ.

ಖಾಸಗೀಕರಣ, ಜಾಗತೀಕರಣ ಮುಂತಾದ ನೀತಿಗಳಿಂದಾಗಿ ಕೈಗಾರಿಕೆಗಳು ಮುಚ್ಚಿ ನಿರುದ್ಯೋಗ ಹೆಚ್ಚುತ್ತಿರುವುದರ ವಿರುದ್ಧ ಏಪ್ರಿಲ್ 25 ರಂದು ಮಹಾರಾಷ್ಟ್ರ ಬಂದ್ ನಡೆಯಿತು. ಎನ್‌ಡಿಎ ಸಹ ಭಾಗಿಗಳಾಗಿರುವ ಶಿವಸೇನೆಯು ಈ ಹೋರಾಟದಲ್ಲಿ ಭಾಗವಹಿಸಬೇಕಾಗಿ ಬಂತು. ಬಿಜೆಪಿಯ ಕಾರ್ಮಿಕ ಸಂಘಟನೆಯ ಬಿ.ಎಂ.ಎಸ್. ಕೂಡ ಈ ಬಂದ್‌ನಲ್ಲಿ ಸಕ್ರಿಯವಾಗಿ ಪಾಲ್ಗೊಂಡಿತು. ಇದು ಮಹಾರಾಷ್ಟ್ರ ಜನತೆ ಎನ್ರಾನ್ ವಿರುದ್ಧ ಮತ್ತು ಕೇಂದ್ರ ಸರ್ಕಾರದ ಕರಾಳ ನೀತಿಗಳ ವಿರುದ್ಧ ಹೋರಾಟಕ್ಕೆ ಸಿದ್ಧವಾಗಿದೆ ಎನ್ನುವುದನ್ನು ನಿರೂಪಿಸಿದೆ.

ಲಾಭ ಸಂಪಾದಿಸುತ್ತಿದ್ದ ಬಾಲ್ಕೊ ಕಂಪನಿಯನ್ನು ಸ್ಟರ್‌ಲೈಟ್ ಕಂಪನಿಗೆ ಕೇವಲ 551 ಕೋಟಿಗೆ ಮಾರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಕಾರ್ಮಿಕರು 45 ದಿನಗಳಿಂದ ಪ್ರತಿಭಟಿಸುತ್ತಿದ್ದಾರೆ. ಈ ಹೋರಾಟ ಆರ್ಥಿಕ ಬೇಡಿಕೆಯ ಹೋರಾಟವಲ್ಲ, ಸಿದ್ಧಾಂತದ ಹೋರಾಟ. ನಮ್ಮ ದೇಶದ ದುಡಿಯುವ ವರ್ಗ ಈ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಿ ಹಣ ಸಹಾಯವನ್ನು ಸಹ ಮಾಡಿರುತ್ತಾರೆ.

ಹಳೆ ಮೈಸೂರು ರಾಜ್ಯದಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರು ಕೈಗಾರಿಕಾ ಕ್ರಾಂತಿಯನ್ನು ಕೈಗೊಂಡರು. ಇದರ ಪರಿಣಾಮವಾಗಿ ಮೈಸೂರ್ ಪೇಪರ್ ಮಿಲ್ಸ್ ಮತ್ತು ಮೈಸೂರು ಲ್ಯಾಂಪ್ಸ್ ಕೈಗಾರಿಕೆಗಳು ಸ್ಥಾಪಿತವಾದವು. ನಮ್ಮ ರಾಜ್ಯ ಸರ್ಕಾರವು ರಾಜ್ಯದ ಸ್ವಾಮ್ಯದಲ್ಲಿರುವ 15 ಉದ್ದಿಮೆಗಳನ್ನು ಖಾಸಗೀಕರಣ ಮಾಡಲು ಹೊರಟಿದ್ದಾರೆ. ಎನ್‌ಜಿಇಎಫ್, ಎಂಪಿಎಂ, ಮೈಸೂರು ಲ್ಯಾಂಪ್ಸ್, ಕರ್ನಾಟಕ ಸಾಬೂನು ಕಾರ್ಖಾನೆ, ಮಂಡ್ಯ ನ್ಯಾಷನಲ್ ಪೇಪರ್ ಮಿಲ್ ಮುಂತಾದ ಕಾರ್ಖಾನೆಗಳು ಈಗಾಗಲೇ ಮುಚ್ಚಿವೆ. ಇದನ್ನು ವಿರೋಧಿಸಿ ಕಾರ್ಮಿಕರು ಹೋರಾಟ ಸಮಿತಿಯನ್ನು ರಚಿಸಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾರೆ.

ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿಗಳು ಲಾಭ ಗಳಿಸುತ್ತಿರುವ ಎಲ್ ಅಂಡ್ ಟಿ ಕಾರ್ಖಾನೆಯನ್ನು ಜಾಯಿಂಟ್ ವೆಂಚರ್ ಆಗಿ ಜಪಾನಿನ ಕೊಮ್ಯಾಟ್ಸೋ ಜೊತೆ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ನಮ್ಮ ರಾಜ್ಯದ ಸಣ್ಣ ಸ್ಟೀಲ್ ಕಾರ್ಖಾನೆಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರದ ನೀತಿಗಳಿಂದಾಗಿ ಮುಚ್ಚುವ ಸ್ಥಿತಿಯಲ್ಲಿವೆ. ಇತರೆ ಸಣ್ಣ ಕೈಗಾರಿಕೆಗಳು ರಕ್ಷಣೆಯಿಲ್ಲದೆ ಶೇಕಡ 50 ರಷ್ಟು ಮುಚ್ಚಲ್ಪಟ್ಟಿವೆ. ಇದರಿಂದಾಗಿ ನಿರುದ್ಯೋಗ ಪೆಡಂಭೂತವಾಗಿ ಬೆಳೆದಿದೆ.

ಕೇಂದ್ರದ ಸರ್ಕಾರದ ಹೊಸ ಆರ್ಥಿಕ ನೀತಿಯ ಬಿಸಿ ಮೈಕೊ ಸಂಸ್ಥೆಗೂ ತಟ್ಟಿದೆ. ಮೈಕೊ ಕಂಪನಿ ಈಗಾಗಲೇ ವಾರದಲ್ಲಿ 5 ದಿವಸಗಳಿಗೆ ಕೆಲಸವನ್ನು ಘೋಷಿಸಿದೆ. ಹೊರ ದೇಶದ ಮಾಲುಗಳ ಮೇಲೆ ನಿರ್ಬಂಧಗಳನ್ನು ತೆರೆದು ನಮ್ಮ ಕೈಗಾರಿಕೆಗಳ ಮೇಲೆ ಕೆಟ್ಟ ಪರಿಣಾಮವನ್ನು ಬೀರುವಂತೆ ಮಾಡಿದೆ. ಮುಂದುವರೆದು 75 ವರ್ಷಗಳ ಹೆಸರಾಂತ ಮೈಸೂರ್ ಕಿರ್ಲೋಸ್ಕರ್ ಕಂಪನಿಯು ದಿವಾಳಿಯಾಗಿದೆ.

ನಮ್ಮ ರಾಜ್ಯದಲ್ಲಿ ಒಂದೆರಡು ಹತ್ತಿ ಗಿರಣಿಗಳನ್ನು ಉಳಿದು ಮಿಕ್ಕೆಲ್ಲವೂ ಮುಚ್ಚಿವೆ. ಹಿಂದೆ



ದಾವಣಗೆರೆಯು ಹತ್ತಿ ಗಿರಣಿಗಳ ಕೇಂದ್ರವಾಗಿತ್ತು. ಈಗ ಒಂದು ಗಿರಣಿಯೂಉಳಿದಿಲ್ಲ. ಐಎಂಎಫ್, ವಿಶ್ವಬ್ಯಾಂಕ್ ಜೊತೆಗೆ ಕೇಂದ್ರ ಸರ್ಕಾರವು ಡಬ್ಲ್ಯುಟಿಓ ಒಪ್ಪಂದಕ್ಕೆ ಸಹಿ ಹಾಕಿ ಕೈಗಾರಿಕೆಗಳಿಗೆ ಮಾತ್ರವಲ್ಲ ಕೃಷಿ ಉತ್ಪನ್ನಗಳ ಮೇಲೆಯೇ ತನ್ನ ಬಿಸಿ ಮುಟ್ಟಿಸಿ ಕಾಫಿ ಬೆಳೆಗಾರರು ದಾರಿ ಕಾಣದೆ ತಮ್ಮರಕ್ಷಣೆಗಾಗಿ ಸಮಾವೇಶಗಳನ್ನು ನಡೆಸುತ್ತಿದ್ದಾರೆ. ಹೋರಾಟಕ್ಕೆ ಇಳಿದಿದ್ದಾರೆ. ಅದೇ ರೀತಿ ಎಣ್ಣೆ ಕೈಗಾರಿಕೆಗಳು ಸ್ಥಗಿತಗೊಂಡಿವೆ. ಅಡಿಕೆ, ತೆಂಗು, ತೊಗರಿ ಮುಂತಾದವುಗಳ ಬೆಲೆ ಕುಸಿದಿದೆ. ರೈತರು ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದರ ವಿರುದ್ಧ ರಾಜ್ಯದಲ್ಲಿ ರೈತರು ಸಾಕಷ್ಟು ಹೋರಾಟ ನಡೆಸುತ್ತಿದ್ದಾರೆ. ಪೋಲೀಸರ ಲಾಠಿ ಏಟುಗಳನ್ನು ತಿಂದರೂ ಸಹ ಬಿಡದೆ ಹೋರಾಟ ನಡೆಸುತ್ತಿದ್ದಾರೆ.

ನಮ್ಮ ದೇಶ ಸ್ವಾವಲಂಬಿ ಆಗಬೇಕಾದರೆ ದುಡಿಯುವ ವರ್ಗ ಹೋರಾಟದ ಮುಂಚೂಣಿ ಯಲ್ಲಿರಬೇಕಾಗುತ್ತದೆ. ರೈತ-ಕೂಲಿಕಾರರ ರಕ್ಷಣೆಗೆ ಕಾರ್ಮಿಕರು ಹೋರಾಡಬೇಕು. ಈ ಹೋರಾಟಗಳ ಅಲೆ ಬೇರೆ ಕಡೆ ಸೆಳೆಯಲು ಕೋಮುವಾದಿ ಶಕ್ತಿಗಳು ಅಯೋಧ್ಯೆ ರಾಮಮಂದಿರ ಅಲ್ಪಸಂಖ್ಯಾತ ಕ್ರಿಶ್ಚಿಯನ್ನರು ಮತ್ತು ಮುಸಲ್ಮಾನರ ಮೇಲೆ ಹಲ್ಲೆ ನಡೆಸುತ್ತಿದ್ದಾರೆ. ದುಡಿಯುವ ವರ್ಗ ಈ ಶೋಷಣೆಯನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಈ ಮೇ ದಿನದಂದು ಹೊಸ ಆರ್ಥಿಕ ನೀತಿಗಳ ವಿರುದ್ಧ ಹೋರಾಡುವುದರ ಜೊತೆಗೆ ಕೋಮು ವಾದದ ವಿರುದ್ಧ ಸಹ ಹೋರಾಟ ಬೇಕಾಗಿದೆ.

ದುಡಿಯುವ ವರ್ಗದ ಐಕ್ಯತೆಗಾಗಿ ಶ್ರಮಿಸೋಣ. ಕೋಮುವಾದ ಶಕ್ತಿಗಳ ವಿರುದ್ಧ ಆಂದೋಲನ ನಡೆಸೋಣ, ಮುಚ್ಚಿರುವ ಕಾರ್ಖಾನೆಗಳನ್ನು ತೆಗೆಸಲು ಪ್ರತಿಜ್ಞೆ ಮಾಡೋಣ, ರೈತರಿಗೆ ಸೂಕ್ತ ಬೆಲೆ ಸಿಗುವಂತೆ ಹೋರಾಡೋಣ. ○

ನುಗ್ಗಿಮುಂದೆ

ನುಗ್ಗಿ ಮುಂದೆ ನುಗ್ಗಿ ಮುಂದೆ
ಶ್ರಮಿಕರೆಲ್ಲ ಒಂದೇ
ಒಂದೆ ಗುರಿ ಒಂದೆ ಮನ
ಶ್ರಮಿಕ ಪ್ರಭುತ್ವವ ಕಟ್ಟಲು ಇಂದೇ
ಗಡಿಯಿಲ್ಲ ಗುಡಿಯಿಲ್ಲ
ದೇಶಕೋಶಗಳಿಲ್ಲ
ಶೋಷಿತರು ನಾವೆಲ್ಲರೊಂದೇ
ಮಿಂಚಾಗಿ ಹೊಳೆದು
ಸಿಡಿಲಾಗಿ ಸಿಡಿದು ನಿಲ್ಲಿ
ಮುಗಿಲೊಡೆದು ಬನ್ನಿ
ಕೆಂಬಾವುಟವ ಹಿಡಿದು ತನ್ನಿ
ಗುಡ್ಡಗಳನ್ನೊದ್ದು
ಬೆಟ್ಟಗಳ ಕಿತ್ತು
ಸಮತೆ ಬಿತ್ತ ಬನ್ನಿ
ಸುಳಿಗಾಳಿಯಾಗಿ
ಕಡಲುಕ್ಕಿ ಬನ್ನಿ
ಉಳುವವನೆಲದೊಳಗಿಂದ
ಕುದಿವ ಕುಲುಮೆಗಳಿಂದ
ಕೆಂಡದುಂಡೆಗಳಾಗಿ
ಕುಡುಗೋಲು ಸುತ್ತಿಗೆಯ
ಹಿಡಿದು ಬನ್ನಿ.

- ಚಾರುಕೀರ್ತಿ

ಮಹಾರಾಷ್ಟ್ರದಲ್ಲಿ ಅಭೂತಪೂರ್ವ ಬಂದ್

ಜನರನ್ನು ಹುರಿದು ಮುಕ್ಕುವ ಕೇಂದ್ರ-ರಾಜ್ಯಗಳ ಉದಾರೀಕರಣದ ನೀತಿಗಳಿಗೆದುರಾಗಿ ಸೆಡ್ಡುಹೊಡೆದು ಪ್ರತಿರೋಧ ಒಡ್ಡಿದ ಗಮನಾರ್ಹ ಕಾರ್ಯಾಚರಣೆ ಈ ಮಹಾರಾಷ್ಟ್ರ ಬಂದ್.

ಏಪ್ರಿಲ್ 25 ರಂದು ಮಹಾರಾಷ್ಟ್ರ ಸಂಪೂರ್ಣ ಬಂದ್ ಆಚರಿಸಿತು. ದೇಶದ ಅತ್ಯಂತ ಚಟುವಟಿಕೆಯಿಂದ ಕೂಡಿದ ನಗರ ಮುಂಬೈ ಸಂಪೂರ್ಣ ಸ್ತಬ್ದಗೊಂಡಿತು. ಅಲ್ಲಿಯ ಒಂದೂವರೆ ಕೋಟಿ ಕಾರ್ಮಿಕರು ಕಾರ್ಮಿಕ ಸಂಘಗಳ ಜಂಟಿ ಕಾರ್ಯಾಚರಣೆ ಸಮಿತಿ ಮತ್ತು ಒಂಭತ್ತು ಪಕ್ಷಗಳಿಂದ ಜಾಗತೀಕರಣ-ವಿರೋಧಿ ಕಾರ್ಯಾಚರಣೆ ಸಮಿತಿಯ ಕರೆಯ ಮೇರೆಗೆ ಸಂಪೂರ್ಣ ಮುಷ್ಕರ ನಡೆಸಿದರು. ರಾಜ್ಯದ ಇತರ ಎಲ್ಲಾ ಕಡೆಗಳಲ್ಲೂ ಕಾರ್ಮಿಕರು, ರೈತರು, ಕೃಷಿಕೂಲಿಕಾರರು, ಮಹಿಳೆಯರು, ಯುವ ಜನತೆಯಿಂದ ಬಂದ್ ಕರೆಗೆ ಭಾರೀ ಸ್ಪಂದನ ದೊರೆಯಿತು. ಕೇಂದ್ರದ ಎನ್‌ಡಿಎ ಸರಕಾರದ ಕಾರ್ಮಿಕ ವಿರೋಧಿ, ಜನ-ವಿರೋಧಿ ನೀತಿಗಳ ವಿರುದ್ಧ ನೀಡಿದ್ದ ಈ ಬಂದ್ ಕರೆಯಲ್ಲಿ ಎನ್ ಡಿಎ ಭಾಗವಾದ ಶಿವಸೇನೆಯ ಕಾರ್ಮಿಕ ಸಂಘಟನೆಯೂ ಭಾಗಿಯಾಗಿತ್ತು.

ಇದು ಅನಿವಾರ್ಯವೂ ಆಗಿತ್ತು. ಏಕೆಂದರೆ ಮಹಾರಾಷ್ಟ್ರದ ಜನತೆ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ತಮ್ಮ ಅಸಂತೋಷವನ್ನು ತೋರಿದ್ದು ಇದೇ ಮೊದಲಲ್ಲ. ಕಳೆದ ಮೂರು ತಿಂಗಳಲ್ಲಿ ಹಲವು ರೀತಿಯ ಕಾರ್ಯಾಚರಣೆಗಳಲ್ಲಿ ಅವರು ಉತ್ಸಾಹದಿಂದ ಭಾಗವಹಿಸಿದ್ದಾರೆ. ಅದರಿಂದಾಗಿ ಶಿವಸೇನೆಯೂ ಈ ಪ್ರತಿಭಟನಾ ಕಾರ್ಯಾಚರಣೆಯಲ್ಲಿ ಭಾವಹಿಸಿದೇ ಇರಲು ಸಾಧ್ಯವಿಲ್ಲದಂತಹ ವಾತಾವರಣ ಸೃಷ್ಟಿಯಾಯಿತು.


ರೈತರನ್ನು, ಕೃಷಿಕೂಲಿಕಾರರನ್ನು, ಕಾರ್ಮಿಕರನ್ನು ವಿನಾಶದ ಹಾದಿಯಲ್ಲಿ ಒಯ್ಯುತ್ತಿರುವ ಬಿಜೆಪಿ ನೇತೃತ್ವದ ಸರಕಾರದ ಎರಡನೇ ತಲೆಮಾರಿನ ಸುಧಾರಣೆಗಳ ವಿರುದ್ಧ, ಆಮದು ಉದಾರೀಕರಣದ ವಿರುದ್ಧ, ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡುವ ಪ್ರತಿಗಾಮಿ ಪ್ರಯತ್ನಗಳ ವಿರುದ್ಧ, ತೆಹಲ್ಕಾ ಬಯಲಿಗೆ ತಂದ ಹಗರಣ, ಭ್ರಷ್ಟಾಚಾರದ ವಿರುದ್ಧ ಹಾಗೂ ಎನ್ರೋನ್ ವ್ಯವಹಾರವನ್ನು ರದ್ದುಮಾಡಬೇಕೆಂದು ಒತ್ತಾಯಿಸಿ ಈ ಎಲ್ಲಾ ಕಾರ್ಯಾಚರಣೆಗಳು ನಡೆದವು.

ಫೆಬ್ರವರಿ 15 ರಂದು ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿ (TUJAC) ಮುಂಬೈಯಲ್ಲಿ ಒಂದು ಕಾರ್ಮಿಕರ ರ್‍ಯಾಲಿ ನಡೆಸಿತ್ತು. ಒಂದು ತಿಂಗಳ ನಂತರ ನಗರದ ಆರು ಕಡೆಗಳಿಂದ ಬಂದ ಜಾಥಾಗಳು ಆಝಾದ್ ಮೈದಾನಿನಲ್ಲಿ ಸೇರಿ ಇನ್ನೊಂದು ರ್‍ಯಾಲಿ ನಡೆಯಿತು. ಈ ರ್‍ಯಾಲಿ ಏಪ್ರಿಲ್ 25 ರಂದು ಮುಂಬೈ ಬಂದ್‌ಗೆ ಕರೆ ನೀಡಿತು. ಟಿಯುಜೆಎಸಿ ನಂತರ ಈ ಕರೆಯನ್ನು ವಿಸ್ತರಿಸಿ ಈ ಮಹಾರಾಷ್ಟ್ರದಾದ್ಯಂತ ಕೈಗಾರಿಕಾ ಕಾರ್ಯಾಚರಣೆಗೆ ಕರೆ ನೀಡಿತು. ಈ ವರೆಗೆ ಕಾರ್ಮಿಕರು ತೋರಿದ ಉತ್ಸಾಹ ಕಂಡ ಇಂಟಕ್, ಹೆಚ್.ಎಂ.ಎಸ್. ಮತ್ತು ಶಿವಸೇನೆಯ ಕಾರ್ಮಿಕ ಸಂಘವೂ ಈ ಬಂದ್ ಕರೆಗೆ ಬೆಂಬಲ ಸಾರಿದವು.

ಅತ್ತ ಒಂಭತ್ತು ಎಡ ಮತ್ತು ಧರ್ಮನಿರಪೇಕ್ಷ ಪಕ್ಷಗಳಿಂದ ಜಾಗತೀಕರಣ ವಿರೋಧಿ ಕಾರ್ಯಾಚರಣೆಗೆ ಸಮಿತಿ ರಾಜ್ಯಾದ್ಯಂತ ಪ್ರತಿಭಟನಾ ಕಾರ್ಯಕ್ರಮಗಳನ್ನು ರೂಪಿಸಿತ್ತು. ಸಿಪಿಐ(ಎಂ), ಸಿಪಿಐ, ಪಿ.ಡಬ್ಲ್ಯು.ಸಿ., ಜನತಾದಳ(ಎಸ್), ಸಮಾಜವಾದಿ ಪಕ್ಷ, ಆರ್.ಪಿ.ಐ(ಅಠಾವಳೆ), ಕಾಮಗಾರ್ ಅಘಾಡಿ, ಲಾಲ್ ನಿಶಾನ್ ಪಾರ್ಟಿ(ಲೆನಿನಿಸ್ಟ್) ಮತ್ತು ಸಮಾಜವಾದಿ ಜನ ಪರಿಷತ್ ಇರುವ ಈ ಸಮಿತಿಯ ಕರೆಯ ಮೇರೆಗೆ **ಮಾರ್ಚ್ 1 ರಂದು ಎನ್ರೋನ್ ವಿರೋಧಿ ದಿನ**ವನ್ನು ರಾಜ್ಯದ ಎಲ್ಲಾ ತಾಲ್ಲೂಕು, ತಹಸಿಲ್‌ಗಳಲ್ಲಿ ಆಚರಿಸಲಾಯಿತು. ಧಭೋಲ್‌ನಲ್ಲಿ ಎನ್ರೋನ್ ಸ್ಥಾವರದ ಎದುರೂ ಬೃಹತ್ ಮತ ಪ್ರದರ್ಶನ ನಡೆಯಿತು. ಇದಕ್ಕೆ ಮೊದಲು ಎನ್ರೋನ್ ಮತ್ತು ಜಾಗತೀಕರಣದ ವಿರುದ್ಧ 20 ಜಿಲ್ಲಾ ಮಟ್ಟದ ಸಮಾವೇಶಗಳಲ್ಲಿ ಸಾವಿರಾರು ಜನ ಭಾಗವಹಿಸಿದರು.

ನಂತರ ಏಪ್ರಿಲ್ 7 ರಂದು ಈ ಒಂಭತ್ತು ಪಕ್ಷಗಳು ಮುಂಬೈಯ ಶಿವಾಜಿ ಪಾರ್ಕ್‌ನಲ್ಲಿ ಏರ್ಪಡಿಸಿದ್ದ ಬೃಹತ್ ರ್‍ಯಾಲಿಯಲ್ಲಿ 60,000 ಜನ ಭಾಗವಹಿಸಿದ್ದರು. ಈ ರ್‍ಯಾಲಿ ಕೇಂದ್ರದಲ್ಲಿನ ಕೊಳೆತುನಾರುವ ಭ್ರಷ್ಟಾಚಾರವನ್ನು, ಉದಾರೀಕರಣ ನೀತಿಗಳನ್ನು ಬಲವಾಗಿ ಖಂಡಸಿದ್ದು ಮಾತ್ರವಲ್ಲದೆ ರಾಜ್ಯ ಸರ್ಕಾರವೇ ಇಂತಹ ನೀತಿಗಳನ್ನು ಅನುಸರಿಸಬೇಡಿ, ಎನ್ರೋನ್ ವ್ಯವಹಾರವನ್ನು ರದ್ದು ಮಾಡಿ ಎಂದು ಎಚ್ಚರಿಸಿತು. ಈ ರ್‍ಯಾಲಿ ಕೂಡಾ ಏಪ್ರಿಲ್ 25 ರಂದು "ಮಹಾರಾಷ್ಟ್ರ ಬಂದ್" ಆಚರಿಸುಲ ಕರೆ ನೀಡಿತು.

ಈ ನಡುವೆ ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿಕೂಲಿಕಾರರ ಸಂಘದ



ಬಿಕೋ ಎನ್ನುತ್ತಿರುವ ಮುಂಬೈನ ಹೆದ್ದಾರಿ

ಕರೆಯಮೇರೆಗೆ ರೈತರೂ ಕೃಷಿಕೂಲಿಕಾರರೂ ಎಲ್ಲಾ ತಹಸೀಲ್‌ಗಳಲ್ಲಿ ಭಾರಿ ಮತಪ್ರದರ್ಶನ ನಡೆಸಿದರು.

ಹೀಗೆ **ಕಳೆದ ಮೂರು ತಿಂಗಳಿಂದ ರಾಜ್ಯಾದ್ಯಂತ ಎದ್ದುಬಂದ ಹೋರಾಟಗಳ ಅಲೆಯ ಕೊನೆಯ ಬಿಂದು ಏಪ್ರಿಲ್ 25 ರ 'ಮಹಾರಾಷ್ಟ್ರ ಬಂದ್'** ಅಂದು ಮಹಾರಾಷ್ಟ್ರದ ದುಡಿಯುವ ಜನ 960 ಕೋಟಿ ರೂಪಾಯಿಗಳ ಲಂಚದ ಆರೋಪವಿರುವ ಎನ್ರೋನ್ ಯೋಜನೆಯನ್ನು ರದ್ದು ಮಾಡಿ ಇದಕ್ಕೆ ಅನುಮತಿ ನೀಡಿದ ಎಲ್ಲರ ತನಿಖೆ ಮಾಡಿ ತಪ್ಪಿತಸ್ಥರನ್ನು ಜೈಲಿಗೆ ಕಳಿಸಿ ಎಂದು ಆಗ್ರಹಿಸಿದರು. ಇಂತಹ ಜನರನ್ನು ಸುಲಿಯುವ ವ್ಯವಹಾರಗಳಿಗೆ ಅವಕಾಶ ನೀಡುವ ಉದಾರೀಕರಣ ನೀತಿಗಳನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು; ಬಹುರಾಷ್ಟ್ರೀಯ ಕಂಪನಿಗಳನ್ನು, ದೇಶಿ ಗುತ್ತೇದಾರರನ್ನು ಮೆಚ್ಚಿಸಲು ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡೀರಿ ಜೋಕೆ ಎಂದು ಎಚ್ಚರಿಸಿದರು. ಏಪ್ರಿಲ್ 25 ರಂದು ಮಹಾರಾಷ್ಟ್ರದ ಜನತೆ ಇನ್ನೊಂದು ನಿರ್ಣಾಯಕ ಹೆಜ್ಜೆ ಮುಂದಿಟ್ಟರು.

"ನಮ್ಮ ಮುಂದಿರುವ ಅಪಾಯ ಅಭೂತಪೂರ್ವವಾದದ್ದು. ಅದರ ವಿರುದ್ಧ ಹೋರಾಟದ ವಿಸ್ತಾರ ಮತ್ತು ತೀವ್ರತೆಯೂ ಅಷ್ಟೇ ಅಭೂತಪೂರ್ವವಾಗಿರಬೇಕು" ಎಂದು ಏಪ್ರಿಲ್ 7 ರ ರ್‍ಯಾಲಿಯಲ್ಲಿ ಮುಖಂಡರು ನೀಡಿದ ಕರೆಗೆ ಓಗೊಟ್ಟು ಮಹಾರಾಷ್ಟ್ರ ಜನತೆ ಈ ಅಭೂತಪೂರ್ವ ಬಂದ್ ಆಚರಿಸಿದರು.

ಸಿಪಿಐ(ಎಂ) ಈ ಬಂದ್‌ನ ಅಭೂತಪೂರ್ವ ಯಶಸ್ಸಿಗೆ ವಿಶೇಷ ಪ್ರಯತ್ನ ನಡೆಸಿತು. ಅದು 15 ದಿನಗಳ ಜೀಪ್ ಜಾಥಾ ನಡೆಸಿತು. ಮಾರ್ಚ್ 23 ರಂದು ಭಗತ್ ಸಿಂಗ್, ಸುಖದೇವ್, ರಾಜಗುರುರವರು ಹುತಾತ್ಮರಾದ 70ನೇ ವಾರ್ಷಿಕದಂದು ಪುಣೆಯ ಬಳಿಯ ರಾಜಗುರುರವ ಜನ್ಮಸ್ಥಳದಿಂದ ಆರಂಭವಾದ ಈ ಜಾಥಾ 14 ಜಿಲ್ಲೆಗಳಲ್ಲಿ 200 ಕಿ.ಮಿ. ದೂರ ಶ್ರಮಿಸಿ ಏಪ್ರಿಲ್ 6 ರಂದು ಬೆಂಗಳೂರಿಗೆ ತಲುಪಿತು. ಈ ಜಾಥಾ ಮೂರು ಮರಾಠಿ ಕಿರುಹೊತ್ತಿಗೆಗಳನ್ನು ಪ್ರಕಟಿಸಲಾಯಿತು. ಈ ಪುಸ್ತಿಕೆಗಳ ಹೆಸರು 'ಮಹಾರಾಷ್ಟ್ರ ಎನ್ರೋನ್ ವಿದ್ಯುತ್ ಬೆಲೆ ಮೇಲಿದೆ, ಎಚ್ಚರ!; "ವಾಜಪೇಯಿ ಆಡಳಿತದ ವಿನಾಶಕಾರಿ ಕೃಷಿ ನೀತಿ' ಮತ್ತು ' ಶಿವಸೇನೆ ಕಾರ್ಯನಿರತ ಅರೆಫ್ಯಾಸಿಸಂ" ಇವುಗಳನ್ನು ಎರಡು ಆವೃತ್ತಿಗಳಲ್ಲಿ 2700 ಪ್ರತಿಗಳನ್ನು ಮುದ್ರಿಸಿ ಮಾರಾಟ ಮಾಡಲಾಯಿತು.

ಪಶ್ಚಿಮ ಬಂಗಾಳ ಚುನಾವಣೆ: ಕುತಂತ್ರಕ್ಕೆ ಕೊನೆ ಇಲ್ಲ

ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗೆ ಕೆಲವೇ ದಿನಗಳ ಮೊದಲು ಫಾರ್ವರ್ಡ್‌ಬ್ಲಾಕ್‌ನ ಪ್ರಮುಖ ಮುಖಂಡ ಹೇಮಂತ ಕುಮಾರ್ ಬಸು ಅವರ ಬರ್ಬರ ಹತ್ಯೆ ನಡೆಯಿತು. ಸಿಪಿಐ(ಎಂ) ಕಾರ್ಯಕರ್ತರು ಈ ಕೊಲೆ ನಡೆಸಿದ್ದಾರೆಂದು ಆಪಾದಿಸಿದ ಕಾಂಗ್ರೆಸ್ ಗೂಂಡಾಗಳು ಮತ ಪೆಟ್ಟಿಗೆಗಳನ್ನು ವಶಪಡಿಸಿಕೊಂಡರು. ಸಿಪಿಐ(ಎಂ) ಮತ್ತು ಎಡ ಪಕ್ಷಗಳು ಚುನಾವಣೆಯಲ್ಲಿ ಸೋಲೊಪ್ಪಬೇಕಾಯಿತು.

ಆದರೆ ವಿಚಾರಣೆಯ ನಂತರ ಬಂದ ಸತ್ಯಾಂಶವೆಂದರೆ, ಕಾಂಗ್ರೆಸ್ಸಿಗರು ಹೇಮಂತ್ ಕುಮಾರ್ ಬಸು ಅವರನ್ನು ಕೊಂದಿದ್ದರು. ಅಷ್ಟರಲ್ಲಿ ಚುನಾವಣೆ ಮುಗಿದವು. ಫಲಿತಾಂಶ ಕೊಲೆಗೈದವರ ಪಕ್ಷದ ಪಾಲಾಗಿತ್ತು.

ಪ.ಬಂಗಾಳದಲ್ಲಿ ಮತದಾನ ಹತ್ತಿರವಾಗುತ್ತಿದೆ. ಸೆಣಸಾಟ ತಾರಕಕ್ಕೇರುತ್ತಿದೆ. ಪ್ರಜಾಸತ್ತಾತ್ಮಕ ರೀತಿಯಲ್ಲಿ ಎಡರಂಗವನ್ನು ಎದುರಿಸಲಾಗದ ಮಮತಾ ಬ್ಯಾನರ್ಜಿ ಮತ್ತವರ ತಂಡ ಭಾರೀ ಪಿತೂರಿಗಳನ್ನು, ವ್ಯಾಪಕ ಹಿಂಸೆಯನ್ನು ನಡೆಸಲು ತಯಾರಾಗಿವೆ. ಇದನ್ನು ಎದುರಿಸಲು ಜನತೆಯೂ ಸಜ್ಜಾಗಿದೆ. ಆದರೆ ಪಿತೂರಿಯ ಆಳವನ್ನು ಗ್ರಹಿಸಿರುವ ಸಿಪಿಐ(ಎಂ) ಕಾರ್ಯದರ್ಶಿ ಅನಿಲ್ ಬಿಸ್ವಾಸ್ ಹೇಳುತ್ತಾರೆ "ಆಗ ಏನೂ ಆಗಬಹುದು" ಅದರ ಕೆಲವು ವಿವರಗಳು ಇಲ್ಲಿ.

1995 ಡಿಸೆಂಬರ್ , 1996ರ ಬಂಗಾಳ ಚುನಾವಣೆಯ 4 ತಿಂಗಳ ಮೊದಲು ಸಿಪಿಐ(ಎಂ) ಕಾರ್ಯಕರ್ತರನ್ನು ಕೊಲ್ಲಲು ವಿಮಾನದಲ್ಲಿ ತಂದು, ಪಶ್ಚಿಮ ಬಂಗಾಳದಲ್ಲಿ 2500 ಎ.ಕೆ.47 ರೈಫಲ್ಲುಗಳನ್ನು ಖರೀದಿಸಿ, ಪುರುಲಿಯ ಜಿಲ್ಲೆಯ ಹಳ್ಳಿಯೊಂದರಲ್ಲಿ ಎಸೆಯಲಾಯ್ತು. ಕಮ್ಯುನಿಸ್ಟ್ ವಿರೋಧಿಗಳ ಕೈಗೆ ಅವುಗಳನ್ನು ಹಂಚಿ ವ್ಯವಸ್ಥಿತವಾಗಿ ಸಿಪಿಐ(ಎಂ0 ಕಾರ್ಯಕರ್ತರನ್ನು ಕೊಲ್ಲುವುದು ಮಾತ್ರವಲ್ಲದೆ, ದಂಗೆ ಎಬ್ಬಿಸಿ ರಾಷ್ಟ್ರಪತಿ ಆಡಳಿತ ಹೇರಬೇಕೆಂದು ಒತ್ತಾಯಿಸುವುದು ಪಿತೂರಿಯ ಮೂಲ ಉದ್ದೇಶವಾಗಿತ್ತು. ಈ ಹೇಳಿಕೆಯನ್ನು ನೀಡಿದವರು ಮತ್ತಾರೂ ಅಲ್ಲ ಪುರುಲಿಯಾದಲ್ಲಿ ಶಸ್ತ್ರಾಸ್ತ್ರಗಳನ್ನು ಎಸೆದು ಹೋದ ವಿಮಾನದ ಪೈಲಟ್ ಪೀಟರ್ ಕೆ. ಬ್ಲೀಚ್, ಕಲ್ಕತ್ತದ ಪ್ರೆಸಿಡೆನ್ಸಿ ಜೈಲಿನಲ್ಲಿದ್ದಾಗ, ರಶಿಯಾದ ವಕೀಲರ ಉನ್ನತ ಮಟ್ಟದ ನಿಯೋಗಕ್ಕೆ ತಿಳಿಸಿದ್ದು. ಇದು ಪ್ರಕಟವಾದುದು ಕಮ್ಯುನಿಸ್ಟ್ ಪಕ್ಷದ ಪತ್ರಿಕೆಯಲ್ಲಲ್ಲ. ಕಲ್ಕತ್ತಾದಿಂದ ಪ್ರಕಟವಾಗುವ 'ಆಜ್‌ಕಲ್' ಎನ್ನುವ ದಿನ ಪತ್ರಿಕೆಯಲ್ಲಿ.

ಸಾಧಾರಣಾ 12 ವರ್ಷಗಳ ಹಿಂದೆ, ತ್ರಿಪುರ ವಿಧಾನಸಭಾ ಚುನಾವಣೆಯ ಕೆಲವು ದಿನಗಳ ಮೊದಲು ಬಾಂಗ್ಲಾದೇಶದಲ್ಲಿ ತರಬೇತಿ ಹೊಂದಿದ ತ್ರಿಪುರ ಉಗ್ರಗಾಮಿಗಳು ಸಾಧಾರಣಾ 30 ಕ್ಕೂ ಹೆಚ್ಚು ಬಂಗಾಳಿ ಭೂಮಿಕರನ್ನು ಬರ್ಬರ ಹತ್ಯೆ ಮಾಡಿದರು. ಘಟನೆ ನಡೆಯುವ ಹಲವು ತಿಂಗಳ ಮೊದಲೇ ಹೆಚ್ಚುವರಿ ಮಿಲಿಟರಿ ಪಡೆಗಳನ್ನು ಕಳಿಸಬೇಕೆಂದು ಅಂದಿನ ಸಿಪಿಐ(ಎಂ) ಸರಕಾರದ ಮನವಿಗೆ ಕೇಂದ್ರ ಸರ್ಕಾರ ಸೂಕ್ತ ಗಮನ ನೀಡಲಿಲ್ಲ. ಅಂದು ನಡೆದ ವಿಧಾನಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಅಧಿಕಾರ ಕಳೆದುಕೊಳ್ಳಬೇಕಾಯ್ತು.

'ಪ್ರಜಾಪ್ರಭುತ್ವ' ಭಾರತದಲ್ಲಿ ಕಮ್ಯುನಿಸ್ಟ್ ಸರಕಾರಗಳನ್ನು 'ಪ್ರಜಾಸತ್ತಾತ್ಮಕ ರೀತಿ'ಯಲ್ಲಿ ಸೋಲಿಸಲು ಅನುಸರಿಸಿದ ಕೆಲವು ಕ್ರಮಗಳಿವು! ಕೆಲವು ಬೆಳಕಿಗೆ ಬಂದಿದ್ದರೆ, ಹಲವು ಕತ್ತಲಲ್ಲಿ ಕರಗಿ ಹೋಗಿವೆ. ಈ ಕುತಂತ್ರದಲ್ಲಿ ನಮ್ಮ ದೇಶದ 'ಪ್ರಭು'ಗಳು ಮಾತ್ರವಲ್ಲ 'ವಿದೇಶಿ ಧೊರೆ'ಗಳೂ ಶಾಮೀಲಾಗಿದ್ದಾರೆ.

ಈ ಕುತಂತ್ರಗಳ ಅಭಿವ್ಯಕ್ತಿಯೇ ಮಮತಾ ಬ್ಯಾನರ್ಜಿ ಮತ್ತು ಆಕೆಯ ವಿವಿಧ ನಾಟಕ, ರೂಪಕಗಳು. ಆಕೆಯ ಬೆಂಬಲಿಗರಿಂದ ಹಿಂಸಾತ್ಮಕ ಘಟನೆಗಳು.

ಮಿಡ್ನಾಪುರ್ ಲೋಕಸಭಾ ಉಪ ಚುನಾವಣೆ, ಕಲ್ಕತ್ತ ಕಾರ್ಪೋರೇಷನ್ ಚುನಾವಣೆಯ ಹಿನ್ನೆಲೆಯಲ್ಲಿ ನಡೆದ ಗಂಭೀರ ಗಲಭೆಯ ಪ್ರಕ್ರಿಯೆ ಈಗಲೂ ಮುಂದುವರಿಯುತ್ತಿದೆ.

ಇದೇ ಏಪ್ರಿಲ್ 9 ರ ಸಂಜೆ, ಮಿಡ್ನಾಪುರ ಜಿಲ್ಲೆಯ ಗರ್ಬೆಟಾ ಪ್ರದೇಶದ ಸಿಪಿಐ(ಎಂ)ಪಕ್ಷದ ಶಾಖಾ ಕಾರ್ಯದರ್ಶಿ ತಪನ್ ಘೋಷ್ ಅವರನ್ನು ಗೂಂಡಾಗಳು ಗುಂಡಿಕ್ಕಿ ಕೊಂದರು. ಬಿಜೆಪಿ, ತೃಣಮೂಲ ಕಾಂಗ್ರೆಸ್ ಮತ್ತು ಪೀಪಲ್ ವಾರ್ ಗ್ರೂಪ್ ಆ ಗೂಂಡಾಗಳ ಬೆಂಬಲಕ್ಕಿದ್ದರು ಎಂದು ತಿಳಿದುಬಂದಿದೆ.

ಅದೇ ದಿನ 24 ಪರಗಣ ಜಿಲ್ಲೆಯ ಬರಾಸಾಲ್ ಉಪ ವಿಭಾಗದ ದಾಸ್‌ಪುರಾ ಎಂಬಲ್ಲಿ ಅಲಿ-ಉರ್-ರೆಹಮಾನ್ ಎಂಬ ಸಿಪಿಐ(ಎಂ) ಕಾರ್ಯಕರ್ತರನ್ನು ತೃಣಮೂಲ ಕಾಂಗ್ರೆಸ್ಸಿನ ಬೆಂಬಲಿಗರು ಮಾರಣಾಸ್ತ್ರಗಳಿಂದ ಥಳಿಸಿದರು. ಕಾಂ. ರೆಹಮಾನ್ ಮಾಡಿದ ಅಪರಾಧವೆಂದರೆ, ಆ ಪ್ರದೇಶದಲ್ಲಿ ತೃಣಮೂಲ ಕಾಂಗ್ರೆಸ್‌ನವರು ಬಲತ್ಕಾರವಾಗಿ ಮುಚ್ಚಿಸಿದ್ದ ಸಿಪಿಐ(ಎಂ) ಪ್ರಾದೇಶಿಕ ಕಛೇರಿಯನ್ನು ಪುನಃ ತೆರೆದುದು.

ಕಲ್ಕತ್ತದ ಬಾಗಿಲಲ್ಲಿರುವ 24 ಪರಗಣ ಜಿಲ್ಲೆಗೆ ಸೇರಿದ 'ಬಜ್‌ಬಜ್' ಮುನಿಸಿಪಾಲಿಟಿ ಅಧ್ಯಕ್ಷ ಶೈಲೇಂದ್ರನಾಥ ಘೋಷ್ ಅವರಿಗೆ, ತೃಣಮೂಲ ಕಾಂಗ್ರೆಸ್ಸಿನ ಗೂಂಡಾಗಳು ಗುಂಡಿಕ್ಕಿದುದು ಇತ್ತೀಚಿನ ಇನ್ನೊಂದು ಘಟನೆ. ಶೈಲೇಂದ್ರನಾಥ್ ಇನ್ನೂ ಸಾವ ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ.

ಇನ್ನು ಹಲವಾರು ಪೂರ್ವಯೋಜಿತ ಗಲಭೆಯ ಘಟನೆಗಳು ನಡೆಯುತ್ತಲೇ ಇವೆ. ಪ್ರಜಾಪ್ರಭುತ್ವ ರೀತಿಯಲ್ಲಿ ಕಮ್ಯುನಿಸ್ಟರನ್ನು ಎದುರಿಸಲಾಗದ ವಿರೋಧಿಗಳು ಹಿಂಸೆಯ ರುದ್ರ ತಾಂಡವಕ್ಕೆ ಮೊರೆ ಹೊಕ್ಕಿವೆ. ಆದರೂ ಪಶ್ಚಿಮ ಬಂಗಾಳದ ಜಾಗೃತ ಜನರು ಕುತಂತ್ರವನ್ನು ಎದುರಿಸಿ ಶಾಂತಿಯನ್ನು ಕಾಪಾಡಬೇಕೆಂದು ಮನವಿ ಮಾಡಿದ್ದಾರೆ. ಅಲ್ಲಿನ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಹಾಗೂ ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಅನಿಲ ಬಿಸ್ವಾಸ್.

- ಬಾಲಕೃಷ್ಣ ಶೆಟ್ಟಿ

ಜಾಗತೀಕರಣದ ಬೆಂಕಿಯಲ್ಲಿ

'ಹೈರ್ ಅಂಡ್ ಫೈರ್' ಅಮೆರಿಕದ ಮಾಲಕರ ಮಹಾಮಂತ್ರ. ಅಮೆರಿಕದ ಮಾಲಕರು ಯಾವಾಗ ಬೇಕಾದ ಕಾರ್ಮಿಕರನ್ನು 'ಹೈರ್'(ಕೆಲಸಕ್ಕೆ ತೆಗೆದುಕೊಳ್ಳಬಹುದು) ಇಲ್ಲವೇ 'ಫೈರ್'(ಕೆಲಸದಿಂದ ತೆಗೆದು ಹಾಕಬಹುದು) ಮಾಡಬಹುದು. ಆದ್ದರಿಂದಲೇ ಎಲ್ಲಾ ದೇಶದ ಮಾಲಕರಿಗೆ ಅಮೆರಿಕಾ ಸ್ವರ್ಗದಂತೆ. ಅಮೆರಿಕದಲ್ಲಿ ಇರುವಂತಹ ನೌಕರಿಯ ಅಭದ್ರತೆ ಬೇರೆಲ್ಲೂ ಇಲ್ಲ. ಯುರೋಪು, ಜಪಾನುಗಳಲ್ಲೂ ಕಾರ್ಮಿಕರನ್ನು ಕಿತ್ತುಹಾಕುವುದು ಅಷ್ಟು ಸುಲಭವಲ್ಲ. ಒಂದು ಕಡೆ ನೌಕರಿಯಲ್ಲಿ ತಕ್ಕಮಟ್ಟಿನ ಭದ್ರತೆ ಒದಗಿಸುವ ಕಾನೂನು. ಇನ್ನೊಂದು ಕಡೆ ಇಂತಹ ಕಾನೂನು ತರಲು ಹೋರಾಟ ಮಾಡಿ, ಈಗಲೂ ಅದನ್ನು ಜಾರಿ ಮಾಡಲು ಒತ್ತಡ ತರಬಲ್ಲ ಪ್ರಬಲ ಟ್ರೇಡ್ ಯೂನಿಯನ್ ಚಳುವಳಿ ಇದೆ.

"ನನಗೆ ಇಂದು 'ಗುಲಾಬಿ ಕವರ್' ಕೊಟ್ಟರೆ?"

ಶರತ್‌ಚಂದ್ರ

ಇದು ಅಮೆರಿಕದ ಕಾರ್ಮಿಕ ಫ್ಯಾಕ್ಟರಿಗೆ, ಆಫೀಸಿಗೆ ಹೋಗುವಾಗ ಕೇಳಿಕೊಳ್ಳುವ ಪ್ರಶ್ನೆ. 'ಗುಲಾಬಿ ಕವರ್' ಯಾವುದೇ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕುವ ಪತ್ರ ಇರುವ ಕವರ್‌ಗೆ ಅಮೆರಿಕದಲ್ಲಿ ಇಟ್ಟಿರುವ ಹೆಸರು. ನೌಕರಿಯಲ್ಲಿ ಅಭದ್ರತೆ ಅಮೆರಿಕದ ಕಾರ್ಮಿಕನನ್ನು ಕಾಡುತ್ತಿರುವ ಅತಿದೊಡ್ಡ ಸಮಸ್ಯೆ. **'ಹೈರ್ ಅಂಡ್ ಫೈರ್' ಅಮೆರಿಕದ ಮಾಲಕರ ಮಹಾಮಂತ್ರ.** ಅಮೆರಿಕದ ಮಾಲಕರು ಯಾವಾಗ ಬೇಕಾದ ಕಾರ್ಮಿಕರನ್ನು 'ಹೈರ್'(ಕೆಲಸಕ್ಕೆ ತೆಗೆದುಕೊಳ್ಳಬಹುದು) ಇಲ್ಲವೇ 'ಫೈರ್'(ಕೆಲಸದಿಂದ ತೆಗೆದು ಹಾಕಬಹುದು) ಮಾಡಬಹುದು. ಆದ್ದರಿಂದಲೇ ಎಲ್ಲಾ ದೇಶದ ಮಾಲಕರಿಗೆ ಅಮೆರಿಕಾ ಸ್ವರ್ಗದಂತೆ. ಅಮೆರಿಕದಲ್ಲಿ ಇರುವಂತಹ ನೌಕರಿಯ ಅಭದ್ರತೆ ಬೇರೆಲ್ಲೂ ಇಲ್ಲ.



ಯುರೋಪು, ಜಪಾನುಗಳಲ್ಲೂ ಕಾರ್ಮಿಕರನ್ನು ಕಿತ್ತುಹಾಕುವುದು ಅಷ್ಟು ಸುಲಭವಲ್ಲ. ಒಂದು ಕಡೆ ನೌಕರಿಯಲ್ಲಿ ತಕ್ಕಮಟ್ಟಿನ ಭದ್ರತೆ ಒದಗಿಸುವ ಕಾನೂನು. ಇನ್ನೊಂದು ಕಡೆ ಇಂತಹ ಕಾನೂನು ತರಲು ಹೋರಾಟ ಮಾಡಿ, ಈಗಲೂ ಅದನ್ನು ಜಾರಿ ಮಾಡಲು ಒತ್ತಡ ತರಬಲ್ಲ ಪ್ರಬಲ ಟ್ರೇಡ್ ಯೂನಿಯನ್ ಚಳುವಳಿ ಇದೆ. **ಇವೆರಡೂ ಅಮೆರಿಕದಲ್ಲಿ ಇಲ್ಲ. ಆದ್ದರಿಂದ ಮಾಲಕರು ಬೇಕೆಂದಾಗ 'ಗುಲಾಬಿ ಕವರ್' ಕೊಡಬಹುದು. ಎಂತಹ ವಿಪರ್ಯಾಸ! ಗುಲಾಬಿ ನವಿರಾದ ಭಾವನೆಗಳನ್ನು ಅರಳಿಸಬೇಕಾದ್ದು. ಆದರೆ ಕಾರ್ಮಿಕರ ಮೇಲೆ ಅತ್ಯಂತ ಕ್ರೂರ ಆಘಾತ ಮಾಡುವಾಗ ಬಳಸಲಾಗುತ್ತದೆ. ಮಾಲಿಕನಿಗೆ ನವಿರಾದ ಭಾವನೆಗಳನ್ನು ಅರಳಿಸುತ್ತದೆ. ಅದಕ್ಕಿರಬಹುದೇ ಈ 'ಗುಲಾಬಿ ಕವರ್' ಎಂಬ ಹೆಸರು? 'ಗುಲಾಬಿ ಕವರ್' ಮತ್ತು 'ಹೈರ್ ಅಂಡ್ ಫೈರ್' ಅಮೆರಿಕದ ಕಾರ್ಮಿಕನ ಸ್ಥೂಲ ಸ್ಥಿತಿಯನ್ನು ಬಿಂಬಿಸುವ ಪ್ರತೀಕಗಳು.**

ಹೈರ್ ಅಂಡ್ ಫೈರ್

1980 ರಿಂದ ಈವರೆಗೆ 4.3 ಕೋಟಿ ಕಾರ್ಮಿಕರನ್ನು ಈ ರೀತಿ 'ಫೈರ್' ಮಾಡಲಾಗಿದೆ. ಅಮರಿಕದ ನಾಲ್ಕರಲ್ಲಿ ಮೂರು ಮನೆಗಳಲ್ಲಿ ಕಳೆದ 20 ವರ್ಷದಲ್ಲಿ ಒಬ್ಬರಲ್ಲ ಒಬ್ಬರು ತಮ್ಮ ನೌಕರಿಯನ್ನು ಕಳೆದುಕೊಂಡಿದ್ದಾರೆ. ಹಿಂದೆ ಬಂಡವಾಳಶಾಹಿ ಬಿಕ್ಕಟ್ಟಿನ ಚಿತ್ರದಲ್ಲಿ ಸ್ಥಗಿತತೆಯ ಅವಧಿ ಪ್ರವೇಶಿಸಿದಾಗ ಮಾತ್ರ ಸಾಮೂಹಿಕ 'ಫೈರಿಂಗ್' (ಇದನ್ನು ರಿಟ್ರೆಂಚ್‌ಮೆಂಟ್ ಅಥವಾ ಲೇ-ಆಫ್ ಎನ್ನುತ್ತಾರೆ) ನಡೆಯುತ್ತಿತ್ತು ಆರ್ಥಿಕದಲ್ಲಿ 'ಸುಗ್ಗಿ' ಇರುವಾಗಲೂ ಲೇ-ಆಫ್‌ಗಳು ಸಾಮಾನ್ಯ. 1995 ರಲ್ಲಿ ಶೇರು ಮಾರುಕಟ್ಟೆ, ಆರ್ಥಿಕ ಎರಡೂ 'ಸುಗ್ಗಿ' ಯಲ್ಲಿದ್ದಾಗ ಅತ್ಯಂತ ಹೆಚ್ಚಿನ ಲೇ-ಆಫ್‌ಗಳು ನಡೆದವು. ಐ.ಬಿ.ಎಂ., ಜನರಲ್ ಮೋಟಾರ್ಸ್, ಎಟಿ ಅಂಡ್ ಟಿ ನಂತಹ ಕಂಪನಿಗಳು ಸುಮಾರು ಎರಡು ಲಕ್ಷ ಕಾರ್ಮಿಕರನ್ನು ಬೀದಿಗೆಸೆದವು. ದೊಡ್ಡ ಸಂಖ್ಯೆಯಲ್ಲಿ ಲೇ-ಆಫ್ ಮಾಡಿದರು. ಆ ವರ್ಷ ಈ ಕಂಪನಿಗಳು 'ರೆಕಾರ್ಡ್' ಲಾಭ ಮಾಡಿದ್ದವು. ಅದೂ ಮಾತ್ರವಲ್ಲ 'ಶೇರು ಮಾರುಕಟ್ಟೆಗೆ' (ಅಂದರೆ ಮಾರುಕಟ್ಟೆಯನ್ನು ಪಗಡೆ ದಾಳದಂತೆ ಆಡಿಸುವ ದೈತ ತಿಮಿಂಗಲ ಹಣಕಾಸು ಕಂಪನಿಗಳಿಗೆ) ಲೇಆಫ್‌ನ ಸುದ್ದಿ ಸಂಗೀತದಂತೆ. ಯಾವುದೇ ಕಂಪನಿ ಲೇ-ಆಫ್ ಮಾಡಿದಾಗ ಅದರ ಶೇರುಗಳ ಬೆಲೆ ಮಾರುಕಟ್ಟೆಯಲ್ಲಿ ಏರುತ್ತದೆ! 'ಝೆರಾಕ್ಸ್' 1995 ರಲ್ಲಿ ಲೇ-ಆಫ್ ಮಾಡಿ ತನ್ನ ಕಾರ್ಮಿಕರ ಸಂಖ್ಯೆಯಲ್ಲಿ ಶೇಕಡಾ 10 ರಷ್ಟು (10ರಲ್ಲಿ ಒಬ್ಬನನ್ನು 'ಫೈರ್' ಮಾಡಿದ್ದು) ಕಡಿಮೆ ಮಾಡಿದಾಗ ಅದರ ಶೇರುಬೆಲೆ ಒಂದೇ ದಿನದಲ್ಲಿ ಶೇಕಡಾ 4 ರಷ್ಟು ಏರಿತಂತೆ! ಕಾರ್ಮಿಕರನ್ನು ಮನೆಗೆ ಕಳಿಸಿದಂತೆ ಕಂಪನಿ 'ಖರ್ಚು' ಕಡಿಮೆ ಆಗುತ್ತದೆ. ಆದ್ದರಿಂದ ಲಾಭ ಹೆಚ್ಚುತ್ತದೆ. ಇದು ಹಣಕಾಸು ಮಾಫಿಯಗಳ ನಿರೀಕ್ಷೆ.


ಕಂಪನಿಗಳು 'ಕಷ್ಟ'ದಲ್ಲಿದ್ದಾಗ 'ನಷ್ಟ'ದಲ್ಲಿದ್ದಾಗ ಈ ಬಿಕ್ಕಟ್ಟನ್ನು ಕಾರ್ಮಿಕರ ಮೇಲೆ ಹೊರಿಸಲು ಲೇ-ಆಫ್ ಮಾಡುತ್ತಾರಂತ ಭಾವನೆ. ಆದರೆ ಇದು ನಿಜವಲ್ಲ. ಅಮೆರಿಕದ ಅತ್ಯಂತ ದೊಡ್ಡ ಕಂಪನಿ ಜನರಲ್ ಮೋಟಾರ್ಸ್ ಕಳೆದ 15 ವರ್ಷದಲ್ಲಿ ಎರಡುವರೆಲಕ್ಷ ಕಾರ್ಮಿಕರ ಲೇ-ಆಫ್ ಮಾಡಿದೆ. ಅದೇ ಅವಧಿಯಲ್ಲಿ ಅದರ ಒಟ್ಟು ಲಾಭ 3400 ಕೋಟಿ ಡಾಲರು!

ಗಂಟೆ ಕೂಲಿ ಕಾರ್ಮಿಕರು

1970-80 ರ ದಶಕದಲ್ಲಿ ಹೊಸ ತಂತ್ರಜ್ಞಾನ ಯಾಂತ್ರೀಕರಣ ಬಳಸಿ ಕೈಗಾರಿಕಾ ಉತ್ಪಾದನೆಯಲ್ಲಿ ಕಾರ್ಮಿಕರ ಅವಶ್ಯಕತೆಯನ್ನು ದೊಡ್ಡ ಪ್ರಮಾಣದಲ್ಲಿ ಕಡಿಮೆ ಮಾಡಲಾಯಿತು. ಉಕ್ಕು, ಕಾರು, ಘನ ಕೈಗಾರಿಕೆ, ಗಣಿಗಾರಿಕೆ ಮುಂತಾದ ಪ್ರಮುಖ ಕ್ಷೇತ್ರಗಳಲ್ಲಿ ಕಾರ್ಮಿಕರ ಸಂಖ್ಯೆಯಲ್ಲಿ ಕಡಿತ ಮಾಡಲಾಯಿತು. 80-90 ರ ದಶಕದಲ್ಲಿ ಕಂಪ್ಯೂಟರ್(ಮತ್ತು ಇತರ ಮಾಹಿತಿ ತಂತ್ರಜ್ಞಾನ ಉಪಕರಣಗಳನ್ನು) ಬಳಸಿ ಆಫೀಸು/ ಗುಮಾಸ್ತರ ನೌಕರಿಯನ್ನು ನಾಶ ಮಾಡಲಾಯಿತು. 'ಹೈರ್ ಅಂಡ್ ಫೈರ್' ಯಾವಾಗಲೂ ಅಮೆರಿಕದ ಮಾಲಕರ ಮಂತ್ರವಾಗಿತ್ತು. ಆದರೆ 80-90 ರ ದಶಕದಲ್ಲಿ ಇದನ್ನು ಬಳಸಿ 50-60 ರ ದಶಕದಲ್ಲಿ ದೀರ್ಘ ಮಹಾಯುದ್ಧ-ನಂತರ ದೀರ್ಘ ಆರ್ಥಿಕ ಸುಗ್ಗಿ ಮತ್ತು ಪ್ರಬಲ ಟ್ರೇಡ್ ಯೂನಿಯನ್ ಚಳುವಳಿಗಳಿಂದ ಗಳಿಸಿದ 'ನೌಕರಿ ಭದ್ರತೆ'ಯನ್ನು ನಾಶ ಮಾಡಲಾಗಿದೆ. ಇಂದು ಕಾರ್ಮಿಕವರ್ಗದಿಂದ ದೊಡ್ಡ ವಿಭಾಗ 'ಪಾರ್ಟ್ ಟೈಂ' ಕಾರ್ಮಿಕರು. 1997 ರ ಹೊತ್ತಿಗೆ ಹತ್ತರಲ್ಲಿ ಮೂವರು ಕಾರ್ಮಿಕರು 'ಪಾರ್ಟ್‌ಟೈಂ' ಮಾಡುತ್ತಿದ್ದರು. 'ಫೈರ್' ಆದ ಕಾರ್ಮಿಕರಿಗೆ ಉದ್ಯೋಗ ಸಿಗುವುದಿಲ್ಲವೆಂದಲ್ಲ, ಕೆಲಸ ಕಳೆದುಕೊಂಡ ಮೂವರು ಕಾರ್ಮಿಕರಲ್ಲಿ ಇಬ್ಬರಿಗೆ ಹಿಂದಿನ ಕೆಲಸಕ್ಕಿಂತ ಕಡಿಮೆ ಸಂಬಳದ ಕೆಲಸ ಸಿಗುತ್ತದೆ. ಮತ್ತಿತರ ಎಲ್ಲಾ ಸವಲತ್ತುಗಳು ನಿರ್ಧಿಷ್ಟ ಗಂಟೆಗಳ ದುಡಿಮೆ, ವೈದ್ಯಕೀಯ ಸೌಲಭ್ಯ ಎಲ್ಲದರಲ್ಲೂ ಆತನ ಸ್ಥಿತಿ ಹದಗೆಡುತ್ತದೆ. ಪಾರ್ಟ್ ಟೈಂ ಕೆಲಸ ಎಂದರೆ ದಿನಗೂಲಿಯಲ್ಲ - ಗಂಟೆ ಕೂಲಿ. ಇದು ಅಮೆರಿಕದ ವಿಶಿಷ್ಟ 'ಕೊಡುಗೆ'. ಇಂತಹ ಗಂಟೆ ಕೂಲಿಗಾರ ತನ್ನ ಹೊಟ್ಟೆ ತುಂಬಬೇಕಾದರೆ ಹಲವು 'ಪಾರ್ಟ್ ಟೈಂ' ಕೆಲಸ ಮಾಡಬೇಕಾಗುತ್ತದೆ. ಇಂತಹ ಪಾರ್ಟ್‌ಟೈಂ ಕಾರ್ಮಿಕರು ಕಾನೂನುಬದ್ಧ (ವಾರಕ್ಕೆ) 40 ಗಂಟೆಗಿಂತ ಹೆಚ್ಚಿನ ಕೆಲಸ ಮಾಡುತ್ತಾರೆ. ಪಾರ್ಟ್‌ಟೈಂ ಕೆಲಸಗಾರರಲ್ಲಿ ಮೂವರಲ್ಲಿ ಇಬ್ಬರು (ವಾರಕ್ಕೆ) 50 ಗಂಟೆಗೂ ಹೆಚ್ಚು ಕೆಲಸ ಮಾಡುತ್ತಾರೆ. ಈ ದೊಡ್ಡ ಪ್ರಮಾಣದ ಪಾರ್ಟ್ ಟೈಂ ಕಾರ್ಮಿಕರು (ಸುಮಾರು 60 ಲಕ್ಷ) ಅಮೆರಿಕದ ನಿರುದ್ಯೋಗ ಅಂಕಿ-ಸಂಖ್ಯೆ(ಸುಮಾರು ಶೇಕಡಾ 4) 'ಕಡಿಮೆ ಕಾಣುವಂತೆ ಮಾಡಲು' ದುಡಿಯುತ್ತಿದ್ದಾರೆ.

ಈ 'ಹೈರ್ ಅಂಡ್ ಫೈರ್' ನೀತಿ ಅಮೆರಿಕದ ಮಾಲಕರಿಗೆ, ಕಾರ್ಮಿಕರ ವೇತನ(ಕೂಲಿ ಎಂದರೆ ಸರಿಯಾದೀತು) ಕಡಿಮೆ ಮಾಡುವುದರಲ್ಲಿ ಸಹಾಯ ಮಾಡಿದೆ. 1973 ರ ವೇತನಕ್ಕೆ ಹೋಲಿಸಿದೆ 1997 ರಲ್ಲಿ ಸರಾಸರಿ ಫ್ಯಾಕ್ಟರಿ ಕಾರ್ಮಿಕರ (ನಿಜ) ವೇತನ ಶೇಕಡಾ 14 ರಷ್ಟು ಕಡಿಮೆ ಆಯಿತು. ಇದೇ ಅವಧಿಯಲ್ಲಿ ಉತ್ಪಾದಕತೆ(ಪ್ರತಿ ಕಾರ್ಮಿಕನ ಉತ್ಪಾದನಾ ಮೊತ್ತ) ಶೇಕಡಾ 34 ರಷ್ಟು ಹೆಚ್ಚಾಯಿತು. ಪಾರ್ಟ್ ಟೈಂ ಕಾರ್ಮಿಕರ ಪಾಡು ಹೇಳತೀರದು. ಅಮೆರಿಕದಲ್ಲಿ ಕನಿಷ್ಟ ಕೂಲಿಯನ್ನು ಗಂಟೆಗಳಲ್ಲಿ ಹೇಳಲಾಗುತ್ತದೆ. ಅಲ್ಲಿನ ಕನಿಷ್ಟ ಕೂಲಿ ದಿನಗೂಲಿ ಗಂಟೆಗೆ 5 ಡಾಲರು. ಪಾರ್ಟ್ ಟೈಂ ಕಾರ್ಮಿಕರ ಕಥೆ ಬಿಡಿ ಅವರ 'ಗಂಟೆ - ಕೂಲಿ' ಕನಿಷ್ಟ ಎಂಬುದು ಸ್ಪಷ್ಟ. ಜಗತ್ತಿನ ಅತ್ಯಂತ ಶ್ರೀಮಂತ ದೇಶವಾದ ಅಮೆರಿಕದಲ್ಲಿ 25 ಲಕ್ಷ ಕಾರ್ಮಿಕರು ಫುಲ್ ಟೈಂ ಉದ್ಯೋಗದಲ್ಲಿದ್ದರೂ, ಅವರ ವೇತನ ಅಧಿಕೃತ ಅಂಕಿ-ಸಂಖ್ಯೆ ಪ್ರಕಾರವೇ ಅಲ್ಲಿನ 'ಬಡತನದ ರೇಖೆ' ಗಿಂತ ಕೆಳಗಿದ್ದಾರೆ ಎಂದು ನಂಬುವುದು ಕಷ್ಟ. ಆದರೂ ನಿಜ. ಒಟ್ಟು 2 ಕೋಟಿ ಜನ ಬಡತನದ ರೇಖೆಯ ಕೆಳಗಿದ್ದಾರೆ. **ಅಮೆರಿಕ ಆದಾಯಗಳಲ್ಲಿ ಭಾರಿ ಅಸಮಾನತೆ ಇರುವ ದೇಶ. ಇಲ್ಲಿನ ಪ್ರಮುಖ 300 ಕಂಪನಿಗಳ ಮುಖ್ಯ ಅಧಿಕಾರಿ(ಮ್ಯಾನೇಜಿಂಗ್ ಡೈರಕ್ಟರ್ ಥರಾ) ಅದೇ ಕಂಪನಿಯ ಸರಾಸರಿ ಕಾರ್ಮಿಕನ 212 ಪಟ್ಟು ಹೆಚ್ಚು ಸಂಬಳ ತೆಗೆದುಕೊಳ್ಳುತ್ತಾನೆ. ಅತ್ಯಂತ ದೊಡ್ಡ 20 ಕಂಪನಿಗಳ ಮುಖ್ಯಸ್ಥರ ಸರಾಸರಿ ಸಂಬಳ 10 ಕೋಟಿ ಡಾಲರುಗಳು!**

ಇದು ಕೈಗಾರಿಕಾ - ಸೇವಾ ಕ್ಷೇತ್ರದಲ್ಲಿರುವ ವಿಶೇಷ ಪರಿಣತಿ ಇರದ ಕಾರ್ಮಿಕರ ಅವಸ್ಥೆ ಮಾತ್ರವಲ್ಲ. ಇದೇ ದಾಟಿಯ 'ಹೈರ್ ಅಂಡ್ ಫೈರ್' ಬಿಳಿ ಕಾಲರು ಕಾರ್ಮಿಕರಿಗೆ, ಮ್ಯಾನೇಜ್‌ಮೆಂಟ್ ದರ್ಜೆಯವರಿಗೆ, ಹೊಸ ಮಾಹಿತಿ ತಂತ್ರಜ್ಞಾನ ಕೆಲಸಗಾರರಿಗೆ ಹಬ್ಬಿದೆ. ಕಳೆದ ಮೂರು ತಿಂಗಳಲ್ಲಿ



ೀಯುತ್ತಿರುವ ದುಡಿವ ಜನ

ಮೆರಿಕದಲ್ಲಿ ನಾಲ್ಕೂವರೆ ಲಕ್ಷ ಜನ ಕೆಲಸ ದುಕೊಂಡಿದ್ದಾರೆ. ಅದರಲ್ಲಿ ಮೂವರಲ್ಲಿ ಒಬ್ಬರು ೞ್ಟ-ತಂತ್ರಜ್ಞಾನ ಕ್ಷೇತ್ರದಲ್ಲಿ ದುಡಿಯುವ ಣಿತರು ನಾಲ್ವರಲ್ಲಿ ಒಬ್ಬರು ಮಾಹಿತಿ ತಂತ್ರಜ್ಞಾನ ಂಪ್ಯೂಟರ್ ಸಾಫ್ಟ್‌ವೇರ್) ಕ್ಷೇತ್ರದಲ್ಲಿ ಡಿಯುವವರು.

ಮೂವರಲ್ಲಿ ಒಬ್ಬ ಪಾರ್ಟ್-ಟೈಮ್ ಕಾರ್ಮಿಕ

ಅಮೆರಿಕದದ ಪರಿಸ್ಥಿತಿ ಎಷ್ಟು ಮಾಲಕರ-ಪರ, ರ್ಮಿಕ ವಿರೋಧಿಯಾಗಿದೆಯೆಂದರೆ, ಕೆಲವು ತಿಯ ಉದ್ಯೋಗಗಳು ಇಡೀ ದೇಶದಲ್ಲಿ ರ್ಟ್‌ಟೈಮ್ ಉದ್ಯೋಗಗಳಾಗಿ ಬಿಟ್ಟಿವೆ. ಕ್ರೆಟರಿ, ರಿಸೆಪ್ಷನಿಸ್ಟ್, ಸೂಪರ್ ಮಾರ್ಕೆಟ್, ಲ್ಸ್ ಬಾಯ್ಸ್/ ಗರ್ಲ್, ಜಾಡಮಾಲಿಗಳು ತ್ಯಾದಿ ಉದ್ಯೋಗಗಳಲ್ಲಿ ಫುಲ್‌ಟೈಮ್ ಭದ್ರ ಕರಿಯೆಂಬುದು ಇಲ್ಲವೇ ಇಲ್ಲ.

ಅಮೆರಿಕದ ಮಾಲಕ ವರ್ಗ ತನ್ನ ಬಲದಿಂದ ಲ್ಲಿರುವ ಎಲ್ಲಾ ವೈವಿಧ್ಯತೆ ಬಳಸಿ ತನ್ನದೇ ಆದ ಜಾತಿ ವ್ಯವಸ್ಥೆ' ನಿರ್ಮಿಸಿದೆ. ಫುಲ್ ಟೈಂ ಬಿಳಿಯ ರುಷರು ಈ ವರ್ಣವ್ಯವಸ್ಥೆಯಲ್ಲಿ ಉಚ್ಚ ಜಾತಿ ಂದು ಹೇಳಬೇಕಾಗಿಲ್ಲ. ಕರಿಯ ಮತ್ತು ವಲಸೆ ಂದ ಯಾವುದೇ ವಿಶೇಷ ಪರಿಣತಿ ಲ್ಲ.ಮಹಿಳೆಯರು ಅತ್ಯಂತ ಕೆಳಜಾತಿ. ಮಧ್ಯೆ ತರು. ಪ್ರತಿ ಜಾತಿಗಿಂತ ಆ 'ಜಾತಿ'ಯ ಹಿಳೆಯರ ಒಂದು ಹಂತ ಕೆಳಕ್ಕೆ. ಮಹಿಳೆಯರು, ಳಿಯೇತರರು, (ಕರಿಯರು, ಲ್ಯಾಟಿನೋಗಳು, ಲಸೆ ಬಂದವರು) ಅತ್ಯಂತ ಅಸಮಾನತೆ ದುರಿಸುವ ಜನ ವಿಭಾಗಗಳು. **ಮಹಿಳೆಯರು ೊಡ್ಡ ಪ್ರಮಾಣದಲ್ಲಿ ಉದ್ಯೋಗ ೊಂದಿದ್ದರೂ (ಹೆಚ್ಚು ಕಡಿಮೆ ಅರ್ಧಕರ್ಧ) ಮಾನ ವೇತನದಿಂದ ವಂಚಿತರಾಗಿದ್ದಾರೆ. ಮಯ, ಕೆಲಸ, ಪರಿಣತಿ, ಅರ್ಹತೆ ಇರುವ ುದ್ಯೋಗಗಳಲ್ಲಿ ಮಹಿಳೆ ಸರಾಸರಿ ಶೇಕಡಾ) ರಷ್ಟು ಕಡಿಮೆ ವೇತನ ಪಡೆಯುತ್ತಾಳೆ.** ದು ಫುಲ್‌ಟೈಮ್/ ಪಾರ್ಟ್‌ಟೈಮ್, ಎಲ್ಲಾ ೀತಿಯ ಹಂತದ ಉದ್ಯೋಗಗಳಲ್ಲೂ ನಿಜ. ಹಿಳೆಯರಿಗೆ ಯಾವುದೇ ಸವಲತ್ತುಗಳಿಲ್ಲ. ಹಿಳೆಯರ ಉದ್ಯೋಗ ಹೆಚ್ಚು 'ತಾತ್ಕಾಲಿಕ'. ಹಿಳೆಯರ ಉದ್ಯೋಗಗಳಲ್ಲಿ (ಸೆಕ್ರೇಟರಿ, ಸೆಪ್ಷನಿಸ್ಟ್, ಸೇಲ್ಸ್ ಗರ್ಲ್ ಇತ್ಯಾದಿ) ಹೆಚ್ಚಿನವು ಶ್ವತ 'ಪಾರ್ಟಟೈಂ' ಟೆಂಪರರಿ ಉದ್ಯೋಗಗಳೇ. ಹಿಳಾ ಉದ್ಯೋಗಿಗಳಿಗೆ 'ಬಾವ-ವಾಡಿ' ್ರಶ್-ಮಹಿಳಾ ಉದ್ಯೋಗಿಗಳ ಬಡ ಮಕ್ಕಳನ್ನು ಲಸದ ಅವಧಿಯಲ್ಲಿ ನೋಡಿಕೊಳ್ಳುವ ವ್ಯವಸ್ಥೆ) ಲ್ಲವೇ ಇಲ್ಲ ಎನ್ನುವುದು ಅಪರೂಪ. ಕಾನೂನು ್ರಕಾರ ಕಡ್ಡಾಯವೂ ಅಲ್ಲ. **ಮಹಿಳೆಯರಿಗೆ ಾನೂನು ಬದ್ಧ ಹೆರಿಗೆ ರಜಾ ಸೌಲಭ್ಯ ಇಲ್ಲದ ಕಮಾತ್ರ ದೇಶ ಅಮೆರಿಕ. ಗರ್ಭಿಣಿಯರು ವರ ಸ್ವಂತ ರಜಾ ಹಾಕಬೇಕು. ಇದು ಾಮಾನ್ಯವಾಗಿ ಸಂಬಳರಹಿತ ರಜಾ ಗಿರುತ್ತದೆ. ಗರ್ಭಿಣಿಯಾಗುತ್ತಿದ್ದಂತೆ ಹಿಳೆಯರನ್ನು ನೌಕರಿಯಿಂದ ತೆಗೆದು ಾಕುವುದು, ಅವರೇ ಬಿಟ್ಟು ಬಿಡುವುದು ಾಮಾನ್ಯ.** ಮಹಿಳೆಯರಿಗೆ ವಿಶೇಷ ವೈದ್ಯಕೀಯ ಲಭ್ಯಗಳಾಗಲೀ ಇಲ್ಲವೇ ಇಲ್ಲ.

ಇದೇ ರೀತಿ ಕರಿಯರದೂ ಅವಸ್ಥೆ. ಕರಿಯರಿಗೂ ಡಿಮೆ ವೇತನದ, ಪರಿಣತಿ ಇಲ್ಲದ, ಪಾರ್ಟ್ ೈಂ ತಾತ್ಕಾಲಿಕ ಉದ್ಯೋಗಗಳೇ ಮೀಸಲು. ಇದೇ ೀತಿ ಲ್ಯಾಟಿನೋಗಳಿಗೂ ಪಾರ್ಟ್ ಟೈಂ, ೇ-ಆಫ್ ಆದ ಕಾರ್ಮಿಕರಲ್ಲಿ ಸಿಂಹಪಾಲು ರಿಯರದು, ಲ್ಯಾಟಿನೋಗಳದ್ದು ಉದ್ಯೋಗದಲ್ಲಿ ೊಡ್ಡ ಪ್ರಮಾಣದಲ್ಲಿ 'ವರ್ಣಬೇಧ' ವ್ಯವಸ್ಥೆ ಚರಿಸುವ ದೇಶ ಅಮೆರಿಕ. ಅತ್ಯಂತ ಪರಿಣತ ಗಾರರಿಗೂ ಈ 'ವರ್ಣಬೇಧ' ವ್ಯವಸ್ಥೆ ್ಯವಾಗುತ್ತದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಲಸ ಮಾಡುತ್ತಿರುವ ವಲಸೆ ಬಂದು ನೆಲೆಸಿರುವ

ಪುಟ 8 ಕ್ಕೆ

ಜಾಗತೀಕರಣ ಎಂಬ ರಣಹದ್ದು ಭಾರತದ ಸಣ್ಣ ದೊಡ್ಡ ಕೈಗಾರಿಕೆ ಉದ್ದಿಮೆಗಳನ್ನು ತಲೆಯ ಮೇಲೆ ಕುಕ್ಕುತ್ತಿದೆ. ಹತಾಶೆ - ಆತ್ಮಹತ್ಯೆಯ ಹಾದಿ ಹಿಡಿದು ಹುಳುಗಳಂತೆ ಸಾಯುತ್ತಿರುವ ರೈತರ ಜೀವನಗಳನ್ನು ಹೆಕ್ಕುತ್ತಿದೆ.

ಇದೋ ಬೆಂಗಳೂರಿನ ಕೆಲವು ಜೀವ ಬಿಡುತ್ತಿರುವ ಕೈಗಾರಿಕೆಗಳ ಕಥೆ ಇಲ್ಲಿದೆ.

ಕರ್ನಾಟಕ ಕೆಮ್ಮಣ್ಣು ಗುಂಡಿಯಲ್ಲಿ ಉತ್ಕೃಷ್ಟ ದರ್ಜೆಯ ಮ್ಯಾಂಗನೀಸ್ ಸಿಗುತ್ತದೆ. ನಾವು ಅದನ್ನು ಅಗ್ಗದ ದರಕ್ಕೆ ಹೊರಕ್ಕೆ ಕಳಿಸುತ್ತೇವೆ. ಈಗ ಉದಾರೀಕರಣದ ಫಲವಾಗಿ ಭಾರತ ಉಕ್ಕಿನ ಮಾರುಕಟ್ಟೆಗೆ ವಿದೇಶಿ ಕಂಪನಿಗಳು ಲಗ್ಗೆ ಇಟ್ಟಿವೆ. ಜಪಾನ್ ದೇಶದಿಂದ ಕಡಿಮೆ ದರದಲ್ಲಿ ಉಕ್ಕು ಬಂದು ಬೀಳುತ್ತಿದೆ. ಇದು ಸಾಲದೆಂಬಂತೆ ನಮ್ಮ ರಾಜ್ಯದಲ್ಲಿ ವಿದ್ಯುತ್ ದರ ಏರಿಕೆಯಿಂದ, ಕೆಲವು ತೆರಿಗೆಗಳಿಂದ, ಕೆಲವು ಕಚ್ಚಾ ವಸ್ತುಗಳ ಮೇಲಿನ ಹೆಚ್ಚು ತೆರಿಗೆಯಿಂದ ಉತ್ಪಾದನಾ ವೆಚ್ಚ ಹೆಚ್ಚಾಗಿದೆ. ಇಂತಹ ಕಾರಣಗಳಿಂದಾಗಿ ಬೆಂಗಳೂರಿನ ವೈಟ್‌ಫೀಲ್ಡ್, ಕೆ.ಆರ್.ಪುರ ಪ್ರದೇಶದಲ್ಲಿ ಹಿಂದೆ 2500 ಜನ ಕೆಲಸ ಮಾಡುತ್ತಿದ್ದ ಬರೂಕಾ ಸ್ಟೀಲ್ ಕಾರ್ಖಾನೆ ಈಗ ಮುಚ್ಚಿದೆ. ಸುಮಾರು ಒಂದು ಸಾವಿರ ಜನ ಕೆಲಸ ಮಾಡುತ್ತಿದ್ದ ಕ್ಯಾಪ್‌ಸ್ಟೀಲ್ ಕಾರ್ಖಾನೆ ಸಹ ಕೊನೆಯುಸಿರೆಳೆದಿದೆ.

ಬೀಗಬಿದ್ದಿರುವ ಕಾರ್ಖಾನೆಗಳು

ಇದೇ ರೀತಿಯಲ್ಲಿ ಒಂದು ಸಾವಿರ ಜನ ಕೆಲಸ ಮಾಡುತ್ತಿದ್ದ ಆಂಧ್ರ ಮತ್ತು ಮಿಥಲ್ ಸ್ಟೀಲ್ ಕಾರ್ಖಾನೆಗೆ ಬೀಗ ಬಿದ್ದಿದೆ. ಇದೇ ಉದಾರೀಕರಣದ ಜಾಗತೀಕರಣದ ಫಲವಾಗಿ ಈ ಕಾರ್ಖಾನೆಗಳಲ್ಲಿ ಕಾಯಂ ಕಾರ್ಮಿಕರ ಸಂಖ್ಯೆ ಕಡಿಮೆಯಾಗುತ್ತಾ ಬಂದು ಗುತ್ತಿಗೆ (ಕಾಂಟ್ರಾಕ್ಟ್) ಕಾರ್ಮಿಕರ ಸಂಖ್ಯೆಯೇ ಅಧಿಕವಾಗಿತ್ತು.

'ಭರೂಕ ಸ್ಟೀಲ್ಸ್' ಕಾರ್ಖಾನೆಯಲ್ಲಿನ 2500 ಕಾರ್ಮಿಕರಲ್ಲಿ 400 ಜನ ಮಾತ್ರ ಖಾಯಂ ಆದರೆ ಉಳಿದವರೆಲ್ಲಾ ಗುತ್ತಿಗೆ ಕಾರ್ಮಿಕರು ಹಾಗೆ ಕ್ಯಾಪ್ ಸ್ಟೀಲ್ ಕಾರ್ಖಾನೆಯ ಸಾವಿರ ಕಾರ್ಮಿಕರಲ್ಲಿ 150 ಜನ ಮಾತ್ರವೇ ಖಾಯಂ ಕಾರ್ಮಿಕರಿದ್ದದ್ದು ಅದೇ ರೀತಿ ಸಾವಿರ ಜನ ಕೆಲಸ ಮಾಡುತ್ತಿದ್ದ ಆಂಧ್ರ ಮತ್ತು ಮಿಥಲ್ ಸ್ಟೀಲ್ ಕಂಪನಿಯಲ್ಲಿ 150 ಜನ ಮಾತ್ರವೇ ಖಾಯಂ ಉಳಿದವರೆಲ್ಲಾ ಗುತ್ತಿಗೆ ಕಾರ್ಮಿಕರು.

ಅತಂತ್ರದಲ್ಲಿ ಕಾರ್ಮಿಕರ

ಕಾರ್ಮಿಕರ ಮೇಲೆರಗಿದ ಜಾಗತೀಕರಣ...

ನೆರವಿಗೆ ಬಾರದ ಕಾನೂನುಗಳು.

ಜಾಗತೀಕರಣದ ಭರಾಟೆ ಜೋರಾದಂತೆಲ್ಲಾ ಕಾರ್ಮಿಕ ಕಾನೂನುಗಳು ಸಡಿಲವಾಗುತ್ತಾ ಕಾರ್ಮಿಕರ ಬದುಕು ಅತಂತ್ರವಾಗುತ್ತಾ ನಡೆದಿದೆ. ಹಲವು ಕಾರ್ಖಾನೆಗಳಲ್ಲಿ ಕಾರ್ಮಿಕರು ಉತ್ಪಾದನೆ ಹೆಚ್ಚು ಮಾಡಬೇಕು ಇಲ್ಲವಾದಲ್ಲಿ ಪೈಪೋಟಿ ನಡೆಸಲು ಸಾಧ್ಯವಾಗದೆ ಕಾರ್ಖಾನೆ ಮುಚ್ಚಬೇಕಾಗುತ್ತದೆ ಎನ್ನುವ ಒತ್ತಡವನ್ನು ಮಾಲೀಕರು ಕಾರ್ಮಿಕರ ಮೇಲೆ ತರುತ್ತಿದ್ದಾರೆ. ಆದರೆ ಅದಕ್ಕೆ ತಕ್ಕಂತೆ ಸಂಬಳ ಹೆಚ್ಚಿಸುವ ಮಾತೇ ಇಲ್ಲ. ಇದಲ್ಲದೆ ಕಾರ್ಮಿಕರು ವೇತನ ಪರಿಷ್ಕರಣೆ ಸೇರಿದಂತೆ ತಮ್ಮ ನ್ಯಾಯಯುತ ಬೇಡಿಕೆಗಳ ಪಟ್ಟಿ ಸಲ್ಲಿಸಿದಾಗ ಇದೇ ಕಾರಣಕೊಟ್ಟು ಕಾರ್ಮಿಕರ ಬೇಡಿಕೆಯನ್ನು ತಿರಸ್ಕರಿಸಲಾಗುತ್ತಿದೆ. ಬದಲಾಗಿ ಹೆಚ್ಚಿಗೆ ಉತ್ಪಾದನೆ ಮಾಡಲೇಬೇಕೆಂದು ಇಲ್ಲವಾದರೆ ಕೈಗಾರಿಕೆ ಉಳಿಯಲಾರದು ಎಂದು ಹೆದರಿಸಿ, ಬೇಡಿಕೆ ಹಾಕದಂತೆ ದೂಡಲಾಗುತ್ತಿದೆ.

ಮುಕ್ತ ಆಮದು ನೀತಿಯನ್ನೇ ತೋರಿಸಿ ಕಾರ್ಮಿಕರ ಕನಿಷ್ಟ ಹಕ್ಕು ಬೇಡಿಕೆಗಳನ್ನು ನಿರಾಕರಿಸಲು ಕೆಲವು ಆತಂಕ ಮಂಡಳಿಗಳು ಮುಂದಾಗುತ್ತಿವೆ. ಕೊಯಮತ್ತೂರು, ಮೋಟಾರು ತಯಾರಕರಿಗೆ ಬೇಕಾದ ಮೋಟಾರುಗಳ ಬಿಡಿಭಾಗಗಳ ಲ್ಯಾಮಿನೇಷನ್ ಮಾಡಿ ಪೂರೈಸುತ್ತಿದ್ದ ರಾವ್ ಇನ್ಸುಲೇಟಿಂಗ್ ಕಂಪನಿ ಆಡಳಿತವರ್ಗ ಈಗ ತನಗೆ ನಷ್ಟವಾಗಿದೆಯೆಂದು, ಫ್ಯಾಕ್ಟರಿ ನಡೆಸಲಾಗದೆಂದು ಕಾರ್ಖಾನೆ ಮುಚ್ಚುವ, ಕೆಲಸಗಾರರನ್ನು ರಿಟ್ರೆಂಚಿಂಗ್ ಮಾಡುವ ಬೆದರಿಕೆ ಹಾಕಿದೆ. ಮನಬಂದಂತೆ ಕಾರ್ಮಿಕರನ್ನು ಬೇರೆಡೆ ಶಿಫ್ಟ್ ಮಾಡಲಾಗುತ್ತಿದೆ. ಹಾಗೆ ನೋಡಿದರೆ ಕಳೆದ ವರ್ಷವೇ 2.54 ಕೋಟಿ ರೂ ಲಾಭ ಮಾಡಿದ ಕಾರ್ಖಾನೆಯಿದು! ಮಾಲೀಕನು ಸಹ ಕಂಪ್ಯೂಟರ್ ತಯಾರಿಕೆಯತ್ತ ಈಗಾಗಲೇ ಹೆಜ್ಜೆ ಇರಿಸಿದ್ದಾರೆ.

ಪೈಪೋಟಿಯಿಂದ ತತ್ತರಿಸುವ ಕೈಗಾರಿಕೆಗಳು

ಆಮದು ವಸ್ತುಗಳಿಗೆ ಸುಂಕ ರಿಯಾಯಿತಿ ನೀಡಲಾಗುತ್ತಿರುವುದರಿಂದ ಹಲವು ವಿದೇಶಿ ಉತ್ಪಾದನೆಗಳ ಬೆಲೆ ಕಡಿಮೆಯಾಗಿ ನಮ್ಮ ದೇಶೀಯ ವಸ್ತುಗಳು ಅವುಗಳೊಂದಿಗೆ ಪೈಪೋಟಿ ನಡೆಸಲಾರದೆ ನೆಲಕಚ್ಚುವ ಪರಿಸ್ಥಿತಿ ಬಂದಿದೆ. ಇದರಿಂದಾಗಿ ಗುಡಿ ಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳು ಮುಚ್ಚುವ ಅಂದಾಜು ಮಾಡುತ್ತಿರುವುದು ಸಾಮಾನ್ಯವಾಗಿ ಕಂಡು ಬರುತ್ತಿದೆ. ಒಂದು ಕಾಲದಲ್ಲಿ ಕೈಗಾರಿಕಾ ಚಟುವಟಿಕೆ ಗಳಿಂದ ನಳನಳಿಸುತ್ತಿದ್ದ ವೈಟ್ ಫೀಲ್ಡ್, ಕೃಷ್ಣರಾಜ ಪುರಗಳು ಈಗ ಬೀಗ ಜಡಿದ ಕೈಗಾರಿಕೆಗಳಿಂದೆ ಬಿಕೋ ಎನ್ನುವಂತಾಗಿದೆ. ಸಿದ್ದ ಉಡುಪು ಕಾರ್ಖಾನೆಗಳ ಕತೆ ಇದಕ್ಕಿಂತ ಭಿನ್ನವಾಗೇನಿಲ್ಲ. ಸ್ಥಳೀಯ ಉತ್ಪನ್ನಗಳ ಮೇಲೆ ಸರಕಾರ ಶೇ 16 ರಷ್ಟು ತೆರಿಗೆಯನ್ನು ಹೊಸದಾಗಿ ಹಾಕಿರುವುದರಿಂದ ಚೀನಾ-ಬಾಂಗ್ಲಾ ದೇಶ- ಸಿಲೋನ್-ಬರ್ಮಾ ಮತ್ತಿತರ ದೇಶಗಳಿಂದ ಸಿದ್ಧ ಉಡುಪುಗಳು ನಮ್ಮ ದೇಶಕ್ಕೆ ಬರುತ್ತಿದ್ದು ಪೈಪೋಟಿ ನಡೆಸಲಾಗದೆ ಹಲವಾರು ಸಿದ್ಧ ಉಡುಪು ಕಾರ್ಖಾನೆ ಮುಚ್ಚುವ ಸಂಭವವಿರುತ್ತದೆ. ನಮ್ಮ ದೇಶದ ಈ ಕಾರ್ಖಾನೆಗಳಲ್ಲಿ 55 ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿದ್ದು ಶೇ 80 ರಷ್ಟು ಮಹಿಳಾ ಕಾರ್ಮಿಕರು ದುಡಿಯುತ್ತಿದ್ದಾರೆ.



'ಹೈರ್ ಅಂಡ್ ಫೈರ್' ಎಂಬ ನೀತಿಯಂತೆ ಕಾರ್ಮಿಕರನ್ನು ಬಳಸಿ ಬಿಸಾಡುವ ನೀತಿಯ ಜೊತೆಗೆ ಈಗ ಒಂದು ಸಾವಿರದವರೆಗೆ ಕಾರ್ಮಿಕರು ಕೆಲಸ ಮಾಡುವ ಕೈಗಾರಿಕೆಗಳನ್ನು ಮುಚ್ಚಲು ಮಾಲೀಕರಿಗೆ ಅವಕಾಶ ನೀಡುವ ಕೈಗಾರಿಕಾ ನೀತಿಗೆ ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದ್ದರಿಂದ ಕಾರ್ಮಿಕರ ಬದುಕು ಮುಂದೆ ಮತ್ತಷ್ಟು ದುರ್ಬರವಾಗಲಿದೆ.

ಎಚ್.ಎನ್.ಗೋಪಾಲಗೌಡ,
ಕೃಷ್ಣರಾಜಪುರ, ಬೆಂಗಳೂರು

ಹತಾಶೆ ಸ್ಥಿತಿಯಲ್ಲಿ ಕಾರ್ಮಿಕರು - ಕೈಚೆಲ್ಲಿ ಕುಂತ ಸರಕಾರ

ನಾಡನ್ನು ಸಿಂಗಾಪೂರ ಮಾಡಲು ಹೊರಟಿರುವ ಮುಖ್ಯಮಂತ್ರಿಯ ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಉದ್ಯಮಗಳು ಸಾರಾಸಗಟಾಗಿ ಮುಚ್ಚಿಕೊಳ್ಳುತ್ತಿವೆ. ಅಮೇರಿಕಾದಲ್ಲಿ ಮಾಹಿತಿ ತಂತ್ರಜ್ಞಾನ ಉದ್ದಿಮೆಯ ಪ್ರಗತಿ ನಿಂತಿದೆ. ಈ ಕಾರಣದಿಂದ ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳ, ಮಹಾರಾಷ್ಟ್ರಗಳಲ್ಲಿರುವ ಮಾಹಿತಿ ತಂತ್ರಜ್ಞಾನ ಉದ್ದಿಮೆಗಳನ್ನು ಮುಚ್ಚಲಾಗುತ್ತಿದೆ. ಮುಖ್ಯವಾಗಿ ಬೆಂಗಳೂರಿನ ಸುತ್ತಮುತ್ತ ಇರುವ ಸಾಫ್ಟ್‌ವೇರ್ ಕಂಪನಿಗಳಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಕಳೆದ 5-6 ತಿಂಗಳಿಂದ ಸಂಬಳ ಪಾವತಿ ಆಗುತ್ತಿಲ್ಲ.

ಹೆಸರುವಾಸಿ ಕಂಪನಿಯಾದ ವಿಪ್ರೊ ಇನ್‌ಫೂಟರ್ ಅವರ ಒಂದು ವಿಭಾಗದಲ್ಲಿ ದುಡಿಯುವ 500 ಕ್ಕೂ ಹೆಚ್ಚು ಕೆಲಸಗಾರರಿಗೆ ಲೇ-ಆಫ್ ಘೋಷಿಸಲಾಗಿದೆ. ಇತರ ಅನೇಕ ಇದೇ ರೀತಿಯ ಉದ್ದಿಮೆಗಳಲ್ಲಿ ಲೇ-ಆಫ್ ಕೊಡಲಾಗಿದೆ. ಕಳೆದ ವರ್ಷ ಬೆಂಗಳೂರಿನಿಂದ 7.475 ಕೋಟಿ ರೂಪಾಯಿಗಳ ಸಾಫ್ಟ್‌ವೇರ್ ಅನ್ನು ರಫ್ತು ಮಾಡಲಾಗಿತ್ತು. ಆದರೆ ಈ ವರ್ಷ 4.312 ಕೋಟಿ ರೂಪಾಯಿಯ ರಫ್ತು ಮಾತ್ರ ನಡೆದಿದೆ. ಬೆಂಗಳೂರಿನ ಸಾಫ್ಟ್‌ವೇರ್ ಟೆಕ್ನೋ ಪಾರ್ಕ್ ಇದರ ಸಂಬಂಧ ಇಟ್ಟಿರುವ 928 ಕಂಪನಿಗಳು ನಷ್ಟದಲ್ಲಿ ನಡೆಯುತ್ತಿವೆ. ಭಾರತದ ಮಾಹಿತಿ ತಂತ್ರಜ್ಞಾನ ಕಂಪನಿಗಳ ಮಾಲೀಕರು ಕಡಿಮೆ ಸಂಬಳಕ್ಕೆ ಗುತ್ತಿಗೆ ಆಧಾರದಲ್ಲಿ ಕೆಲಸಗಾರರನ್ನಿಟ್ಟು ಕೆಲಸ ಮಾಡಿಸುತ್ತಿದ್ದಾರೆ.

ಪರಾರಿಯಾಗುವ ಮಾಲಿಕರು ಬೆಂಗಳೂರಿನ ಕೈಗಾರಿಕಾ ಕೇಂದ್ರವಾದ ಪೀಣ್ಯ ಪ್ರದೇಶದಲ್ಲಿ ಸುಮಾರು 400 ಕ್ಕೂ ಹೆಚ್ಚು ಇಂಜಿನಿಯರಿಂಗ್ ಕಾರ್ಖಾನೆಗಳು ಮುಚ್ಚಿವೆ. ಕೆಲವು ಕಾರ್ಖಾನೆಗಳಲ್ಲಿ ಕಳೆದ 5-6 ತಿಂಗಳಿಂದ ವೇತನ ಕೊಡಲು ಕಷ್ಟವಾಗಿದೆ. ಕೆಲವು ಕಾರ್ಖಾನೆ ಮಾಲೀಕರು ಸಣ್ಣಪುಟ್ಟ ವಿಷಯಗಳನ್ನು ದೊಡ್ಡದು ಮಾಡಿ ಕಾರ್ಮಿಕರು ಮುಷ್ಕರ ಹೂಡುವಂತೆ ಪರೋಕ್ಷ ಪ್ರಚೋದನೆ ಮಾಡಿ, ಈ ಕಾರಣ ಮುಂದಿಟ್ಟು ಕಾರ್ಖಾನೆ ಮುಚ್ಚಿ ಪರಾರಿ ಆಗುತ್ತಾರೆ.

ಕಾಮಿಕರ ಅಲೆದಾಟ

ಇದರ ಪರಿಣಾಮವೆಂದರೆ ಕಾರ್ಮಿಕರಿಗೆ ಯಾವುದೇ ಪರಿಹಾರ ಸಿಗದೇ ಕಂಗಾಲಾಗಿ ಬೀದಿ ಪಾಲಾಗುವ ಸ್ಥಿತಿ ಬಂದಿದೆ. ಮಾಲೀಕರು ಕೈಗೆ ಸಿಗದೇ ಇರುವುದರಿಂದ ಸಂಬಳ ಇರಲಿ, ಕಾರ್ಮಿಕರಿಗೆ ಸಿಗಬೇಕಾದ ಪ್ರಾವಿಡೆಂಟ್ ಫಂಡ್, ಗ್ರಾಚ್ಯುಟಿ ಮತ್ತು ಅವರಿಗೆ ಬರಬೇಕಾದ ಕನಿಷ್ಠ ಹಣ ಸಿಗದೇ ಹೋಗಿದೆ. ಬದುಕಲೆಂದು ಸಣ್ಣಪುಟ್ಟ ಕೆಲಸಗಳಿಗೂ ಅಲೆದಾಡುವ ಸ್ಥಿತಿಬಂದಿದೆ. ಅತ್ತ ಸಾಲ ನೀಡಿದ ಬ್ಯಾಂಕುಗಳು ಅಥವಾ ಸಂಸ್ಥೆಗಳು ಈ ಕಾರ್ಖಾನೆಗಳನ್ನು ಸೀಜ್ ಮಾಡಿದ್ದಾರೆ. ಒಟ್ಟಾರೆ ಕಾರ್ಮಿಕರನ್ನು ಕೇಳುವವರೇ ಇಲ್ಲವಾಗಿದೆ. ಅಲ್ಲಲ್ಲಿ ಹೋರಾಟಗಳು ನಡೆದರೂ ಮೂಲ ಸಮಸ್ಯೆ ಬಗೆಹರಿಸಲು ಇನ್ನೂ ಸಾಧ್ಯವಾಗಿಲ್ಲ.

ಇತ್ತೀಚೆಗೆ ಮೈಸೂರು ರೋಡ್‌ನ ಚರ್ಮ(ಲೆದರ್) ಆಧಾರಿತ ಕೈಗಾರಿಕೆಯೊಂದು ಮುಚ್ಚಿತು. ವಿದೇಶಗಳಿಂದ ಸಿದ್ಧವಸ್ತುಗಳು ಮುಕ್ತವಾಗಿ ಆಮದಾಗುತ್ತಿರುವ ಪರಿಣಾಮವಿದು. ಕಾರ್ಖಾನೆ ಮುಚ್ಚಿ ಮಾಲೀಕ ಓಡಿದ. ಬ್ಯಾಂಕಿನವರು ಬಂದರು. ಕಾರ್ಖಾನೆ ಸೀಜ್ ಮಾಡಿದರು. ಆದರೆ ಕಾರ್ಮಿಕರು ಕಂಗಾಲಾಗಿದ್ದಾರೆ. ಅಲ್ಲಿಗೆ ಎಡತಾಕುವುದು ಬಿಟ್ಟರೆ ಬೇರೇನೂ ಮಾಡಲಾಗುತ್ತಿಲ್ಲ. ಇದು ಹಲವಾರು ಕಡೆಯ ಸ್ಥಿತಿ. ಒಂದು ಕಡೆ ಸಂಚಕಾರ ತಂದು, ಕೈಗಾರಿಕೆ ನಾಶ ಮಾಡಿದ, ಉದ್ಯೋಗಕ್ಕೆ ಸಂಚಕಾರ ತಂದ ಪರಿಸ್ಥಿತಿ. ಇನ್ನೂ ಹಲವು ಕೈಗಾರಿಕೆಗಳು ಈ ಹಾದಿ ಹಿಡಿಯುವ ದಿನಗಳು ದೂರವಿಲ್ಲ ಎನ್ನಿಸುತ್ತದೆ. ಕಾರ್ಖಾನೆಗಳ ಮುಚ್ಚುವಿಕೆಯಿಂದ ರಾಜ್ಯದ ಕಾರ್ಮಿಕ ಆಯುಕ್ತರ ಕಛೇರಿಯಲ್ಲಿ ಪರಿಹಾರ ಅರಸಿ ಬರುವ ಕಾರ್ಮಿಕರ ದಂಡನ್ನೇ ಸದಾ ಕಾಣಬಹುದು. ರಾಜ್ಯದಲ್ಲಿ ಆಡಳಿತ ಮಾಡುತ್ತಿರುವ ಎಸ್.ಎಂ.ಕೃಷ್ಣ ಸರಕಾರ ಇಂದು ಮಧ್ಯದ ಮಾಲೀಕರ ಲಾಭ ಹಾಗೂ ದೊಡ್ಡ ಕಂಪನಿಗಳ ಪರವಾಗಿ ಕೆಲಸ ಮಾಡುವ ಸರಕಾರವಾಗಿದೆ. ಕಾರ್ಮಿಕರಿಗೆ ಇಂದು ರಾಜ್ಯದಲ್ಲಿ ಯಾವ ರಕ್ಷಣೆಯೂ ಇಲ್ಲ.

- ಇ.ಕೆ.ಎನ್.ರಾಜನ್

ಉದಾರೀಕರಣ - ಉದ್ಯೋಗ ಹರಣ - ಪಾತಾಳ ತಲುಪುತ್ತಿರುವ ಉದ್ಯೋಗಗಳು

ಭಾರತದಲ್ಲಿ ಉದಾರೀಕರಣ ತೀವ್ರವಾಗುತ್ತಿರುವಂತೆ, ಉದ್ಯೋಗ ಅವಕಾಶಗಳು ಅಷ್ಟೇ ವೇಗವಾಗಿ ಕಡಿಮೆಯಾಗುತ್ತಿವೆ. ಕೃಷಿಯ ಮೇಲೆ ಅವಲಂಬಿತವಾಗಿರುವ ಗ್ರಾಮೀಣ ಪ್ರದೇಶದಲ್ಲಂತೂ ಈ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದೆ.

ಪ್ರತಿವರ್ಷ ಸಾಧಾರಣ ಶೇಕಡಾ 1.8 ರಷ್ಟು ಜನಸಂಖ್ಯೆ ಜಾಸ್ತಿಯಾಗುತ್ತಿದೆ ಎಂದು ಅಂದಾಜು ಮಾಡಲಾಗಿದ್ದರೆ, ಉದ್ಯೋಗದ ಅವಕಾಶಗಳು ಹೆಚ್ಚಾಗುತ್ತಿರುವುದು ಶೇಕಡಾ 1 ರಷ್ಟು ಮಾತ್ರ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಶೇಕಡಾ 0.67 ರಷ್ಟಿದೆ. ಅಂದರೆ ಭಾರತ ದೇಶವು ಅನುಸರಿಸುತ್ತಿರುವ ಬಂಡವಾಳಶಾಹಿ ಆರ್ಥಿಕ ನೀತಿಯಿಂದ ನಿರುದ್ಯೋಗಿಗಳ ದೊಡ್ಡ ಸೈನ್ಯವೇ ಸೃಷ್ಟಿಯಾಗಿವೆ. ಜಾಗತೀಕರಣದ ನಂತರ ಇದು ಇನ್ನಷ್ಟು ಜಾಸ್ತಿಯಾಗುತ್ತಿದೆ. 1983-88 ರ ಅವಧಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೇಕಡಾ 1.36 ರಷ್ಟು ಉದ್ಯೋಗಗಳು ಹೆಚ್ಚಿದ್ದರೆ, ಪಟ್ಟಣ ಪ್ರದೇಶದಲ್ಲಿ ಶೇ 2.77 ರಷ್ಟು ಹೆಚ್ಚಿತ್ತು, ಆದರೆ ಉದಾರೀಕರಣ ಆರಂಭಗೊಂಡು ತೀವ್ರವಾದಂತೆ ಉದ್ಯೋಗದ ಅವಕಾಶವೂ ಕಡಿಮೆಯಾಯಿತು. (ಉದಾಹರಣೆಗೆ ಕೋಷ್ಟಕ 1 ನೋಡಿ.)

ಕೋಷ್ಟಕ -1

ಉದ್ಯೋಗ ಹೆಚ್ಚಳದ ಶೇಕಡಾ ದರ (ಪ್ರತಿವರ್ಷಕ್ಕೆ)

ಅವಧಿ	ಗ್ರಾಮೀಣ	ನಗರ
1983 ರಿಂದ 1987-88	1.36	2.77
1987-88 ರಿಂದ 1993-94	2.03	2.29
1993-94 ರಿಂದ 1999-2000	0.67	1.34

(ಸರ್ಕಾರ ಪ್ರಕಟಿಸಿರುವ 5ನೇ ಸ್ಯಾಂಪಲ್ ಸರ್ವೆ ವರದಿಯಂತೆ)

ಈ ಉದ್ಯೋಗದ ಹೆಚ್ಚಳವೂ ಕೂಡ ಸಂಘಟಿತ ವಲಯದಲ್ಲಿ ಆಗುತ್ತಿಲ್ಲ. ಅಂದರೆ ಜಾಸ್ತಿ ವೇತನ ಸಿಗುವ ಸರಕಾರಿ ವಲಯ, ಬ್ಯಾಂಕು, ಎಲ್.ಐ.ಸಿ., ಸಾರ್ವಜನಿಕಉದ್ದಿಮೆ ಇತರೆ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗಗಳ ಸಂಖ್ಯೆ ಜಾಸ್ತಿಯಾಗುತ್ತಿಲ್ಲ. ಬದಲಾಗಿ ಸಾರ್ವಜನಿಕ ಉದ್ದಿಮೆಯಲ್ಲಿ 1994-95 ರಿಂದ 95-96 ರಲ್ಲಿ ಒಂದು ಲಕ್ಷ ಮತ್ತು 1996-97 ರಿಂದ 1997-98 ರಲ್ಲಿ ಒಂದು ಲಕ್ಷದಷ್ಟು ಉದ್ಯೋಗಿಗಳ ಸಂಖ್ಯೆ ಕಡಿಮೆ ಆಗಿದೆ. ಇತ್ತೀಚೆಗೆ ಬ್ಯಾಂಕುಗಳಲ್ಲಿ ಹಾಗೂ ಇನ್ನಿತರ ಸಂಘಟಿತ ವಲಯಗಳಲ್ಲಿ ಜಾರಿಗೆ ಬಂದ ನಿವೃತ್ತಿಯೋಜನೆಯ ನಂತರ ಉದ್ಯೋಗಗಳ ಸಂಖ್ಯೆ ಇನ್ನಷ್ಟು ಕಡಿಮೆಯಾಗಿದೆ.

1990-91 ರಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿದ ಅಭ್ಯರ್ಥಿಗಳ ಸಂಖ್ಯೆ 3 ಕೋಟಿ 46 ಲಕ್ಷ 1997-98 ರಲ್ಲಿ ಈ ಸಂಖ್ಯೆ 3 ಕೋಟಿ 92 ಲಕ್ಷಕ್ಕೆ ಏರಿದೆ. ಅಂದರೆ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿಕೊಂಡ ನಿರುದ್ಯೋಗಿಗಳ ಸಂಖ್ಯೆ 7 ವರ್ಷಗಳಲ್ಲಿ 46 ಲಕ್ಷದಷ್ಟು ಹೆಚ್ಚಿದೆ. ಇನ್ನು ಹಲವಾರು ಪಟ್ಟು ನಿರುದ್ಯೋಗಿಗಳು ನೊಂದಾಯಿಸಿಕೊಳ್ಳುತ್ತಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಚಾರ.

ಹಾಗಾದರೆ ಅಲ್ಪಸ್ವಲ್ಪ ಉದ್ಯೋಗ ಹೆಚ್ಚಳ ಆಗಿರುವುದು ಹೇಗೆ? ಬೆಲೆ ಏರಿಕೆಯ ತಾಪವನ್ನು ತಾಳಲಾರದೆ ಕುಟುಂಬದ ಆದಾಯ ಹೆಚ್ಚಿಸಲೋಸುಗ ಮಹಿಳೆ, ಮಕ್ಕಳೂ ಕೂಡಾ 'ಕೆಲಸಗಾರ'ರಾಗಿ ಪರಿವರ್ತನೆ ಆಗುತ್ತಿದ್ದಾರೆ. ಆದರೂ ಕೂಡಾ ಜನಸಂಖ್ಯೆಯ ಏರಿಕೆಗೆ ಸರಿಯಾಗಿ ಉದ್ಯೋಗ ಹೆಚ್ಚಳ ಆಗುತ್ತಿಲ್ಲ. ಬದಲಾಗಿ ಇಳಿಮುಖವಾಗುತ್ತಿದೆ. ಜನಸಾಮಾನ್ಯರಿಗೆ ಉದಾರೀಕರಣದ ಕೊಡುಗೆ ಇದು.

ಅಮೆರಿಕದಲ್ಲಿ ಕಾರ್ಮಿಕರ ಸ್ಥಿತಿ.....

ಪುಟ 7 ರಿಂದ

ಉದ್ಯೋಗಿಗಳಿಗೆ ದೇಶಿಯ ಬಿಳಿಯರಿಗೂ ಶೇಕಡ 20 ರಿಂದ 30 ರಷ್ಟು ವೇತನ ಕಡಿಮೆ ಕೊಡಲಾಗುತ್ತದೆ. ಲೇ-ಆಫ್ ಆದಾಗ ಕೆಲಸ ಕಳೆದುಕೊಳ್ಳುವವರಲ್ಲಿ ಅವರೇ ಮೊದಲಿಗರು. ಈಗ ಮಾಹಿತಿ ತಂತ್ರಜ್ಞಾನದ ಉದ್ಯಮದಲ್ಲಿ ಬಂದಿರುವ ಬಿಕ್ಕಟ್ಟಿನಲ್ಲಿ ಆದದ್ದೂ ಅದೇ. ಮೊನ್ನೆ ಮೊನ್ನೆ ವರೆಗೆ 'ಸ್ವಾತಂತ್ರ್ಯದೇವಿ' ಕೈಬೀಸಿ ಕರೆಯುತ್ತಿದ್ದ, ಈ H2-B ಉದ್ಯೋಗಗಳನ್ನು ಮೂಲಾಜಿಲ್ಲದೆ ವಾಪಾಸು ಕಳಿಸಲಾಗುತ್ತಿದೆ.

ವಲಸೆ ಮಾಫಿಯಾ ಮತ್ತು 'ಕಾನೂನು-ಬಾಹಿರ' ಕಾರ್ಮಿಕರು

ವಲಸೆ ಬಂದ ಕಾರ್ಮಿಕರನ್ನು ಬೇಕಾದಾಗ ಬಳಸಿ, ಬೇಡದಾಗ ಒಗೆಯಲು 'ಕೆಲಸದ ವೀಸಾ' ಬಳಸಲಾಗುತ್ತದೆ. ಹೆಚ್ಚಿನ ವಲಸೆಕಾರ್ಮಿಕರನ್ನು ಕಾನೂನು-ಬಾಹಿರ, ಅರೆ ಕಾನೂನು ಬಾಹಿರ ಸ್ಥಿತಿಯಲ್ಲಿ ಇಟ್ಟು ಅವರ ಅಭದ್ರತೆಯನ್ನು ಕಡಿಮೆ ಕೂಲಿಗೆ ದುಡಿಯುವಂತೆ ಬಳಸಲಾಗುತ್ತದೆ. ಅಮೆರಿಕದ ದಕ್ಷಿಣದ ಐದಾರು ಪ್ರಾಂತ್ಯಗಳಲ್ಲಿ, ಇತರೆಡೆಯೂ ಮೆಕ್ಸಿಕೋ ಮತ್ತು ಇತರ ಲ್ಯಾಟಿನ್(ದಕ್ಷಿಣ) ಅಮೆರಿಕಾದಿಂದ ವಲಸೆ ಬಂದ ಕಾರ್ಮಿಕರು ದೊಡ್ಡ ಪ್ರಮಾಣದಲ್ಲಿ ಇದ್ದಾರೆ. ಜಾಡಮಾಲಿಗಳು, ಕ್ಯಾಂಟೀನ್‌ಗಳು, ರಸ್ತೆ ರಿಪೇರಿ ಸಾಗಾಣಿಕೆ ಇತ್ಯಾದಿ ಸೇವಾ ಕ್ಷೇತ್ರಗಳಲ್ಲಿ ಅತ್ಯಂತ ಕನಿಷ್ಠ ಕೂಲಿಗೆ ಅವರು ದುಡಿಯುತ್ತಾರೆ. ಅವರಲ್ಲಿ ದೊಡ್ಡ ಪ್ರಮಾಣದಲ್ಲಿ 'ಕಾನೂನು-ಬಾಹಿರ'ವಾಗಿ ವಲಸೆ ಬಂದವರು ಕಾನೂನು - ಬಾಹಿರವಾಗಿ ಬಂದಿದ್ದರಿಂದ ಅವರಿಗೆ ಯಾವುದೇ ಸವಲತ್ತು (ವೈದ್ಯಕೀಯ, ಭವಿಷ್ಯ ನಿಧಿ, ಸಂಘಟನಾ ಹಕ್ಕು, ನಿರುದ್ಯೋಗ ಭತ್ಯೆ) ಸಿಗುವುದಿಲ್ಲ. ಅಮೆರಿಕದ ವಲಸೆ ಇಲಾಖೆ ಸತತವಾಗಿ ಅವರ ಬೇಟೆಯಾಡುತ್ತಿರುತ್ತದೆ. ಆದರೆ ಅವರು 'ಕಾನೂನು-ಬಾಹಿರ'ವಾಗಿ ಅಮೆರಿಕ ಒಳಗೆ ಬರುವುದು 'ವಲಸೆ ಮಾಫಿಯ' ಮತ್ತು 'ವಲಸೆ ಇಲಾಖೆ' ಯ ಸಹಕಾರದಿಂದ. ಮೆಕ್ಸಿಕೊ ಮತ್ತು ನೆರೆಹೊರೆಯಲ್ಲಿರುವ ಭಾರಿ ಬಡತನ ಮತ್ತು ಅಮೆರಿಕ 'ಕನಸಿನ ನಾಡು' ಎಂಬ ಭಾವನೆ ಬಳಸಿ ವಲಸೆ ಮಾಫಿಯಾ ಇವರಿಂದ ಹಣ ಸಂಗ್ರಹಿಸಿ(ಹಲವಾರು ಬಾರಿ ಇದು ಸಾವಿರಾರು ಡಾಲರುಗಳಾಗಿರುತ್ತದೆ) ಅವರನ್ನು ಕಾನೂನು ಬಾಹಿರವಾಗಿ ಮೆಕ್ಸಿಕೊದ ಜತೆಗಿರುವ ದಕ್ಷಿಣದ ಭೂಗಡಿಯ ಮೂಲಕ ಕಳ್ಳ ಸಾಗಾಣಿಕೆ ಮಾಡುತ್ತಾರೆ. ವಲಸೆ ಇಲಾಖೆಯನ್ನು 'ನೋಡಿಕೊಳ್ಳುವ' ಮೂಲಕ ಈ ಕಳ್ಳ ಸಾಗಾಣಿಕೆ ಮಾಡುತ್ತಾರೆ. ಈ ಗುಪ್ತ ಪಿತೂರಿ ಮುಚ್ಚಿಹಾಕಲು ಆಗಾಗ ಈ 'ಕಳ್ಳ ಸಾಗಾಣಿಕೆ' ಆಗುವ ಕಾರ್ಮಿಕರನ್ನು ಬಂಧಿಸಲಾಗುತ್ತದೆ. ಜೈಲಿಗೆ ಹಾಕಲಾಗುತ್ತದೆ. ಈ ರೀತಿ ಕಳ್ಳ ಸಾಗಾಣಿಕೆ ಆಗಿರುವ ಕಾರ್ಮಿಕರನ್ನು ಅಮೆರಿಕದ ಅತ್ಯಂತ ಕನಿಷ್ಠ ಕೂಲಿ ಕೊಡುವ ಉದ್ಯಮಗಳಲ್ಲಿ, ಕ್ಷೇತ್ರಗಳಲ್ಲಿ ದುಡಿಮೆಗೆ ತೊಡಗಿಸಲಾಗುತ್ತದೆ. ಹಲವಾರು ಬಾರಿ ಅವರ ಪಾಸ್‌ಪೋರ್ಟ್‌ಗಳನ್ನು ಈ ಮಾಫಿಯ ಜನ ತೆಗೆದಿಟ್ಟುಕೊಂಡು ಅವರನ್ನು ಶಾಶ್ವತ 'ಕಾನೂನು-ಬಾಹಿರ' ಸ್ಥಿತಿಯಲ್ಲಿಟ್ಟು ಗುಲಾಮರ ರೀತಿಯಲ್ಲಿ ದುಡಿಸಲಾಗುತ್ತದೆ. ಅವರ ದುಡಿಮೆಯ ಸ್ಥಿತಿ ನಮ್ಮ ದೇಶ ಸೇರಿದಂತೆ ಮೂರನೇ ಜಗತ್ತಿನ ದೇಶಗಳಲ್ಲಿರುವ ಜೀತದದುಡಿಮೆ ಯಂತೆ ಇರುತ್ತದೆ. ಅವರೇನಾದರೂ ಅವರ 'ಮಾನವ ಹಕ್ಕು' ಸಾಧಿಸಲು ಮುಂದಾದರೆ ಅವರನ್ನು ವಲಸೆ ಇಲಾಖೆಗೆ ಹೇಳಿ ಬಂಧಿಸಿ ದೇಶದಿಂದ ಹೊರಗೆ ಅಟ್ಟಲಾಗುತ್ತದೆ. ಕೆಲವೊಮ್ಮೆ ಅವರು ಹೇಳಿದ್ದಲ್ಲಾ ಮಾಡಿದರೋ, ಅವರನ್ನು ದೇಶಧಿಂದ ಹೊರದಬ್ಬಲಾಗುತ್ತದೆ. ಈ ಹೊಸ ವಲಸೆ ಕಾರ್ಮಿಕರನ್ನು ಕರೆದುಕೊಂಡು ಬಂದು, ಇನ್ನಷ್ಟು ಕಡಿಮೆ ಕೂಲಿಯಲ್ಲಿ ಕೆಲಸ ಮಾಡಲು ಇದು ಸಹಾಯಕವಾಗುತ್ತದೆ. ಎಲ್ಲಾ ವಲಸೆ ಕಾರ್ಮಿಕರನ್ನು 'ಕಾನೂನು ಬಾಹಿರ' ಎಂಬ ಭಯದಡಿಯಲ್ಲಿಡಲು ಇದು ಸಹಾಯಕವಾಗುತ್ತದೆ.

ಬಾಲ ಕಾರ್ಮಿಕರು

ಬಾಲ ಕಾರ್ಮಿಕರು ಮೂರನೇ ಜಗತ್ತಿನಲ್ಲಿ ಮಾತ್ರ ಇರುವುದು ಎಂದುಕೊಂಡವರಿಗೆ ಆಶ್ಚರ್ಯ ಕಾದಿದೆ. ಅಮೆರಿಕಾದಲ್ಲಿ ದೊಡ್ಡ ಪ್ರಮಾಣದಲ್ಲಿ ಹದಿಹರೆಯದ ಬಾಲ ಕಾರ್ಮಿಕರನ್ನು ಕೆಲಸಕ್ಕೆ ಹಚ್ಚಲಾಗುತ್ತಿದೆ. ಒಂದು ಗಂಟೆ ಕೂಲಿ ಕಾರ್ಮಿಕರಿಗಾಗಿ ಹದಿಹರೆಯದವರು ಪಾರ್ಟ್‌ಟೈಂ ಕೆಲಸ ಮಾಡುವುದು ಅಮೆರಿಕದಲ್ಲಿ ಕಾನೂನು ಬಾಹಿರವಲ್ಲ. ಕೆಲಸ ಕಲಿಯಲು, ತರಲೆ ಕೆಲಸಗಳಿಂದ ದೂರವಿರಲು, 'ಕಾಯಕವೇ ಕೈಲಾಸ' ಎಂಬುದನ್ನು ಅರಿಯಲು ಸ್ವಲ್ಪ 'ಪಾಕೆಟ್ ಮನಿ' ಸಂಪಾದಿಸಲು ಹದಿಹರೆಯದವರನ್ನು ಅಮೆರಿಕದ ಸಮಾಜದ ಕೆಲಸ ಮಾಡಲು ಉತ್ತೇಜನ ಕೊಡುತ್ತದೆ. ಆದರೆ ವಾರಕ್ಕೆ ಮಕ್ಕಳು ಒಂದು ಗಂಟೆಗಿಂತ ಹೆಚ್ಚು ಕೆಲಸ ಮಾಡಬಾರದು ಎಂದು ಕಾನೂನು ಇದೆ. ಅವರನ್ನು ಅಪಾಯಕಾರಿ ಮಶೀನುಗಳ ಜತೆ ಕೆಲಸ ಮಾಡಲು ಬಳಸಬಾರದು ಎಂಬ ಕಾನೂನು ಇದೆ. ಇವೆಲ್ಲವನ್ನು ಬೇಕಾಬಿಟ್ಟಿಯಾಗಿ ಉಲ್ಲಂಘಿಸಿ ಬಾಲ ಕಾರ್ಮಿಕರನ್ನು ಬಳಸಲಾಗುತ್ತದೆ. ಇತ್ತೀಚೆಗೆ ಪ್ರಖ್ಯಾತ ಸೀಯರ್ಸ್, ರ್‍ಯಾಂಡಲ್ಸ್, ರೊಬಕ್ ಎಂಬ ಸೂಪರ್ ಮಾರ್ಕೆಟ್ 'ಚೈನ್' ಕಂಪನಿಗಳಿಗೆ ಬಾಲಕಾರ್ಮಿಕ ಕಾನೂನು ಉಲ್ಲಂಘಿಸಿದ್ದಕ್ಕೆ ದಂಡ ವಿಧಿಸಲಾಯಿತು. ಕಂಡ ತೆತ್ತು ಬಾಲಕಾರ್ಮಿಕರ ಶೋಷಣೆ ಅವ್ಯಾಹತವಾಗಿ ನಡೆದಿದೆ.

ಜೈಲು ಕಾರ್ಮಿಕರು

ಅಮೆರಿಕ ಅತ್ಯಂತ ಹೀನ ಸ್ಥಿತಿಯಲ್ಲಿರುವ ಕಾರ್ಮಿಕರೆಂದರೆ 'ಜೈಲು ಕಾರ್ಮಿಕರು'. ಬಹುಶಃ ಇದು ಯಾವುದೇ ಇತರ ದೇಶದಲ್ಲಿರದ ಕಾರ್ಮಿಕ ವಿಭಾಗ ಇತರರಿಗೆ 'ಮಾನವ ಹಕ್ಕುಗಳ ಬಗ್ಗೆ ಉಪದೇಶ ಮಾಡುವ ಅಮೇರಿಕದಲ್ಲಿ ಜೈಲಿನಲ್ಲಿರುವ ಕೈದಿಗಳನ್ನು ಜೀತದ ಸ್ಥಿತಿಯಲ್ಲಿ ದೊಡ್ಡ ಪ್ರಮಾಣದಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ಕಳೆದ 15 ವರ್ಷಗಳಲ್ಲಿ ಅಮೆರಿಕದ ಜೈಲುಕೈದಿಗಳ ಸಂಖ್ಯೆ ಮೂರು ಪಟ್ಟಾಗಿದೆ. ಅಪರಾಧ ಅಮೆರಿಕದಲ್ಲಿ ಎಷ್ಟು ವೇಗವಾಗಿ ಬೆಳೆಯುತ್ತಿದೆ ಎಂದರೆ ಅಮೆರಿಕದ ಸರ್ಕಾರದ ಜೈಲು ಕಟ್ಟಲು, ನಡೆಸಲು ಖಾಸಗಿಯವರಿಗೆ ವಹಿಸಿಕೊಟ್ಟು ಬಿಟ್ಟಿದೆ. ಎಲ್ಲವೂ ಖಾಸಗಿಯಾಗಿರುವ ದೇಶದಲ್ಲಿ ಜೈಲು ಮಾತ್ರ ಏಕೆ ಅಪವಾದವಾಗಿರಬೇಕು? ಈಗ ಜೈಲನ್ನು ನಡೆಸುವ ಹಲವಾರು ದೈತ್ಯ ಕಂಪನಿಗಳು ಹುಟ್ಟಿಕೊಂಡಿವೆ. 1996 ರ ಅಂಕೆ-ಸಂಖ್ಯೆ ಪ್ರಕಾರ 65 ಸಾವಿರ ಕೈದಿಗಳು ಈ 'ಖಾಸಗಿ ಜೈಲು'ಗಳಲ್ಲಿದ್ದಾರೆ. ಈ ಖಾಸಗಿ ಜೈಲುಗಳು ಕಾನೂನು ಬದ್ಧ ಜೀತದ ದುಡಿಮೆಯ ಕೇಂದ್ರಗಳಾಗಿವೆ. ಈ 'ಖಾಸಗಿ ಜೈಲು'ಗಳು ಅಮೆರಿಕದ ದೊಡ್ಡ ಪ್ರಸಿದ್ಧ ಕಾರ್ಪೋರೇಷನ್‌ಗಳಿಂದ ಕೆಲಸ ಕಾಂಟ್ರಾಕ್ಟ್ ಮೇಲೆ ತೆಗೆದುಕೊಳ್ಳುತ್ತಿದೆ. TWA(ಅಮೆರಿಕದ ದೊಡ್ಡ ವಿಮಾನಯಾನ ಕಂಪನಿ), ಐಬಿಎಂ, ಟೆಕ್ಸಾಸ್, ಇನ್‌ಸ್ಟ್ರುಮೆಂಟ್, ಡೆಲ್‌ಕಂಪ್ಯೂಟರ್ಸ್, ಎಟಿ ಅಂಡ ಟಿ, ಮೈಕ್ರೋಸಾಫ್ಟ್ ಇತ್ಯಾದಿ ದೊಡ್ಡ ಹೆಸರುಗಳು ಜೈಲು ಕಂಪನಿಯ ಜೀತದ ದುಡಿಮೆ ಬಳಸುತ್ತಿದ್ದಾರೆ. ಈ ಕಂಪನಿಗಳು ತಮ್ಮ ಜೈಲು ಕಾರ್ಮಿಕರಿಗೆ ಕನಿಷ್ಠ ಕೂಲಿಯ ಅರ್ಧದಷ್ಟು ಮಾತ್ರ ಕೂಲಿ ಕೊಡುತ್ತಾರೆ. ಈ ಪದ್ಧತಿಯಿಂದಾಗಿ ಅಮೆರಿಕದಲ್ಲಿ ಮುಂದಿನ ವರ್ಷಗಳಲ್ಲಿ ನಾಲ್ಕು ಲಕ್ಷಗಳಷ್ಟು ಉದ್ಯೋಗಗಳು ಮಾಯವಾಗಿ ಜೈಲು-ಕಾರ್ಮಿಕರಿಗೆ ಮೀಸಲಾಗಿಡಬಹುದು ಎಂದು ಅಂದಾಜು ಮಾಡಲಾಗಿದೆ. ಸರ್ಕಾರಿ ಜೈಲುಗಳಲ್ಲೂ ಕೈದಿಗಳನ್ನು ಸಕ್ರಿಯವಾಗಿಡುವುದು ಅವರನ್ನು ರಿಪೇರಿ ಮಾಡುವ ಹೆಸರಲ್ಲಿ ಈ ಜೀತದ ದುಡಿಮೆ ಪದ್ಧತಿ ಜಾರಿಯಲ್ಲಿ ಬಂದಿದೆ. ಒಟ್ಟಾರೆ ಜೈಲು ಕಾರ್ಮಿಕರು ಸುಮಾರು 900 ಕೋಟಿ ಡಾಲರು ಬೆಲೆ ಬಾಳುವ ಉತ್ಪಾದನೆ ಮಾಡುತ್ತಿದ್ದಾರೆ ಎಂದು ಅಂದಾಜು ಮಾಡಲಾಗಿದೆ.

ಟ್ರೇಡ್ ಯೂನಿಯನ್ ಚಳುವಳಿ ಮತ್ತೆ ಗರಿಗೆದರುತ್ತಿದೆ

ಜಗತ್ತಿನ ಅತ್ಯಂತ ಶ್ರೀಮಂತ ದೇಶದಲ್ಲಿ ಕಾರ್ಮಿಕರಿಗೆ ಈ ಪರಿಸ್ಥಿತಿ ಏಕೆ? ಜಗತ್ತಿನ ಕಾರ್ಮಿಕರಿಗೆ 'ಎಂಟುಗಂಟೆ' ದುಡಿಮೆಯ ಕೊಡುಗೆ ಕೊಟ್ಟ, 'ಮೇ ದಿನ' ವನ್ನು ಕೊಟ್ಟ ಕಾರ್ಮಿಕ ವರ್ಗಕ್ಕೆ ಏಕೀ ದುಸ್ಥಿತಿ? ಇದಕ್ಕೂ ಅಮೆರಿಕದ ಟ್ರೇಡ್ ಯೂನಿಯನ್ ಚಳುವಳಿಯ ಸ್ಥಿತಿಗೂ ತೀರ ಸಂಬಂಧವಿದೆ. ಎರಡನೇ ಮಹಾಯುದ್ಧದ ನಂತರ ಅತ್ಯಂತ ಅಭಿವೃದ್ಧ ಟ್ರೇಡ್ ಯೂನಿಯನ್ ಚಳುವಳಿ ಎಂದು ಹೆಸರಾಗಿದ್ದ ಅಮೆರಿಕದ ಕಾರ್ಮಿಕ ವರ್ಗದ ಐಕ್ಯತೆಯನ್ನು ಸರ್ಕಾರ ವ್ಯವಸ್ಥಿತವಾಗಿ, ನಿರ್ದಯದಿಂದ ಮುರಿಯಿತು. ಮೊದಲು ಕಮ್ಯುನಿಸ್ಟರನ್ನು, ಎಡಪಂಥೀಯ ಪ್ರಗತಿಪರರನ್ನು ಟ್ರೇಡ್ ಯೂನಿಯನ್ ನಾಯಕತ್ವದಿಂದ ಹೊರದಬ್ಬಲು ಎಲ್ಲಾ ಕಾನೂನು-ಬದ್ಧ, ಕಾನೂನು ಬಾಹಿರ ಕ್ರಮಗಳನ್ನು ಬಳಸಲಾಯಿತು. ಮೇಕಾರ್ಥಿವಾದ ಎಂದು ಕುಖ್ಯಾತವಾದ ಕಾನೂನುಗಳಿಂದ(ಯಾರನ್ನಾದರೂ ಕಮ್ಯುನಿಸ್ಟರು, 'ಅಮೆರಿಕಾ ವಿರೋಧಿ' ...ತೊಡಗಿದ್ದಾರೆ ಎಂದು ಆಪಾದಿಸಿದರೆ ಸಾಕು ಅವರಿಂದ ಎಲ್ಲಾ ನಾಗರಿಕ ಹಕ್ಕುಗಳನ್ನು ಕಿತ್ತುಕೊಳ್ಳಬಹುದಿತ್ತು). ಇದನ್ನು ಸಾಧಿಸಲಾಯಿತು. ಆಮೇಲೆ ಮಾಲಕರ ಪರ, ಸರ್ಕಾರದ ಪರ ನಾಯಕತ್ವವನ್ನು ಸ್ಥಾಪಿಸಿ ಅವರನ್ನು ಭ್ರಷ್ಟಗೊಳಿಸಲಾಯಿತು. ಈ ಭ್ರಷ್ಟ ಟ್ರೇಡ್ ಯೂನಿಯನ್ ನಾಯಕರ ಬಲದಿಂದ ಅತ್ಯಂತ ದೊಡ್ಡ ಟ್ರೇಡ್ ಯೂನಿಯನ್ ನಾಯಕರ ಬಲದಿಂದ ಅತ್ಯಂದ ದೊಡ್ಡ ಟ್ರೇಡ್ ಯೂನಿಯನ್ನುಗಳು ಇದ್ದರೂ ಮಾಲಕ-ಕಾರ್ಮಿಕರ ಸಹಕಾರ ನೀತಿಯನ್ನು 60-70 ರ ದಶಕದಲ್ಲಿ ಅನುಸರಿಯಾಯಿತು. 50-60ರ ದಶಕಗಳ ದೀರ್ಘ ಸುಗ್ಗಿಯ ಕಾಲದಲ್ಲಿ ಕಾರ್ಮಿಕರ ಒಂದು ವಿಭಾಗಕ್ಕೆ ಕೆಲವು ಸವಲತ್ತುಕೊಟ್ಟು, ಇತರ ವಿಭಾಗಗಳನ್ನು ಆಮದು ಮಾಡಲಾಗುವುದು. ಆದರೆ 70 ರ ದಶಕದ ಕೊನೆ ಭಾಗದಲ್ಲಿ 'ದೀರ್ಘ ಆರ್ಥಿಕ ಸುಗ್ಗಿ' ಕೊನೆಗೊಳ್ಳುತ್ತಿದ್ದಂತೆ ಕಾರ್ಮಿಕರು ಮುಷ್ಕರ, ಹೋರಾಟದ ಹಾದಿ ಹಿಡಿದರು. ರೇಗನ್ ಅಧಿಕಾರಕ್ಕೆ ಬಂದಾಗ ಅತ್ಯಂತ ವ್ಯವಸ್ಥಿತ, ನಿರ್ದಯ ರೀತಿಯಲ್ಲಿ ಈ ಮಹಾ ಮುಷ್ಕರಗಳನ್ನು ಮುರಿಯಲಾಯಿತು. 1981 ರಲ್ಲಿ 11 ಸಾವಿರ ವಿಮಾನಯಾನ ಕಾರ್ಮಿಕರನ್ನು ಸಾರಸಗಟಾಗಿ ವಜಾ ಮಾಡುವ ಮೂಲಕ ರೇಗನ್ ಕಾರ್ಮಿಕ ವರ್ಗವನ್ನು ಸಂಪೂರ್ಣವಾಗಿ ದಮನ ಮಾಡಿತು, ಬೆದರಿಸಿತು. 1981 ರ ನಂತರ ಟ್ರೇಡ್ ಯೂನಿಯನ್ ಚಳುವಳಿ ದುರ್ಬಲವಾಯಿತು. 80 ರ ದಶಕದ ಕೊನೆಯಲ್ಲಿ ಸಮಾಜವಾದಿ ದೇಶಗಳ ವಿಘಟನೆ ನಂತರವಂತೂ ಟ್ರೇಡ್ ಯೂನಿಯನ್ ಚಳುವಳಿ ಮೇಲೆ ಭಾರಿ ಪ್ರಹಾರ ನಡೆದು, ಹಿಮ್ಮೆಟ್ಟಲು ಆರಂಭವಾಯಿತು. 90 ರ ದಶಕದಲ್ಲಿ ಟ್ರೇಡ್ ಯೂನಿಯನ್ ಚಳುವಳಿ ಎಷ್ಟು ದುರ್ಬಲವಾಗಿತ್ತೆಂದರೆ ಕೇವಲ ಶೇಕಡಾ 10 ಕಾರ್ಮಿಕರು ಸಂಘಟಿತ ಟ್ರೇಡ್ ಯೂನಿಯನ್‌ಗಳಲ್ಲಿದ್ದರು. ಹೆಚ್ಚಿನ ಉದ್ಯಮಗಳಲ್ಲಿ (ದೊಡ್ಡ ಕೈಗಾರಿಕೆಗಳನ್ನು ಬಿಟ್ಟು) 'ಸಾಮೂಹಿಕ ಕೂಲಿ ಚೌಕಾಶಿ' ಇಲ್ಲವಾಗಿತ್ತು. ಪ್ರತಿ ಕಾರ್ಮಿಕನ ಜತೆ ಪ್ರತ್ಯೇಕ ಕಾಂಟ್ರಾಕ್ಟ್ ಮಾಡಲಾಗಿತ್ತು. ಆದರೆ 90 ರ ದಶಕದ ಮಧ್ಯಭಾಗದಲ್ಲಿ ಅಮೆರಿಕದ ಕಾರ್ಮಿಕ ವರ್ಗ ಇದನ್ನು ಸರಿಪಡಿಸಲು ಆರಂಭಿಸಿದೆ. ಅತ್ಯಂತ ದಯನೀಯ ಸ್ಥಿತಿ ಕಾರ್ಮಿಕರನ್ನು ಮತ್ತೆ ಹೋರಾಡುವಂತೆ ಮಾಡಿದೆ. 1995 ರಲ್ಲಿ ಕಮ್ಯುನಿಸ್ಟರನ್ನು, ಎಡಪಂಥೀಯ ಪ್ರಗತಿಪರರನ್ನು ಟ್ರೇಡ್ ಯೂನಿಯನ್ ನಾಯಕತ್ವದಿಂದ ಹೊರಗಿಡುವ 'ಬೈಲಾ'ಗಳನ್ನು ಬದಲಿಸಲಾಯಿತು. ಅಮೆರಿಕದ ಅತ್ಯಂತ ದೊಡ್ಡ ಕೇಂದ್ರೀಯ ಯೂನಿಯನ್ AFL-CI ನಾಯಕತ್ವ ಬದಲಾಗಿ, ಹೊಸ ಸಮರಶೀಲ ನಾಯಕತ್ವ ಬಂದಿದೆ. ಮತ್ತೆ ಟ್ರೇಡ್ ಯೂನಿಯನ್ ಚಳುವಳಿ ಗರಿಗೆದರುತ್ತಿದೆ. ಇತ್ತೀಚಿನ ವರದಿಗಳ ಪ್ರಕಾರ ಅಮೆಜಾನ್ ಡಾಟ್ ಕಾಮ್ ಎಂಬ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲೂ ಟ್ರೇಡ್ ಯೂನಿಯನ್ ಚಳುವಳಿ ಆರಂಭವಾಗಿದೆ. 21 ನೇ ಶತಮಾನದ ಮೊದಲ ಮೇ ದಿನದಂದು ದಶಕ ಮತ್ತು ಈ ಶತಮಾನದ ಅಮೆರಿಕದ ಕಾರ್ಮಿಕವರ್ಗ ಚಳುವಳಿ ಪುನಃ ಸಶಕ್ತವಾಗುವ ಭರವಸೆ ತಂದಿದೆ. ಪುನಃ 'ಮೇ ದಿನದ' ಭವ್ಯ ಸಂಪ್ರದಾಯವನ್ನು ಅಮೆರಿಕ ಕಾರ್ಮಿಕ ವರ್ಗ ಎಲ್ಲರಿಗೂ ಹಾಕಿಕೊಟ್ಟಿತೆ?

ನೆಲಕಚ್ಚಿದ ಕೈಗಾರಿಕೆಗಳು ನೆಲೆ ತಪ್ಪಿದ ಕಾರ್ಮಿಕರು

ಹಿರಿದೊಮ್ಮೆ ಹರಿಹರ ದಾವಣಗೆರೆಯ ಜೀವನಾಡಿಯಾಗಿ ಚೈತನ್ಯ ಸೃಷ್ಟಿಸುತ್ತಿದ್ದ ಕೈಗಾರಿಕೆಗಳ ವಿನಾಶದ ಅಂಚನ್ನು ತಲುಪಿವೆ. ಕೆಲವು ನೆಲಕಚ್ಚಿದರೆ ಹಲವಾರು ಕೈಗಾರಿಕೆಗಳು ನೆಲಸಮವಾಗಿವೆ. ಅದರೊಂದಿಗೆ ಕಾರ್ಮಿಕರು, ಅವರ ಬದುಕೂ ಸಹ ಆ ಧಾರುಣ ಚಿತ್ರಣವನ್ನು ಬಿಡಿಸಿಟ್ಟ ಲೇಖನ

ಕೆ. ಮಹಾಂತೇಶ್

2001 ನೇ ಇಸ್ವಿ ಮೊದಲ ದಿನ....

ಮುಂಜಾನೆಯ ಸೂರ್ಯ ಹರಿಹರದ ಜನತೆಯ ಪಾಲಿಗೆ ಇರಲಿಲ್ಲ. ಅದರಲ್ಲೂ ಕಿರ್ಲೋಸ್ಕರ್ ಕಂಪನಿಯ ಎರಡು ಸಾವಿರ ಕುಟುಂಬಗಳ ಪಾಲಿಗಂತೂ ಸೂರ್ಯನು ಪುನಃ ಎಂದೂ ಉದಯವಾಗಲಾರನೇನೋ ಎಂಬ ಗಾಢ ಚಿಂತೆ ಶುರುವಾಯ್ತು.

ಕಳೆದ 60 ವರ್ಷಗಳಿಂದ ಸಾವಿರಾರು ದುಡಿಯುವ ಕೈಗಳಿಗೆ ಕೆಲಸ ನೀಡಿ ಸಾವಿರಾರು ಕುಟುಂಬಗಳಿಗೆ ಬದುಕಿನ ಆಸರೆಯಾಗಿದ್ದ 'ಕಿರ್ಲೋಸ್ಕರ್' ಕಾರ್ಖಾನೆಯು ಕೊನೆಗೂ ಬಲವಂತವಾಗಿ ಆಡಳಿತ ಮಂಡಳಿಯಿಂದ ಬೀಗಮುದ್ರೆಗೆ ಒಳಗಾಯಿತು.

ಕಳೆದ ನವೆಂಬರ್ ತಿಂಗಳಿಂದಲೂ ಲೇ ಆಫ್ ಘೋಷಿಸಿದ್ದ ಆಡಳಿತ ವರ್ಗವು ಕಾರ್ಖಾನೆಯನ್ನು ಶಾಶ್ವತ ಮುಚ್ಚಲು ಮುಂದಾಗಿ, ಡಿಸೆಂಬರ್ 31 ರಂದು ಎಲ್ಲ ಜನರು ಹೊಸ ವರ್ಷದ ಸಂಭ್ರಮದಲ್ಲಿರುವಾಗಲೇ ತನ್ನ ಕರಾಳ ನಿರ್ಧಾರ ಪ್ರಕಟಿಸಿತು. ಈಗಾಗಲೇ ಸುತ್ತೂರು ಮತ್ತು ಹುಬ್ಬಳ್ಳಿಯಲ್ಲಿದ್ದ ತನ್ನ ಘಟಕಗಳನ್ನು ಶಾಶ್ವತವಾಗಿ ಮುಚ್ಚಿರುವ ಆಡಳಿತ ಮಂಡಳಿಯು ಇದೀಗ ಎರಡು ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದ ಹರಿಹರ ಕಾರ್ಖಾನೆಯನ್ನು ಮುಚ್ಚುವ ಹುನ್ನಾರ ನಡೆಸಿತು.

ಕಾರ್ಖಾನೆಯ ಬೀಗಮುದ್ರೆ ತೆರೆವು ಮಾಡಬೇಕೆಂದು ಒತ್ತಾಯಿಸಿ ಕಾರ್ಮಿಕರು ಮತ್ತು ಕುಟುಂಬದವರು ಹಲವು ರೀತಿಯ ಹೋರಾಟಗಳನ್ನು ನಡೆಸುತ್ತಿದ್ದರೂ ಆಡಳಿತ ಮಂಡಳಿಯು ತನ್ನ ಹಠಮಾರಿ ನಿಲುವಿನಿಂದಾಗಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲು ಕಾರಣವಾಗಿದೆ. ಮಾತ್ರವಲ್ಲ ಕಳೆದ ಆರು ತಿಂಗಳಿನಿಂದಲೂ ಸಂಬಳವನ್ನು ನೀಡಲಿಲ್ಲ. ಬದಲಾಗಿ ಕಾರ್ಖಾನೆಯನ್ನು ಪೂನಾಕ್ಕೆ ಸ್ಥಳಾಂತರಗೊಳಿಸುವ ವ್ಯವಸ್ಥಿತ ಪ್ರಯತ್ನಗಳನ್ನು ನಡೆಸಿದಲ್ಲದೆ ಬೀಗಮುದ್ರೆ ಘೋಷಿಸಿದ್ದರೂ ಒಳಗೆ ಅಕ್ರಮ ಉತ್ಪಾದನೆಯಲ್ಲಿ ತೊಡಗಿ ಕಾರ್ಮಿಕರ ಆಕ್ರೋಶಕ್ಕೆ ಕಾರಣವಾಯಿತು.

ಕಳೆದ 3-4 ತಿಂಗಳಿಂದಲೂ ಹಲವು ಹಂತಗಳಲ್ಲಿ ಮಾತುಕತೆಗಳು ನಡೆದು ಕಾರ್ಖಾನೆಯ ಪ್ರಾರಂಭಕ್ಕೂ ಪ್ರಯತ್ನಗಳು ನಡೆಸಿದರೂ ಆಡಳಿತ ಮಂಡಳಿ ಸಹಕರಿಸದೆ ಇದೀಗ ಕಾರ್ಮಿಕರಿಗೆ ಸಂಬಳ ನೀಡುವ ಸಲುವಾಗಿ ಕಾರ್ಖಾನೆಯನ್ನು ಬಹಿರಂಗ ಹರಾಜಿಗೆ ಮಾಡಲು ಹೈಕೋರ್ಟಿಗೆ ಮನವಿ ಮಾಡಿಕೊಂಡ ಪರಿಣಾಮವಾಗಿ ಕಾರ್ಖಾನೆಯು ಈಗ ಬಹಿರಂಗ ಹರಾಜಿಗೆ ನಿಂತಿದೆ. ಇದುವರೆಗೂ ಲಕ್ಷಾಂತರ ಜನರಿಗೆ ಬದುಕು ನೀಡಿದ ಕಾರ್ಖಾನೆಯನ್ನು ಈಗ ಹರಾಜಿಗಿಟ್ಟಿರುವುದು ನೋವಿನ ಸಂಗತಿಯಾಗಿದೆ. 1940 ರಲ್ಲಿ ಮೈಸೂರು ಅರಸರಿಂದ ಬಳುವಳಿಯಾಗಿ ಪಡೆದ ಸುಮಾರು 147 ಎಕರೆ ಜಮೀನಿನಲ್ಲಿ ಸ್ಥಾಪನೆಯಾದ ಮತ್ತು ಹರಿಹರದ ದುಡಿಯುವ ಜನತೆಯ ಆಂದೋಲನಕ್ಕೆ ಅಪಾರ ಸ್ಫೂರ್ತಿಯನ್ನು ನೀಡಿದ್ದ, ಅಲ್ಲಿನ ಆರ್ಥಿಕ-ಸಾಂಸ್ಕೃತಿಕ, ಅಭಿವೃದ್ಧಿಯಲ್ಲಿ ತನ್ನದ ಆದ ಛಾಪು ಮೂಡಿಸಿದ 'ಮೈಸೂರು ಕಿರ್ಲೋಸ್ಕರ್' ಕಾರ್ಖಾನೆ ಈಗ ಮುಗಿದ ಅಧ್ಯಾಯವಾಗುತ್ತಿದೆ. ಕಳೆದ ಆರು ತಿಂಗಳಿಂದ ನಿರಂತರವಾಗಿ ಕಾರ್ಮಿಕರು ಪ್ರತಿಭಟನೆ ಹಾದಿಯಲ್ಲಿದ್ದರೂ ಅಧಿಕಾರಸ್ಥ ಮಂದಿಗಾಗಲಿ, ಅಧಿಕಾರಿ ವರ್ಗಕ್ಕಾಗಲಿ ಅವರ ನೋವು ಕೇಳಿಸದೇ ಇರುವುದು ವಿಪರ್ಯಾಸವೇ. ಒಟ್ಟಿನಲ್ಲಿ ತುಂಗಭದ್ರೆಯ ಜೀವ ಸೆಲೆಯೊಂದು ಬತ್ತಿದಂತೆಯೇ ಸರಿ.

ಮಾಲಕನ ಹೊಟ್ಟೆ

ಹೊಟ್ಟೆ ತುಂಬಾ ಅನ್ನ ಮೈತುಂಬ ಬಟ್ಟೆ
ಬೇಕೆಂದು ಕಾರ್ಮಿಕರು ಕೇಳಿದರು ಭತ್ಯೆ
ಹಸಿವಿನಿಂದ ಕಂಗೆಟ್ಟು ಸಂಸಾರ ಗೊತ್ತೆ
ನರಳುತಿರೆ ಮಾಲಕನು ಬೆಳೆಸುತಿಹ
ಹೊಟ್ಟೆ

- ವಿಡಂಬಾರಿ

ಇತ್ತ..... ಕರ್ನಾಟಕದ ಮ್ಯಾಂಚೆಸ್ಟರ್ ದಾವಣಗೆರೆ ಎಂಬ ಖ್ಯಾತಿಯ ಕಾಟನ್ ಮಿಲ್‌ನ ಬೃಹದಾಕಾರಗಳ ಕಟ್ಟಡಗಳ ನೆಲದಲ್ಲಿ ಸಂಪೂರ್ಣ ಭಗ್ನವಶೇಷಗೊಂಡಿದೆ.

ಸುಮಾರು 4 ದಶಕಗಳ ಕಾಲ ಕರ್ನಾಟಕದ ಜವಳಿ ಉದ್ದಿಮೆಯಲ್ಲಿ ಶಂಕರ ಸಿದ್ದೇಶ್ವರ, ಗುಹೇಶ್ವರ, ಚೀಗಟೇರಿ, ಆಂಜನೇಯ, ಯಲ್ಲಮ್ಮ ಕಾಟನ್ ಮಿಲ್‌ಗಳು, ಇವೆಲ್ಲವುಗಳಿಗೆ ಕಿರೀಟವಾಗಿ 'ದಿ ದಾವಣಗೆರೆ ಕಾಟನ್ ಮಿಲ್' ಗಳು ಪ್ರಸಿದ್ಧಿಯಾಗಿ ಮೆರೆದ ಕಾರ್ಖಾನೆಗಳಿವು. ಮಾತ್ರವಲ್ಲ ಸಿದ್ದೇಶ್ವರ ಮಿಲ್ಲಿನ ಬನಿಯನ್‌ಗಳು 'ದಿ ಕಾಟನ್ ಮಿಲ್ಲಿನ ಟವಲ್ಸ್‌ಗಳು, ದೇಶ ವಿದೇಶಗಳಲ್ಲಿ ಖ್ಯಾತಿ ಪಡೆದಂತವುಗಳು. ಒಂದು ಕಾಲದಲ್ಲಿ ಶ್ರಮಜೀವಿ ಹಾಗೂ ಚಳುವಳಿಯಿಂದ ಕೆಂಪಾಗಿದ್ದ ದಾವಣಗೆರೆ ಈಗ ಬರಿದಾಗಿದೆ. ನೂರಾರು ಕಡೆಗಳಿಂದ ಜನರನ್ನು ಉದ್ಯೋಗ ನೀಡಿ ತನ್ನತ್ತ ಆಕರ್ಷಣೆ ಮಾಡಿಕೊಂಡಿದ್ದ ಜವಳಿ, ಎಣ್ಣೆ, ಸಾಬೂನು ಉದ್ದಿಮೆಗಳು ಸರ್ಕಾರಗಳ ಕಾರ್ಮಿಕವಿರೋಧಿ ನೀತಿಗಳ ಫಲವಾಗಿ ಇತಿಹಾಸದ ಗರ್ಭ ಸೇರುತ್ತಿರುವಾಗಲೇ ಇತ್ತ ಸಹಸ್ರಾರು ಶ್ರಮಜೀವಿಗಳ ಬದುಕು ಅತಂತ್ರಗೊಂಡು ಬೀದಿಪಾಲಾಗಿದೆ.

1936 ರಲ್ಲಿ ಶ್ರೀಯುತ ರಾಜನಹಳ್ಳಿ ಹನುಮಂತಪ್ಪನವರು ಪ್ರಾರಂಭಿಸಿದ 'ದಿ ದಾವಣಗೆರೆ ಕಾಟನ್ ಮಿಲ್ ಲಿ.' ಕಂಪನಿಯು ಇತ್ತೀಚಿನವರೆಗೂ ಸುಮಾರು ಐದು ಸಾವಿರ ಕುಟುಂಬಕ್ಕೆ ಬದುಕನ್ನು ನೀಡಿತ್ತು. ಸುಮಾರು 40 ಎಕರೆ ಪ್ರದೇಶದಲ್ಲಿ ವಿಸ್ತಾರವಾಗಿ ಸ್ಥಾಪನೆಯಾಗಿದ್ದ ಈ ಮಿಲ್ ಉತ್ಕೃಷ್ಟ ಬಟ್ಟೆ ತಯಾರಿಕೆಯ ಮೂಲಕ ದೇಶ ವಿದೇಶಗಳಲ್ಲಿ ಮನೆ ಮಾತಾಯಿತು. ಹಾಗೆ ನೋಡಿದರೆ ಶ್ರೀಯುತ ರಾಜನಹಳ್ಳಿ ಹನುಮಂತಪ್ಪನವರ ಮನೆತನ ಮೂಲತಃ ಬೆಳ್ಳಿ ಬಂಗಾರ ವ್ಯಾಪಾರದಲ್ಲಿ ತೊಡಗಿರುವವರ ಮನೆತನ. ಈ ಕಾರ್ಖಾನೆ ಸ್ಥಾಪಿಸಲು ಸ್ವತಃ ಅವರು ಅರಳಿ ಕ್ಷೇತ್ರದಲ್ಲಿ ವಹಿಸಿದ್ದ ಆಸಕ್ತಿ ಮಾತ್ರವೇ ಸಾಕಾಯಿತು. ತುಂಬಾ ಕಷ್ಟದ ಸ್ಥಿತಿಯಲ್ಲಿ ಹಲವಾರು ಜನರನ್ನು ಭೇಟಿಯಾಗಿ ಶೇರುಗಳನ್ನು ಸಂಗ್ರಹಿಸಿ ಸುಮಾರು ಎಂಟೂವರೆ ಲಕ್ಷ ರೂ.ಗಳ ಬಂಡವಾಳ ದೊಂದಿಗೆ ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ಆರಂಭದಲ್ಲಿ ಕೇವಲ 300 ಕೆಲಸಗಾರನ್ನು ಹೊಂದಿದ್ದ ಕಾರ್ಖಾನೆಯು ಎಪ್ಪತ್ತರ ದಶಕದೊತ್ತಿಗೆ ಸುಮಾರು 4 ಸಾವಿರ ಜನರಿಗೆ ಬದುಕನ್ನು ನೀಡಿತು. ಅಲ್ಲದೆ ಮಾಲಿಕರೇ ಉತ್ಕೃಷ್ಟ ದಾರ ತಯಾರಿಸುವ ಶ್ರೀ ಚಂದ್ರೋದಯ ಹಾಗೂ ಎಣ್ಣೆ ಮತ್ತು ಸಾಬೂನು ತಯಾರಿಸುವ ರವಿ ಆಯಿಲ್ ಮಿಲ್‌ಗಳನ್ನು ಸಹಾ ಪ್ರಾರಂಭಿಸಿದರು.

ದಾವಣಗೆರೆಯ ಈ ಎಲ್ಲಾ ಕೈಗಾರಿಕೆಗಳು ಸರಿಸುಮಾರು 80 ರ ದಶಕದವರೆಗೂ ಅತ್ಯಂತ ಲಾಭದಾಯಕವಾಗಿಯೇ ನಡೆದಿದ್ದವು ಎಂಬುದು ಸ್ಪಷ್ಟ. 80 ರ ದಶಕದ ಮಧ್ಯ ಭಾಗದಿಂದ ಕೇಂದ್ರ ಸರ್ಕಾರ ಜಾರಿ ಮಾಡಿದ ನೂತನ ಜವಳಿ ನೀತಿಯು ಇಡೀ ಜವಳಿ ಉದ್ದಿಮೆಯೇ ತೀವ್ರ ಬಿಕ್ಕಟ್ಟಿಗೆ ತಳ್ಳಿತು. ಇದರಿಂದ ದಾವಣಗೆರೆಯ ಪ್ರಸಿದ್ಧಿ ಹತ್ತಿ ಗಿರಣಿಗಳು ನೆಲಕಚ್ಚಲಾರಂಭಿಸಿದವು. ಇದೇ ಕಾರಣಗಳನ್ನು ಮುಂದು ಮಾಡಿಕೊಂಡು ಕಾರ್ಖಾನೆಗಳ ಮಾಲೀಕರು ಸಹಜವಾಗಿಯೇ ಕಾರ್ಖಾನೆಗಳು ಉದ್ದೇಶಪೂರ್ವಕವಾಗಿ ನಷ್ಟವನ್ನು ಅನುಭವಿಸುವಂತಹ ಪರಿಸ್ಥಿತಿಗಳನ್ನು ನಿರ್ಮಿಸತೊಡಗಿ ಹೆಚ್ಚೆಚ್ಚು ಲಾಭವನ್ನು ತರುವ ಇತರೆ ಕೈಗಾರಿಕೆಗಳತ್ತ ದೃಷ್ಟಿ ಬದಲಾಯಿಸತೊಡಗಿದರು. ಇಷ್ಟೊತ್ತಿಗಾಗಲೇ ಹಲವು ಕಾರಣಗಳಿಂದಾಗಿ ನಗರದ ಕಾರ್ಮಿಕರ ಹೋರಾಟದ ಶಕ್ತಿಯು ಕ್ಷೀಣಿಸುತ್ತಾ ಬಂದು ಕಾರ್ಖಾನೆಗಳನ್ನು ಮುಚ್ಚಲು ಮಾಲೀಕರಿಗೆ ಅನುಕೂಲ ಮಾಡಿಕೊಟ್ಟಿತ್ತು.

ಈಗ ನೀವು ದಾವಣಗೆರೆಗೆ ಬನ್ನಿ..... ಅಲ್ಲಿನ ಒಂದೊಂದು ಕಾರ್ಖಾನೆಯು ಕಥೆ ಹೇಳುತ್ತಿವೆ. ತುಂಬಾ ಹಳೆಯ ಕಾಲದ ಚೀಕಟೇರಿ ಮಿಲ್ ಎಂಬ ಉದ್ಗಾರ ತೆಗೆದರೆ ಅದರ ನಾಮಾಶೇಷವೂ ಇಲ್ಲ. ಬದಲಾಗಿ ಬೃಹತ್ತಾದ ಆಸ್ಪತ್ರೆಯೊಂದು ಎದ್ದು ನಿಂತಿದೆ. ಪಿ.ಬಿ. ರಸ್ತೆಯಲ್ಲಿ ಜನರನ್ನು ಸ್ವಾಗತಿಸುತ್ತಿದ್ದ ರವಿ ಆಯಿಲ್ ಮಿಲ್ ಮತ್ತು ಚಂದ್ರೋದಯ ಹತ್ತಿಗಿರಣಿಗಳು, ಗೋದಾಮುಗಳಾಗಿ ಪರಿವರ್ತಿತವಾಗಿವೆ. ಅದೇ ರೀತಿ ಗಣೇಶ್ವರ ಮಿಲ್, ಜಿಲ್ಲಾ ರಕ್ಷಣಾಧಿಕಾರಿಗಳ ಕಛೇರಿಯಾಗಿ ಮಾರ್ಪಾಡು ಹೊಂದಿದೆ. ಇನ್ನೂ.... ಇತ್ತೀಚಿನವರೆಗೂ ಉಸಿರಾಡುತ್ತಿದ್ದ ಹೆಸರಾಂತ ಕಾರ್ಖಾನೆ 'ದಿ ದಾವಣಗೆರೆ ಕಾಟನ್ ಮಿಲ್' ಈಗ ನೆಲಸಮಗೊಳ್ಳುತ್ತಿದೆ. ಅಲ್ಲಿನ ಬೃಹದಾಕಾರದ ಕಲ್ಲಿನ ಕಟ್ಟಡಗಳು ನೆಲಕ್ಕುರುಳುತ್ತಿವೆ. ಅಲ್ಲಿ ಝೇಂಗುಡುತ್ತಿದ್ದ ಬೃಹದಾಕಾರಗಳ ಮಿಷನ್‌ಗಳ ಶಬ್ದವಿಲ್ಲ. ರಸ್ತೆಗಳೆಲ್ಲ ಮೌನವಾಗಿವೆ. ಇಡೀ ಕಾರ್ಖಾನೆಗಳ ಕಟ್ಟಡಗಳಲ್ಲಿ ಶಬ್ದವಿಲ್ಲ. ರಸ್ತೆಗಳೆಲ್ಲ ಮೌನವಾಗಿವೆ. ಇಡೀ ಕಾರ್ಖಾನೆಗಳ ಕಟ್ಟಡಗಳನ್ನು ನೆಲಸಮ ಮಾಡಲು ನೂರಾರು ಕೆಲಸಗಾರರು ಕಾರ್ಯನಿರತರಾಗಿದ್ದಾರೆ. ಈಗ ಇಲ್ಲಿನ ಅಡ್ಡಗೋಡೆಗಳು, ಶಿಥಿಲಗೊಂಡ, ಕೋಟೆಗಳನ್ನು ನೆನಪಿಸುತ್ತಿವೆ. ಮಿಲ್ಲಿನ ಅಂದಿನ ಗತವೈಭವಗಳನ್ನು ಕಣ್ಣಾರೆ ಕಂಡವರ ಹೃದಯಗಳು ಭಾರವಾಗುತ್ತವೆ. ಅವರ ನಡಿಗೆ ನಿಧಾನವಾಗುತ್ತದೆ. ಮಾತು ಮೌನವಾಗುತ್ತದೆ. ಒಟ್ಟಿನಲ್ಲಿ ದಾವಣಗೆರೆಯ ಹೃದಯಬಡಿತವೇ ಸ್ತಂಭವಾದಂತೆ ಭಾಸವಾಗುತ್ತದೆ.

ಕೇಳಿಸದಲ್ಲಾ ವಿಶಲ್‌ನ ಕೂಗು

ನನಗೆ ನೆನಪಿದೆ.... ನಮ್ಮೂರಿನದ ದಿನಚರಿ ಆರಂಭಗೊಳ್ಳುತ್ತಿದುದೆ ಕಾರ್ಖಾನೆಗಳ 'ವಿಶಲ್'ಗಳ ಕೂಗುವಿಕೆಯಿಂದ. ಬೆಳಿಗ್ಗೆ 6.45 ರಿಂದ ಹಿಡಿದು ರಾತ್ರಿ 11.45 ರವರೆಗೂ ಕೂಗುವಿಕೆಯೋ ನಮಗೆ ಗಡಿಯಾರ. ಮಕ್ಕಳನ್ನೆಲ್ಲ ಬೆಳಿಗ್ಗೆ ಏಳಿಸುತ್ತಿದ್ದರು. ಹೀಗೆ... ಆಗಲೇ ಏಳಿಪ್ಪತ್ತು ಕೂಗ್ತಾ ಇದೆ ಹೇಳೋ' ಎಂದು. ನಾವೆಲ್ಲ ಅತ್ಯಂತ ಸಂಭ್ರಮದಿಂದ ಖುಷಿಯಿಂದ ಆಚರಿಸುತ್ತಿದ್ದ ಹಬ್ಬವೆಂದರೆ ದೀಪಾವಳಿ. ಅದಕ್ಕೆ ಮುಖ್ಯ ಕಾರಣ ಎಲ್ಲ ಕಾರ್ಖಾನೆಗಳಲ್ಲಿ ನೀಡುತ್ತಿದ್ದ ದೀಪಾವಳಿ ಬೋನಸ್. ಮನೆ ಮಂದಿಗೆಲ್ಲಾ ಬಟ್ಟೆ, ಹೆಣ್ಣು ಮಕ್ಕಳಿಗೆ ಬೆಳ್ಳಿ ಬಂಗಾರ, ಮನೆಗೆ ಸಾಮಾನುಗಳೆಲ್ಲ ಖರೀದಿಯಾಗುತ್ತಿದ್ದು ಇದೇ ಸಂದರ್ಭದಲ್ಲೇ. ದೀಪಾವಳಿ ಬಂತೆಂದರೆ ದಾವಣಗೆರೆಯ ವ್ಯಾಪಾರಿ ಅಂಗಡಿಗಳೆಲ್ಲಾ ಗಿಜಿ...ಗಿಜಿ...


ಈಗೆಲ್ಲಿ ಆ ಮೇ ದಿನ

ಬಹುಶಃ ಮೇ 1ನೇ ತಾರೀಖು ಬಂತೆಂದರೆ ನಮ್ಮೂರಿನ ಬಹುತೇಕ ಮನೆಗಳಲ್ಲಿ ಅಡುಗೆಯಾಗುತ್ತಿರಲೇ ಇಲ್ಲ. ಊರ ಹೊರಗಿನ ಹಳ್ಳದ ದಡದಲ್ಲಿ ಸಹಸ್ರಾರು ಕಾರ್ಮಿಕರು ಸೇರಿ ಆಚರಿಸುತ್ತಿದ್ದ ಸಂಭ್ರಮ ದಲ್ಲಿ ನಾವೆಲ್ಲರೂ ಪಾಲ್ಗೊಳ್ಳುತ್ತಿದ್ದವು. ಆ ದಿನವೆಲ್ಲಾ ಅಲ್ಲಿಯೇ ಊಟ. ನನಗೆ ನೆನಪಿರುವಂತೆ ನಮ್ಮೂರಿನ ಜನ ಆಚರಿಸುತ್ತಿದ್ದ ಒಂದೇ ಒಂದು ಜಾತ್ರೆ ಎಂದರೆ 'ಮೇ ದಿನ' ಮಾತ್ರ.

ಆದರೆ ಕಾರ್ಖಾನೆಗಳ ಮುಚ್ಚುವಿಕೆ ಈಗ ದಾವಣಗೆರೆಯ ಚಿತ್ರಣವನ್ನು ಬದಲಾಯಿಸಿದೆ. ವ್ಯಾಪಾರ, ವಹಿವಾಟು ಕೂಡ ಆಘಾತದಿಂದ ಚೇತರಿಸಿಕೊಳ್ಳಲು ಸಾಧ್ಯವಾಗಿಲ್ಲ. ಕೆಲಸಕ್ಕಾಗಿ ಪರಿತಪಿಸುವ ಕೈಗಳು ಎಲ್ಲೆಡೆ ಸಿಗುತ್ತವೆ. ಹಸಿವು, ಕಳ್ಳತನಕ್ಕೆ, ಅಪರಾಧಕ್ಕೆ ದಾರಿ ಮಾಡಿಕೊಟ್ಟಿವೆ... ಕೋಟಿ.. ಕೋಟಿ ದುಡಿದು ಕೊಟ್ಟವರ ತುತ್ತಿನ ಚೀಲಗಳು ಈಗ ಬರಿದಾಗಿವೆ. ಉದ್ಯೋಗವನ್ನರಸುವ ಸಹಸ್ರಾರು ಜನರ ಬದುಕು ಬೀದಿಯಲ್ಲಿವೆ.

ಶ್ರೀನಿವಾಸಗೆ ಸುಮಾರು 40 ವರ್ಷವಿರಬಹುದು. ತುಂಬಾ ಲವಲವಿಕೆಯ ಮನುಷ್ಯ. ಒಂದೇ ಜಾಗದಲ್ಲಿ ಎಂದೂ ಕುಳಿತವನಲ್ಲ. ಕಾರ್ಖಾನೆ, ಯೂನಿಯನ್, ರಾಜಕೀಯ ಇತ್ಯಾದಿ.. ಚರ್ಚಿಸುತ್ತಾ, ಕಾಲ ಕಳೆದವನು. ಆದರೆ ಕಾರ್ಖಾನೆಯು ಮುಚ್ಚಿತು. ಊರು ದೂರದ ತಮಿಳುನಾಡಿನ ಕೊಯಮತ್ತೂರು. ತನ್ನದೇ ಆದ ಸ್ವಂತ ಯಾವ ಆಸ್ತಿಯೂ ಅವನಿಗಿಲ್ಲ. ಕಾಟನ್ ಮಿಲ್ ಕಟ್ಟುತ್ತಿದ್ದಾಗ ಕೂಲಿಗಾಗಿ ಅವರ ತಂದೆ ತಾಯಿಗಳು ಬಂದವರು. ಕಾರ್ಖಾನೆಯ ಪಕ್ಕದಲ್ಲೇ ಮಾಲಿಕರ ನೀಡಿದ ತುಂಡು ಜಾಗದಲ್ಲಿ ಮನೆ. ಈಗ ಶ್ರೀನಿವಾಸಗೆ ಬದುಕಲು ಏನಾದರೂ ಮಾಡಲೇಬೇಕು! ತನ್ನ ಮನೆ ಎದುರಿನ ಪೂನಾ-ಬೆಂಗಳೂರು ರಸ್ತೆಯ ಹುಣಸೆಮರದ ಕೆಳಗೆ ಬೆಳಿಗ್ಗೆ ಯಿಂದ ರಾತ್ರಿಯವರೆಗೆ ತನ್ನಯಾವುದೇ ಕೈಕಸುಬನ್ನು ನಂಬಿ ಕುಳಿತಲ್ಲೇ ಕುಳಿತಿರುತ್ತಾನೆ. ಯಾರಾದರೂ ಗಿರಾಕಿಗಳು ಬರಬಹುದೇ ಎಂದು.....

ಇದು ಕೇವಲ ಒಬ್ಬ ಶ್ರೀನಿವಾಸನ ಕಥೆಯಲ್ಲ! ಕಾರ್ಖಾನೆಗಳ ಮುಚ್ಚುವಿಕೆಯಿಂದಾಗಿ ಶ್ರಮಜೀವಿ ವರ್ಗ ಪಡುತ್ತಿರುವ ಕಣ್ಣೀರ ವ್ಯಥೆ!



ನನ್ನ ನೆನಪಿನಲ್ಲಿ ಮೇ ದಿನಾಚರಣೆ

ಇ.ಕೆ.ಎನ್.ರಾಜನ್

ಎಂಟು ತಾಸಿನ ಕೆಲಸಕ್ಕಾಗಿ ಚಿಕಾಗೊ ನಗರದಲ್ಲಿ ಅಂದು ನಡೆಯಿತು ಸಂಘರ್ಷ ಆ ಮೇ ದಿನಾಚರಣೆಯಂದೇ ಬೆಂಗಳೂರು ಕಾರ್ಮಿಕರು ಹೋರಾಟಕ್ಕಿಳಿದರು. ಬೇಡಿಕೆ 8 ತಾಸು ಮಾತ್ರ ಕೆಲಸ ಇರುವ ಕಾನೂನು ಜಾರಿ. ಇದನ್ನು ಬಗ್ಗು ಬಡಿಯಲು ಮಾಲೀಕರು, ಸರ್ಕಾರ ನಡೆಸಿದ ಧಾಳಿಯನ್ನು ಹಿಮ್ಮೆಟ್ಟಿಸಿ ಗೆಲುವು ಸಾಧಿಸಿದ ಹೋರಾಟದ ನೆನಪು ಎಲ್ಲಿ.

ತುರ್ತು ಪರಿಸ್ಥಿತಿಯ ನಂತರದಲ್ಲಿ 1978 ರಲ್ಲಿ ಸಿಐಟಿಯು ರಾಜ್ಯ ಸಮ್ಮೇಳನ ಬೆಂಗಳೂರಿನಲ್ಲಿ ನಡೆಯಿತು. ಅಂದು ಸಿಐಟಿಯು ಇಂದಿನಷ್ಟು ಸದಸ್ಯತ್ವ ಹೊಂದಿಲ್ಲದಿದ್ದರೂ ಹೇರಳ ಸಂಖ್ಯೆಯಲ್ಲಿ ಚುರುಕಿನ ಕಾರ್ಯಕರ್ತರಿದ್ದರು. ಇದಕ್ಕೂ ಮೊದಲು ಮೇ ದಿನಾಚರಣೆಯನ್ನು ಮಲ್ಲೇಶ್ವರಂನ ಕೃಷ್ಣಭವನ ಹೋಟೇಲಿನ ಮಹಡಿ ಮೇಲೆ ಆಚರಿಸಲಾಗುತ್ತಿತ್ತು. ಮೇ ದಿನದ ಪ್ರಣಾಳಿಕೆ ಬಗ್ಗೆ ಚರ್ಚೆ, ನಂತರದ ಕೆಲಸ ಕಾರ್ಯಗಳ ಜಾರಿ ಅಂದು ಕಾರ್ಯಕರ್ತರ ಮುಖ್ಯ ಜವಾಬ್ದಾರಿಯಾಗಿತ್ತು. ಬೆಂಗಳೂರಿನಲ್ಲಿ ವಿಶ್ವ ಕಾರ್ಮಿಕ ದಿನಾಚರಣೆಯ ಅಂಗವಾಗಿ ಮೇ ದಿನಾಚರಣೆಯನ್ನು 1979 ರಿಂದ ಬಹಿರಂಗವಾಗಿ ಬಯಲಿನಲ್ಲಿ ಆಚರಿಸಲು ಆರಂಭಿಸಲಾಯಿತು ಎಂದು ನನ್ನ ನೆನಪು: 1978 ರಿಂದ 1 ವರ್ಷ ಕಾಲ ಬೆಂಗಳೂರಿನ ಮಾಂಸಾಹಾರಿ ಹೋಟೆಲ್ ಕಾರ್ಮಿಕರಮಧ್ಯೆ ಮಾರ್ಕ್ಸಿಸ್ಟ್ ಸ್ಟಡಿ ಸರ್ಕಲ್ ಎಂಬ ವೇದಿಕೆಯ ಹೆಸರಿನಲ್ಲಿ ಸಂಘಟನಾ ಕೆಲಸ ಆರಂಭಿಸಿ ಬೆಂಗಳೂರು ನಗರದ 32 ಕಡೆಗಳಲ್ಲಿ ಹೋಟೆಲ್ ಕಾರ್ಮಿಕರು ವಾಸ ಮಾಡುವ ಸ್ಥಳಗಳನ್ನು ಗುರುತಿಸಿ ಸಮಿತಿಗಳಿಗೆ ರೂಪ ಕೊಡಲಾಯಿತು. ಈ ಸಮಿತಿಗಳಿಗೆ ಸಂಚಾಲಕರು, ಕಾರ್ಯಕಾರಿ ಸಮಿತಿ ಆಯ್ಕೆ ಮಾಡಲಾಯಿತು. ಈ 32 ಜನ ಸಂಚಾಲಕರಿಗೆ ರಾಜಕೀಯ ತರಬೇತಿ, ಅವರಿಂದ ಕಾರ್ಯಕಾರಿ ಸಮಿತಿ ಹಾಗೂ ಪ್ರದೇಶ ಸಮಿತಿ ಸದಸ್ಯರಿಗೆ ತರಗತಿ ನಡೆಸುವುದು ಇತ್ಯಾದಿ ಚಟುವಟಿಕೆ ಆರಂಭಿಸಲಾಯಿತು. ಈ ಕೆಲಸ ಮಧ್ಯರಾತ್ರಿ 2 ಗಂಟೆಯವರೆಗೆ ನಡೆಯುತ್ತಿತ್ತು. ಈ ಸಮಿತಿಗೆ ಸಂಚಾಲಕರನ್ನು, ಮುಖ್ಯಸ್ಥರನ್ನು ಗುರುತಿಸಲು ವಾರಗಟ್ಟಲೆ ಅವರು ಕೆಲಸ ಮಾಡುತ್ತಿದ್ದ ಸ್ಥಳಗಳಿಗೆ ಅಲೆದ ಘಟನೆಗಳಿವೆ. ಊಟ, ತಿಂಡಿ, ಬಸ್‌ಚಾರ್ಜ್ ಇಲ್ಲದೆ ಉದ್ಯಾನಗಳ ಬೆಂಚಿನ ಮೇಲೆ ಮಲಗಿದ ಸಂದರ್ಭಗಳಿವೆ. ಆದರೆ ಅಂದಿನ ಉತ್ಸಾಹದಾಯಕ ಅಂಶವೇನೆಂದರೆ ಹೋಟೆಲ್ ಕಾರ್ಮಿಕರಿಗೆ ಮಾಲೀಕರ ಅನ್ಯಾಯ, ದೌರ್ಜನ್ಯಗಳ ವಿರುದ್ಧ ಹೋರಾಡುವ ಉತ್ಸಾಹವಿತ್ತು. ಅದಕ್ಕೆ ಸರಿಯಾದ ಮುಖಂಡತ್ವ ನೀಡಲು ಸಿಐಟಿಯುಗೆ ಸಾಧ್ಯವಾಯಿತು. ಕಾಂ. ವಿ.ಜೆ.ಕೆ.ನಾಯರ್ ನೇತೃತ್ವ ವಹಿಸಿದ್ದರು.

ಅಂದು ಸಿಟಿ ಮಾರ್ಕೆಟ್ ಪ್ರದೇಶದ ಹೋಟೆಲ್‌ಗಳಿಗೆ ಬಾಗಿಲುಗಳೇ ಇರಲಿಲ್ಲ. ದಿನದ 24 ಗಂಟೆ ವ್ಯಾಪಾರ ನಡೆಯುತ್ತಿತ್ತು. ಇದಕ್ಕೆ ಹೊಂದಿಕೊಂಡೇ ಕೆಲಸಗಾರರು ದುಡಿಯಬೇಕಿತ್ತು. 8 ತಾಸಿನ ದುಡಿಮೆ ಎಂಬುದು ಇಲ್ಲಿ ಹಾಸ್ಯಾಸ್ಪದಕ್ಕೆ ಈಡಾಗಿತ್ತು. ಮನಬಂದಂತೆ ದುಡಿಸಲಾಗುತ್ತಿತ್ತು. ಕಾರ್ಮಿಕ ಇಲಾಖೆ ಅಸ್ತಿತ್ವದಲ್ಲಿದೆ, ಇ.ಎಸ್.ಐ., ಪಿ.ಎಫ್. ಸೌಲಭ್ಯಗಳಿವೆ ಎಂಬ ವಿಷಯವೇ ಹೋಟೆಲ್ ಕಾರ್ಮಿಕರಿಗೆ ತಿಳಿದಿರಲಿಲ್ಲ.

ಸಿಐಟಿಯು ಈ ಕೆಲಸಗಾರರನ್ನು ಸಂಘಟಿಸಿ 1979 ಮೇ 1 ರಂದು ಮಾಂಸಾಹಾರಿ ಹೋಟೆಲ್ ಕಾರ್ಮಿಕ ಐತಿಹಾಸಿಕ ಮುಷ್ಕರಕ್ಕೆ ಕರೆ ಕೊಡಲಾಯಿತು. ಈ ಮುಷ್ಕರ ಯಶಸ್ವಿಯಾಗದಂತೆ ಮಾಲೀಕರು -ಪೋಲೀಸರು ಹಲವು ತಂತ್ರಮಾಡಿದರು. ಆದರೆ ಕಾರ್ಮಿಕರು ಇದನ್ನು ವಿಫಲಗೊಳಿಸಿದರು. ಈ ಮುಷ್ಕರದಲ್ಲಿ 8,000 ಹೋಟೆಲ್ ಕೆಲಸಗಾರರು ಭಾಗವಹಿಸಿದ್ದರು. ಬೆಂಗಳೂರು ನಗರದಲ್ಲಿ ಅಂದು ಯಾವುದೇ ಮಾಂಸಾಹಾರಿ ಹೋಟೆಲ್ ತೆರೆಯಲಿಲ್ಲ. ನಗರದ ಹಲವಾರು ಕಡೆಗಳಿಂದ ಅಂದರೆ ಅಲಸೂರು, ಶಿವಾಜಿನಗರ, ಬ್ರಿಗೇಡ್ ರಸ್ತೆ, ಕಲಾಸಿಪಾಳ್ಯ, ಯಶವಂತಪುರ, ಶೇಷಾದ್ರಿಪುರ, ಚಾಮರಾಜಪೇಟೆ ಇತ್ಯಾದಿ ಕಡೆಗಳಿಂದ ಹೋಟೆಲ್ ಕಾರ್ಮಿಕರ ಮೆರವಣಿಗೆ ಹೊರಟು ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಸೇರಿತು. ಮಧ್ಯಾಹ್ನ ಮೆರವಣಿಗೆ ಆಗತಾನೆ ಸಿಐಟಿಯು ಜೊತೆ ಸಂಬಂಧ ಆರಂಭಿಸಿದ್ದ ಮೈಕೊ ಕಾರ್ಮಿಕರ ಜೊತೆ ಸೇರಿ ಬೃಹತ್ ಗಾತ್ರವಾಯಿತು. ಮುಷ್ಕರವು ಯಶಸ್ವಿಗೊಂಡು ಬೇಡಿಕೆಗಳು ಈಡೇರಿದವು.

ನನ್ನ ನೆನಪಿನ ಒಂದು ಮೇ ದಿನಾಚರಣೆ

ವಿ.ಜೆ.ಕೆ.ನಾಯರ್ ನೆನಪಿನಿಂದ

1979 ರ ಮೇ 1 ಬೆಂಗಳೂರಿನ ಹೋಟೆಲ್ ಕಾರ್ಮಿಕರ ಚಳುವಳಿಯ ಪಾಲಿಗೊಂದು ಸುವರ್ಣದಿನವಾಗಿ ಇತಿಹಾಸ ಸೇರಿದೆ. 1886 ರಲ್ಲೇ ಜಗತ್ತಿನಾದ್ಯಂತ ಕಾರ್ಮಿಕರ ಹಕ್ಕುಗಳು ಪ್ರಮುಖವಾಗಿ ದಿನಕ್ಕೆ 8 ಗಂಟೆಯ ದುಡಿಮೆಯ ನೀತಿ ಜಾರಿಗೆ ಬಂದಿದ್ದರೂ ಬೆಂಗಳೂರಿನ ಹೋಟೆಲ್ ಕಾರ್ಮಿಕರು ಈ ಹಕ್ಕುಗಳನ್ನು ಪಡೆದುಕೊಂಡದ್ದು ಸುಮಾರು ಒಂದು ಶತಮಾನ(90 ವರ್ಷ)ದ ನಂತರ. ಇದ್ದ ಕಾನೂನುಗಳೂ ಇವರ ರಕ್ಷಣೆಗೆ ಇರಲಿಲ್ಲ, ಹೋಟೆಲ್ ಮಾಲೀಕರು ತಮ್ಮ ಲಾಭದ ದಾಹಕ್ಕೆ ಇಡೀ ಕಾರ್ಮಿಕ ವರ್ಗವನ್ನು ನಿರ್ದಯವಾಗಿ ಶೋಷಿಸಿ, ಎಲ್ಲಾ ಕಾನೂನಾತ್ಮಕ ಹಕ್ಕುಗಳಿಂದಲೂ ವಂಚಿಸಿ, ಜೀತದಾಳುಗಳಂತೆ ದುಡಿಸಿಕೊಂಡದ್ದು ಕಾರ್ಮಿಕರ ಸಮರಶೀಲ, ಐಕ್ಯ ಹೋರಾಟದ ಮತ್ತು ಸಿಐಟಿಯುವಿನ ಸರಿಯಾದ ನಾಯಕತ್ವದಿಂದ ಈಗ ಇತಿಹಾಸದ ಕಸದ ಬುಟ್ಟಿಗೆ ಸೇರಿದೆ.

ಅಂದು ಅಸಂಘಟಿತವಾಗಿ ಬೆಂಗಳೂರಿನಾದ್ಯಂತ ಚದುರಿಹೋಗಿದ್ದ ಕಾರ್ಮಿಕರನ್ನು ಬೀದಿ, ಬೀದಿಗಳಲ್ಲಿ, ಓಣಿ ಓಣಿಗಳಲ್ಲಿ ತಿರುಗಿ ಮಾಲೀಕರ ಹದ್ದಿನ ಕಣ್ಣಿನ ಎದುರಿನಲ್ಲೇ ಸಂಘಟಿಸಲಾಯಿತು. ವಿ.ಜೆ.ಕೆ.ನಾಯರ್ ಮತ್ತಿತರ ಮುಖಂಡರ ಅವಿರತ ಶ್ರಮದೊಡನೆ, ಕಾರ್ಮಿಕರ ಸಣ್ಣದೊಡ್ಡ ಸಭೆ, ಸಮಾವೇಶಗಳಿಗೂ ಹಾಜರಾಗಿ ಮಾರ್ಗದರ್ಶನ ನೀಡಿ, ಸ್ಫೂರ್ತಿ ತುಂಬಿದಂತ, ಕಾರ್ಮಿಕ ವರ್ಗದ ಮರೆಯಲಾಗದ ನೇತಾರರಾಗಿದ್ದ ಕಾಂ. ಇ.ಎಂ.ಎಸ್., ಕಾಂ. ಪಿ.ರಾಮಮೂರ್ತಿಯವರು ಟೌನ್‌ಹಾಲ್ ಮತ್ತಿತರ ಕಡೆ ನಡೆಯುತ್ತಿದ್ದ ಸಭೆಗಳಿಗೆ ರಾತ್ರಿಯಾದರೂ ಸಾಕಷ್ಟು ಸಂಖ್ಯೆಯಲ್ಲಿ ಅನೇಕ ಕಿರುಕುಳಗಳನ್ನು ಸಹಿಸಿಯೂ ಕೆಲಸಗಾರರು ಹಾಜರಾಗುತ್ತಿದ್ದರು.

78-79 ರ ಸುಮಾರು ಒಂದು ವರ್ಷದ ಯೋಜನೆ, ಪ್ರಯತ್ನದ ಫಲವಾಗಿ ಒಂದು ಮುಷ್ಕರಕ್ಕೆ ವ್ಯಾಪಕ ತಯಾರಿ ನಡೆಯಿತು. 79 ರ ಮೇ ದಿನವನ್ನು ಹೋರಾಟದ ದಿನವನ್ನಾಗಿ ಆಚರಿಸಲು ಸರ್ವಸಿದ್ಧತೆಗಳೂ ನಡೆಯುತ್ತಿದ್ದರೆ ಈ ಮುಷ್ಕರ ಮತ್ತು ಮೇ ದಿನವನ್ನು ವಿಫಲಗೊಳಿಸಲು ಮಾಲೀಕರು ಪಣತೊಟ್ಟಿದ್ದರು. ಕಾರ್ಮಿಕರನ್ನು ತಡೆಯುವುದು, ಪೋಲೀಸರಿಂದ ಬಲಪ್ರಯೋಗ ನಡೆಸುವುದೂ ಸೇರಿದಂತೆ ವಿವಿಧ ರೀತಿಯಾಗಿ ಮಾಲೀಕರು ಪಿತೂರಿ ನಡೆಸಿದರು. ಇದನ್ನು ಅರಿತ ಕಾರ್ಮಿಕ ವರ್ಗ 79 ರ ಎಪ್ರಿಲ್ 30 ರ ಮಧ್ಯರಾತ್ರಿಯೇ ಬೀದಿ-ಬೀದಿಗಳಿಂದ ಸಭೆ ನಡೆಯುತ್ತಿದ್ದ ಸ್ಥಳಗಳತ್ತ ಬರತೊಡಗಿದರು. ಇದರಿಂದ ಕಣ್ಣು ಕೆಂಪಗಾದ ಮಾಲೀಕರು ಕಾರ್ಮಿಕರ ಮೇಲೆ ಪೋಲೀಸರನ್ನು 'ಛೂ' ಬಿಟ್ಟರು. ಕಲಾಸಿಪಾಳ್ಯ, ಕಿನೋ ಥಿಯೇಟರ್ ಎದುರು ಸಹ ಪೋಲೀಸರು ದಾಳಿ ನಡೆಸಿದರು. ಲಾಠಿಗಳಿಂದ ಚಚ್ಚಿ, ರಕ್ತ ಹರಿದರೂ ಚದುರದ ಕಾರ್ಮಿಕರು ಆ ಕ್ಷಣದಲ್ಲೇ ಅಲ್ಲಿಗೆ ಬಂದು ಒಂದಾಗಿಬಿಡುತ್ತಿದ್ದರು.

ಅಂತಿಮವಾಗಿ 79 ರ ಮೇ ದಿನಾಚರಣೆಗೆ ಸಾವಿರ, ಸಾವಿರ ಸಂಖ್ಯೆಯಲ್ಲಿ ಬಂದ ಹೋಟೆಲ್ ಕೆಲಸಗಾರರೊಂದಿಗೆ ಮೈಕೊ ಕಾರ್ಮಿಕರೂ ಸೇರಿಕೊಂಡು ಮೇ ದಿನಾಚರಣೆ ಯಶಸ್ವಿಯಾಗಿ ನಡೆಯಿತು.

ಇದರ ಯಶಸ್ಸಿನ ಸ್ಫೂರ್ತಿಯಲ್ಲೇ ಕಾರ್ಮಿಕರು ತಮ್ಮ ಬೇಡಿಕೆಗಳಿಗೆ ಮುಷ್ಕರ ನಡೆಸಲು ಆರಂಭಿಸಿದರು. ಮಾಲೀಕರು ತಾವೂ ಕೂಡಾ ಸಿ.ಎಂ.ಇಬ್ರಾಹಿಂ ಅಧ್ಯಕ್ಷತೆಯಲ್ಲಿ ಮಾಲೀಕರ ಸಂಘವೊಂದನ್ನು ರಚಿಸಿಕೊಂಡು ಹೋಟೆಲ್‌ಗಳನ್ನೇ ಮುಚ್ಚಿಸಿಬಿಟ್ಟರು. ಮೂರು ದಿನಗಳಾದರೂ ಮುಷ್ಕರ ನಿಲ್ಲದಿದ್ದಾಗ ಆಗಿನ ಕಾರ್ಮಿಕ ಆಯುಕ್ತರಾಗಿದ್ದ ಪಿ.ಡಿ.ಶೆಣೈರವರು ಮಧ್ಯ ಪ್ರವೇಶಿಸಿ ವಿಜೆಕೆನಾಯರ್, ಬಾಬೂ ಮಾಥ್ಯೂ ಒಳಗೊಂಡ ಒಂದು ಸಮಿತಿಯನ್ನು ರಚಿಸಿದರು. ಮಾತುಕತೆಗಳೂ ನಡೆದು, ಕೊನೆಗೂ ಕಾರ್ಮಿಕ ವರ್ಗದ ಚಳುವಳಿಯನ್ನು ಮುರಿಯಲು ಹೋಗಿ ಮಣ್ಣುಮುಕ್ಕಿದ ಮಾಲೀಕರು ಕಾರ್ಮಿಕರ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕಾಯಿತು.

ದಶಕಗಳ ಕಾಲ ವಂಚಿಸಲ್ಪಟ್ಟಿದ್ದ ಕಾರ್ಮಿಕರ ಹಕ್ಕುಗಳು ಅಂದಿನಿಂದ ಕಾರ್ಮಿಕರ ಪಾಲಾದವು. ಸಿಐಟಿಯುವಿನ ಸಮರಧೀರ ನಾಯಕತ್ವದ ಈ ಹೋರಾಟ ಒಂದು ಯಶಸ್ವಿ ಬೆಂಗಳೂರಿನ ಹೋಟೆಲ್ ಕಾರ್ಮಿಕರ ಪಾಲಿನ ಸುವರ್ಣ ಹೋರಾಟವಾಗಿ ಇತಿಹಾಸ ಸೇರಿತು. ಮುಂದೆ ಈ ಮಾಲಕರು ಇಂತಹ ಬಲಿಷ್ಟ ಚಳುವಳಿಯನ್ನು ಮುರಿಯಲು ಹಲವಾರು ಅಪಪ್ರಚಾರ, ಕುತಂತ್ರ ನಡೆಸಿದ್ದು ಕಣ್ಣೆದುರಿನಲ್ಲೇ ಇದೆ.

ಕರ್ನಾಟಕದಲ್ಲಿ ಈ ವಾರ......

ಪುಟ 3 ರಿಂದ

ಒಳಗೊಂಡು ಹೆಜ್ಜೆ ಹೆಜ್ಜೆಗೆ ಹಣ ತೆರಬೇಕು. ಇಲ್ಲವಾದರೆ ಒಂದು ದಿನ ಗಾಳಿ, ನೀರು ಇಲ್ಲವಾಗಬಹುದು. ಇದಕ್ಕೆ ಬಿಜೆಪಿ ಸರ್ಕಾರ ಕುಮ್ಮಕ್ಕು. ರಾಜ್ಯದಲ್ಲಿಯೂ ಇವುಗಳ ಆರಾಧನೆ, ಬೆಂಬಲ, ಕೃಷ್ಣರ ಜೊತೆ ತಾಳಕ್ಕೆ - ಬಿಜೆಪಿಯದೂ ತಾಳ.

ಆದ್ದರಿಂದ ಜನರ ಜೀವ ಹಿಂಡುವ, ಸಾರ್ವಜನಿಕ ಸ್ವತ್ತುಗಳನ್ನು ಮನಬಂದಂತೆ ಮಾರಿ, ಮೇಯುವ ಈ ಉದಾರೀಕರಣದ ಆರಾಧಕರಿಗೆ ಅಧಿಕಾರ ನೀಡಲಾದೀತೆ? ಖಂಡಿತ ಕೂಡದು. ಕಾಂಗ್ರೆಸ್, ಹಾಗೆಯೇ ಖಾಸಗೀಕರಣ ಮತ್ತು ಕೋಮುವಾದಕ್ಕೆ ನೆಲೆಯೂರುವಂತೆ ಬಿಜೆಪಿ -ಅದರ ಸಹವರ್ತಿಗಳನ್ನೆಲ್ಲಾ ಸೋಲಿಸಬೇಕು. ಅದಕ್ಕಾಗಿ ಜನಸಾಮಾನ್ಯರ ಹಿತಕಾಯಲು ಎಡ ಶಕ್ತಿಗಳು, ಪ್ರಗತಿಪರ, ಜಾತ್ಯಾತೀತರನ್ನು ಬೆಂಬಲಿಸಬೇಕು.

ಇಲ್ಲಿ ಆಸಕ್ತಿದಾಯಕ ವಿಷಯವೊಂದಿದೆ. ಈ ಚುನಾವಣೆಯಲ್ಲಿ ಬಿಜೆಪಿ ಕೇವಲ 1700 ರಷ್ಟು ಸ್ಥಾನಗಳಿಗೆ ಮಾತ್ರ ಸ್ಪರ್ಧಿಸಿದೆ. ಉಳಿದ 2000 ಕಡೆ ಅದಕ್ಕೆ ಅಭ್ಯರ್ಥಿಗಳೇ ಇಲ್ಲವೆಂಬುದು ನಗರಕೇಂದ್ರೀಕೃತ, ಮಧ್ಯಮ ವರ್ಗಗಳ ನಡುವಿನ ಪಕ್ಷ ಎಂದು ಗುರುತಿಸಲಾಗುತ್ತಿದ್ದ ಈ ಪಕ್ಷದ ಪರಿಸ್ಥಿತಿ ಜನರ ತಿರಸ್ಕಾರಕ್ಕೀಡಾಗುತ್ತಿರುವುದುರ ಒಂದು ಸೂಚನೆ. ಅಲ್ಲದೇ ನಗರಗಳಲ್ಲಿ ಬಲವಿದೆ ಎಂಬುದು ಅದರ ಬಡಾಯಿಕೊಚ್ಚಿಕೊಳ್ಳುತ್ತಿದ್ದುದರ ಸೂಚನೆಯೂ ಆಗಿದೆ. ಪಕ್ಷೇತರ ಅಭ್ಯರ್ಥಿಗಳ ಸಂಖ್ಯೆ ಜಾಸ್ತಿಯಾಗಲು ಕಾಂಗ್ರೆಸ್ ಮತ್ತು ಬಿಜೆಪಿ ವಿರುದ್ಧದ ಅತೃಪ್ತಿಯೇ ಪ್ರಮುಖ ಕಾರಣ.

ಸೀಮಿತವಾದರೂ ಸಿಪಿಐ(ಎಂ) ಹಲವಾರು ಕಡೆ ಸ್ಪರ್ಧೆಗೆ ಇಳಿದಿದೆ. ಅದು ಜನರ ಹಿತಗಳಿಗಾಗಿ ಹೋರಾಡಿದ ಹಿನ್ನೆಲೆಯಿಂದ ಮತ್ತು ಪರ್ಯಾಯ ಜನಪರ ನೀತಿಗಳಿಗೆ ಸದಾ ಹೋರಾಡುತ್ತಿದೆ. ಅಲ್ಲಿ ಗೆದ್ದು ಬಂದ ಸದಸ್ಯರು ಸದಾ ಜನಹಿತಗಳನ್ನು ಲಕ್ಷಿಸಿ, ರಕ್ಷಿಸಲು ಹೋರಾಟ ಮುಂದುವರಿಸಿದ್ದಾರೆ. ಅಧಿಕಾರಕ್ಕೆ ಬಂದಲ್ಲಿ ಅತ್ಯುತ್ತಮ ಆಡಳಿತ ನೀಡಿದ್ದಾರೆ(ಕುಂದಾಪುರ, ದಾಂಡೇಲಿ ಮುಂತಾಗಿ). ಈ ಚುನಾವಣೆಗಳನ್ನು ಜನ ಗಂಭೀರವಾಗಿ ತೆಗೆದುಕೊಳ್ಳಬೇಕು. ನಿರ್ದಿಷ್ಟ ವಿಷಯ, ಸಮಸ್ಯೆ, ರಾಜಕೀಯ ವಿಚಾರಗಳನ್ನು ಪರಿಗಣಿಸಬೇಕು.

ಬಯೋನೆಟ್ಟನ್ನು ಮೆಟ್ಟಿದ ಮೇ ದಿನ

1902 ರಲ್ಲಿ ರಶಿಯಾದ ಸೋರ್ಮೊವೋ ನಗರದ ನಿಝ್ನಿ ನೋವ್ಗೊರೋಡ್ ಕಾರ್ಖಾನೆಯೊಂದರ ಕಾರ್ಮಿಕರು ಮೊದಲ ಮೇ ದಿನಾಚರಣೆ ನಡೆಸಲು ಸಿದ್ಧರಾದರು. ಎಲ್ಲೆಲ್ಲೂ ಜನರ ಹೋರಾಟಗಳನ್ನು ಹುಟ್ಟುಹಾಕುತ್ತಿದ್ದ ಝಾರ್‌ನ ಕಾಲವದು. ಪೋಲೀಸರು ಇದನ್ನು ತಡೆಯಲು ಮುಂದಾದರು. ಇವುಗಳಿಗೆ ಸೊಪ್ಪು ಹಾಕದೇ ಕೆಂಬಾವುಟ ಹಿಡಿದು ಮೇ ದಿನ ಆಚರಿಸಿದರು. ಕಾರ್ಮಿಕರು ಆಚರಿಸಿದ್ದು ಹೇಗೆಂಬುದು ಈ ಕಥೆಯಲ್ಲಿ...
ಇದರಲ್ಲಿ ಭಾಗವಹಿಸಿದವರ ಮೇಲೆ ಮೊಕದ್ದಮೆ ಹೂಡಿ ಜೈಲಿಗಟ್ಟಿದರು.
ಇದು ರಶಿಯಾದ್ಯಂತ ವಿಶಾಲ ಪ್ರತಿಕ್ರಿಯೆಯನ್ನು ಎಬ್ಬಿಸಿತು. "ಶ್ರಮಜೀವಿ ವರ್ಗವು ತನ್ನ ಭೀಕರ ಶತ್ರುವಿನೊಂದಿಗೆ ನಡೆಸಿದ ಮೊದಲ ಘರ್ಷಣೆಯ ದಿನ. ಶ್ರಮಜೀವಿ ವರ್ಗ ತನ್ನ ಅತುಲ ಪರಾಕ್ರಮ ತೋರಿದ ದಿನ' ಎಂದು ಬಣ್ಣಿಸುತ್ತಾರೆ ಗಾರ್ಕಿ.

"ಸಂಗಾತಿಗಳೇ! ನಾವೊಂದು ತೀರ್ಮಾನ ಮಾಡಿ ಆ ದಿನ ಇಲ್ಲಿಗೆ ಬಂದಿದ್ದೀವಿ. ನಾವು ಯಾರು ಅನ್ನೋದನ್ನ ಈ ದಿನ ಘೋಷಿಸ್ಬೇಕು; ವಿಚಾರದ, ನ್ಯಾಯದ, ಸ್ವಾತಂತ್ರ್ಯದ ನಮ್ಮ ಬವುಟಾನ ಈ ದಿನ ಹಾರಿಸ್ಬೇಕು ಅನ್ನೋದೇ ಆ ನಿರ್ಧಾರ!

ಉದ್ದನೆಯ ಬಿಳಿಯ ಧ್ವಜದ ಕೋಲೊಂದು ಗಾಳಿಯಲ್ಲಿ ಚಮಕಿಸಿತು. ಜನರ ಗುಂಪಿಗೆ ಬಾಗಿ, ಅದನ್ನು ಇಬ್ಭಾಗಿಸಿ, ಅದರೊಳಗೆ ಅಡಗಿಕೊಂಡು ಕ್ಷಣಕಾಲ ಬಳಿಕ ಮತ್ತೆ ಮೇಲಕ್ಕೆದ್ದಿತು. ಕೂಲಿಕಾರ ವರ್ಗದ ವಿಶಾಲವಾದ ಕೆಂಪು ಬಾವುಟ, ದೊಡ್ಡದೊಂದು ಹಕ್ಕಿಯ ರೆಕ್ಕೆಗಳಂತೆ, ಮೇಲ್ಮುಖವಾಗಿದ್ದ ಜನರ ದೃಷ್ಟಿಗಳನ್ನು ದಾಟಿ ಎತ್ತರಕ್ಕೆ ಏರಿತು.

ಪಾವೆಲ್ ತೋಳನ್ನು ಮೇಲಕ್ಕೆತ್ತಿದ; ಬಾವುಟ ಓಡಾಡಿತು. ಹತ್ತಾರು ಕೈಗಳು ಮುಂಚಾಚಿ ಮೃದುವಾದ ಆ ಬಿಳಿಯ ಧ್ವಜಕೋಲನ್ನು ಹಿಡಿದುವು. ತಾಯಿಯ ಕೈಯೂ ಮುಂದೆ ಬಂದು ಧ್ವಜಗೋಲನ್ನು ಮುಟ್ಟಿತು.

"ಕೂಲಿಕಾರ ವರ್ಗ ಚಿರಾಯುವಾಗಲಿ!" ಎಂದು ಪಾವೆಲ್ ಜಯಕಾರ ಮಾಡಿದ.

ಉತ್ತರವಾಗಿ ನೂರಾರು ಕಂಠಗಳು ಗರ್ಜಿಸಿದುವು.

"ಸಂಗಾತಿಗಳೇ! ಸೋಶಿಯಲ್ ಡೆಮೋಕ್ರಾಟಿಕ್ ಕಾರ್ಮಿಕ ಪಾರ್ಟಿ, ನಮ್ಮ ವಿಚಾರಗಳ ಉತ್ಪತ್ತಿಸ್ಥಾನ, ಚಿರಾಯುವಾಗಲಿ!"

ಗುಂಪಿಗೆ ಕಳೆ ಬಂತು; ಉತ್ಸಾಹ ಚಿಮ್ಮಿತು. ಬಾವುಟದ ಮಹತ್ವ ತಿಳಿದವರು ಅದರ ಬಳಿ ಬಂದರು. ಮಾಜಿನ್, ಸಮೋಯ್‌ಲೋವ್, ಗೂಸೆವ್‌ರು ಪಾವೆಲ್‌ನ ಬಳಿಗೆ ಬಂದು ನಿಂತರು. ನಿಕೋಲಾಯ್, ತಲೆ ಬಗ್ಗಿಸಿಕೊಂಡು, ಜನರ ಒತ್ತಡವನ್ನು ಭೇದಿಸಿಕೊಂಡು ಮುಂದೆ ಬಂದ. ಶುಭ್ರ ಕಣ್ಣುಗಳ ಅಪರಿಚಿತರಾದ ಯುವಕರು ತನ್ನನ್ನು ಬದಿಗೊತ್ತಿ ಮುಂದೆ ಸಾಗುತ್ತಿದ್ದಂತೆ ತಾಯಿಗೆ ಭಾಸವಾಯಿತು.

"ಎಲ್ಲ ದೇಶಗಳ ಶ್ರಮಿಕರು ದೀರ್ಘಕಾಲ ಬಾಳಲಿ!" ಎಂದು ಪಾವೆಲ್ ಘೋಷಿಸಿದ.

ಹೃದಯ ಕಲಕುವ ಸ್ವರವೊಂದು ಸಾವಿರ ಕಂಠಗಳಿಂದ ಹೊರಟು, ಸಂತೋಷದ ಶಕ್ತಿಯ ತಾರಕ ಸ್ವರವಾಗಿ ಉತ್ತರವಿತ್ತಿತು.

ಜನ ಹೆಚ್ಚಿತು. ಪಾವೆಲ್ ಬಾವುಟವನ್ನೆತ್ತಿ ಹಿಡಿದು, ಮುಂದಕ್ಕೆ ನಡೆದ. ಮುಖವರಳಿಸಿ ಶುಭ್ರವಾಗಿ ನಗುತ್ತಿದ್ದ ಸೂರ್ಯನ ಬೆಳಕಿನಲ್ಲಿ ಬಾವುಟ ಕಂಗೊಳಿಸಿತು.

ಫ್ಯೋದೊರ್ ಮಾಜಿನ್ ಹಾಡತೊಡಗಿದ :

"ಹಳೆಯ ಲೋಕವನೆಂದೆಂದಿಗೂ ನಾವು ತ್ಯಜಿಸೀ...


ಹತ್ತಾರು ಇತರ ಕಂಠಗಳಿಂದಲೂ ಎರಡನೆಯ ಚರಣ ಬಂತು:

"ನಂಪಾದಗಳಿಂದದರ ಧೂಳನು ಹೊಡೆದು ಝಾಡಿಸೀ...

"ಹೋರಾಡಲೇಳಿ, ಓ ಕಾರ್ಮಿಕರೇ,

ಏಳಿ, ದುಡಿಮೆಯುಪವಾಸದಾ ಬಂದಿಗಳೇ ಏಳಿ!

ಕೆಂಪು ಬಾವುಟವನ್ನು ಕಾಣಲು ಜನರು ಓಡಿಯೋಡಿ ಬರುತ್ತಾ ಗದ್ದಲಮಾಡುತ್ತಲೇ ಇದ್ದರು. ಆ ಗದ್ದಲ, ಹಾಡಿನ ಸ್ವರಕ್ಕೆ ಶ್ರುತಿಯಾಯಿತು. ಮನೆಗಳಲ್ಲಿ ತಗ್ಗಿದ ಸ್ವರದಲ್ಲಿ ಅದೇ ಹಾಡನ್ನು ಕಾರ್ಮಿಕರು ಹಿಂದೆ ಹಾಡಿದ್ದರು. ಆದರೆ ಇಲ್ಲಿ ಬೀದಿಯಲ್ಲಿ ನಿರಂಕುಶವಾಗಿ ಪ್ರಬಲ ಶಕ್ತಿಯಿಂದ ಆ ಹಾಡೂ ಹರಿಯಿತು. ಅದಮ್ಯವಾದ ಧೈರ್ಯ ಆ ಹಾಡಿನಲ್ಲಿ ಪ್ರತಿಧ್ವನಿಸುತ್ತಿತ್ತು. ಭವಿಷ್ಯತ್ತಿನ ಹಾದಿಯಲ್ಲಿ ನಡೆದು ಬನ್ನಿರೆಂದು ಜನರನ್ನದು ಕರೆಯುತ್ತಿತ್ತು. ಆದರೆ ಜೊತೆಯಲ್ಲೇ, ಮುಚ್ಚುಮರೆಯಿಲ್ಲದೆ, ಅದೆಷ್ಟು ಕಷ್ಟದ ಹಾದಿ ಎಂಬುದನ್ನೂ ಹಾಡು ಹೇಳುತ್ತಿತ್ತು. ಸತ್ತು ಜಡವಾಗಿದ್ದ ವಿಚಾರಗಳ ಕರಿಯ ಇಜ್ಜಲನ್ನು, ಪರಂಪರಾಗತವಾಗಿ ಭಾವನೆಗಳ ಭಾರವಾದ ಕೊಳಚೆಯನ್ನು ಹಾಡಿನ ಶಾಂತವಾದ ಜ್ವಾಲೆ ದಹಿಸಿತು; ಹೊಸತಿನ ಕುರಿತಾದ ಭೀತಿಯನ್ನು ಸುಟ್ಟು ಭಸ್ಮ ಮಾಡಿತು.



ಒಮ್ಮೆಲೆ ಮೆರವಣಿಗೆಯ ಮುಂಭಾಗ ಯಾವುದಕ್ಕೋ ಢಿಕ್ಕಿ ಹೊಡೆದಂತಾಯಿತು. ಮೆರವಣಿಗೆಯ ದೇಹವೇ ಹಿಂದಕ್ಕೆ ಬಾಗಿ ಮೆಲ್ಲನೆ ಕೋಪದ ಗರ್ಜನೆ ಮಾಡಿದ ಹಾಗಾಯಿತು. ಹಾಡು ಕೂಡಾ ಕಂಪಿಸಿತು. ಆದರೆ ಅದು ಕ್ಷಣಕಾಲ. ಬಳಿಕ ಮೊದಲಿಗಿಂತ ಹೆಚ್ಚು ವೇಗವಾಗಿ ಗಟ್ಟಿಯಾಗಿ ಹಾಡು ಕೇಳಿಸಿತು. ಆದರೆ ಮತ್ತೊಮ್ಮೆ ಸ್ವರ ನಿಂತಿತು. ಒಬ್ಬರ ಹಿಂದೊಬ್ಬರಾಗಿ ಜನರು ಹಾಡುವುದನ್ನು ನಿಲ್ಲಿಸಿದರು. ಅಲ್ಲಲ್ಲಿ ಸ್ವರಗಳು ಮತ್ತೆ ಆ ಹಾಡನ್ನೆತ್ತಿ ಹಿದಿನ ಗಂಭೀರತೆಗೇರಿಸಿ ಮುಂದುವರಿಸಲು ಯತ್ನಿಸಿದುವು.

ಹೋರಾಡಲೇಳಿ, ಓ ಕಾರ್ಮಿಕರೇ,

ಏಳಿ!

ಏಳಿ, ದುಡಿಮೆಯುಪವಾಸದಾ ಬಂದಿಗಳೇ...."

ಆದರೆ ಈ ಯತ್ನದಲ್ಲಿ ಸಾಮೂಹಿಕ ನಿರ್ಧಾರವಿರಲಿಲ್ಲ. ಒಗ್ಗೂಡಿದ ಶ್ರದ್ಧೆ ಇರಲಿಲ್ಲ. ಸ್ವರಗಳಲ್ಲಿ ಗಾಬರಿಯ ಕಂಪನವಿತ್ತು.

ಮುಂದುಗಡೆ ಏನಾಗುತ್ತಿತ್ತೆಂಬುದು ತಾಯಿಗೆ ಕಾಣುತ್ತಿರಲಿಲ್ಲ. ಏನು ಸಂಭವಿಸಿತೆಂದು ಅವಳಿಗೆ ಗೊತ್ತಾಗಲಿಲ್ಲ. ಆ ಕಾರಣದಿಂದ ಅವರು ಮೆರವಣಿಗೆಯಲ್ಲಿದ್ದವರನ್ನು ಬದಿಗೆ ತಳ್ಳಿ ಮುಂದಕ್ಕೆ ಹೋಗತೊಡಗಿದಳು. ಮುಂದೆ ಸರಿದಂತೆ, ಹಿಂದಕ್ಕೆ ಬರುತ್ತಿದ್ದ ಜನರಿಗೆ ಆಕೆ ಢಿಕ್ಕಿ ಹೊಡೆಯಬೇಕಾಯಿತು. ಅವರಲ್ಲಿ ಕೆಲವರು ಹುಬ್ಬು ಗಂಟಿಕ್ಕಿ ತಲೆಬಾಗಿಸಿದ್ದರು. ಕೆಲವರು ಅಸಮಾಧಾನದಿಂದ ಮುಗುಳ್ನಗುತ್ತಿದ್ದರು. ಬೇರೆ ಕೆಲವರು ವ್ಯಂಗ್ಯವಾಗಿ ಸಿಳ್ಳು ಹೊಡೆಯುತ್ತಿದ್ದರು. ನಿರೀಕ್ಷಣೆ, ವಿನಂತಿ; ಪ್ರಾರ್ಥನೆಗಳಿಂದ ತುಂಬಿದ್ದ ತನ್ನ ಕಣ್ಣುಗಳಿಂದ ತಾಯಿ ಅವರ ಮುಖಗಳನ್ನು ಶೋಧಿಸಿದಳು.

"ಸಂಗಾತಿಗಳೇ!" ಎಂದು ಪಾವೆಲ್‌ನ ಸ್ವರ ಕೇಳಿಸಿತು. "ಸೈನಿಕರೂ ನಮ್ಮ ಹಾಗೆಯೇ ಮನುಷ್ಯರು! ಅವರು ನಮ್ಮನ್ನ ಮುಟ್ಟಲಾರರು. ಅವರು ಯಾಕೆ ನಮ್ಮ ಮೇಲೆ ಕೈ ಎತ್ತಬೇಕು? ಎಲ್ಲರಿಗೂ ಅನ್ವಯಿಸೋ ಸತ್ಯಾನ ನಾವು ಹೇಳ್ತಿರೋದಾಕ್ಕಾ? ಆ ಸತ್ಯ ನಮಗೆಷ್ಟು ಪ್ರಿಯವಾದದ್ದೊ ಅವರಿಗೂ ಅಷ್ಟೇ ಪ್ರಿಯವಾದದ್ದು. ಈಗ ಅವರಿಗೆಲ್ಲ ಅರ್ಥವಾಗದೇ ಇರಬಹುದು. ಆದರೆ ಕೊಲೆ, ಲೂಟಿಯ ಬಾವುಟದ ಕೆಳಗೆ ನಿಂತು ನಮ್ಮನ್ನು ಇದಿರಿಸೋ ಬದಲು, ಅವರು ನಮ್ಮ ಜತೆ ಸೇರಿ, ಸ್ವಾತಂತ್ರ್ಯ ಬಾವುಟದ ಕೆಳಗೆ ನಿಲ್ಲೋ ದಿನ ದೂರವಿಲ್ಲ. ಆ ಸತ್ಯವನ್ನು ಅವರು ಬೇಗನೇ ತಿಳಿಯುವಂತೆ ಮಾಡೋದ್ದಕ್ಕಾಗಿ ನಾವು ಮುಂದೆ ಸಾಗ್ಬೇಕು. ಮುನ್ನಡೆಯಿರಿ, ಬಾಂಧವರೇ! ಮುನ್ನಡೆಯಿರಿ!"

ಪಾವೆಲ್‌ನ ಸ್ವರ ದೃಢವಾಗಿತ್ತು. ಅವನ ಮಾತು ತೀಕ್ಷ್ಣವಾಗಿ ಸ್ಪಷ್ಟವಾಗಿ ಕೇಳಿಸಿತು. ಆದರೆ ಗುಂಪು ಚದರತೊಡಗಿತು. ಒಬ್ಬರ ಹಿಂದೊಬ್ಬರು ಮೆರವಣಿಗೆಯ ಸಾಲಿನಿಂದ ಹೊರಬಿದ್ದರು. ಅಕ್ಕಪಕ್ಕ ಮನೆಗಳ ಬೇಲಿಗೊರಗಿ ನಿಂತರು. ಮೆರವಣಿಗೆಯೀಗ ಮೊನಚಾದ ರೂಪ ತಾಳಿತು. ಪಾವೆಲ್ ಅದರ ಮುಂಚೂಣಿಯಾಗಿದ್ದ. ಕೂಲಿಕಾರರ ಆ ಕೆಂಪು ಬಾವುಟ ಅವನ ಮೇಲ್ಗಡೆ ಶುಭ್ರವಾಗಿ ಹಾರಾಡುತ್ತಿತ್ತು. ಅದಕ್ಕಿಂತಲೂ ಹೆಚ್ಚು ಚೆನ್ನಾಗಿ

ಪುಟ 12ಕ್ಕೆ



ಈಗ ಎಲ್ಲಾ ಬದಲಾಗಿದೆ

ಈಗ ಎಲ್ಲಾ ಬದಲಾಗಿದೆ, ಆದರೆ ಆಗ ಕಾಲ
ಕಠಿಣವಾಗಿತ್ತು -
ದಿನಗಳು ತೀಕ್ಷ್ಣವಾಗಿದ್ದವು, ಕಷ್ಟಕರವಾಗಿದ್ದವು.
ಮುಳ್ಳುಮೊನೆಗಳಿಂದ ಕೂಡಿದ್ದವು
ನಲವತ್ತು ವರ್ಷಗಳ ಕಾಲ
ಗುಡಿಗಳ ಬಳಿ ತೋಳಗಳು ಊಳಿಟ್ಟವು
ಬೆಂಕಿಯಿಂದ ಹಸಿವೆಯಿಂದ
ವಿಷಗಾಳಿಯಿಂದ ಸಾವಿನಿಂದ
ಬದುಕಿನ ಮೂರ್ತಿಯನ್ನುರುಳಿಸಲು
ಹಾತೊರೆದವು.

ಅವಳು ಲೆನಿನ್,
ನಿನ್ನ ಮಗಳು
ವಿಜಯ, ಸಾಯಬೇಕೆಂದು ಅವು ಬಯಸಿದವು
ಜತೆಗೆ
ವಿಶಾಲ ಉದಾತ್ತ
ಮಾನವೀಯ ಶಕ್ತಿಯುತ
ಸೋವಿಯತ್ ಒಕ್ಕೂಟವನ್ನು ಕೊಲ್ಲಬೇಕೆಂದು
ಬಯಸಿದವು

ಆದರೂ ಸೋತವು
ರೊಟ್ಟಿಯ ಅಭಾವವಿತ್ತು
ಇದ್ದಲಿನ ಅಭಾವವಿತ್ತು
ಬದುಕಿನದೇ ಅಭಾವವಿತ್ತು;
ಆಕಾಶಗಳಿಂದ ಮಳೆ ಬಿತ್ತು
ಹಿಮ ಬಿತ್ತು
ರಕ್ತ ಬಿತ್ತು
ಬಡವರ ಉರಿಯುವ ಗುಡಿಸಲುಗಳ ಮೇಲೆ;

ಆದರೂ
ಹೊಗೆ ಬೆಂಕಿಗಳ ಮಧ್ಯೆ ಕಾಣಿಸಿತು ಅವರಿಗೆ
ಬಲು ದೂರ ದೇಶಗಳ ಜನರಿಗೆ
ಬದುಕಿನ ಮೂರ್ತಿ ಹೇಗೆ
ತನ್ನನ್ನು ಸಮರ್ಥಿಸಿಕೊಂಡಳೆಂದು
ಹೇಗೆ ಬೆಳೆ ಬೆಳೆದು
ಆಕೆಯ ಧೀರ ಹೃದಯ
ನಕ್ಷತ್ರವಾಯಿತೆಂದು
ಲೆನಿನ್ ದೂರದ ಈ ದೇಶಗಳಿಂದ
ಧನ್ಯವಾದಗಳು ನಿನಗೆ
ನೀನು ಆ ಮಹಾ ಹೆಜ್ಜೆಗಳ
ಚುರುಕು ನೋಟಗಳ ಆ ದಿನಗಳಿಂದ
ಸುಖಿಕ್ಯಾಗಿ ನಡೆಸುವ ಹೋರಾಟಗಳಲ್ಲಿ
ಜನ ಒಂಟಿಯಲ್ಲ

ಜೀವಂತವಾಗಿದೆ ನಿನ್ನ ವಿಶಾಲನಾಡು,
ದಿಗ್ಬಂಧನವನ್ನು ಸಹಿಸಿ,
ಯುದ್ಧವನ್ನೂ ವಿಪತ್ತನ್ನೂ ಸಹಿಸಿ;
ಯಾರೂ ಉರುಳಿಸಲಾಗದ ಅಜೇಯ ಕೊತ್ತಳ
ಆದ್ದರಿಂದೀಗ
ಜನ ಬೇರೆಯೇ ಬದುಕನ್ನು ಬಾಳುತ್ತಾರೆ.
ಬೇರೆಯೇ ರೊಟ್ಟಿ ಉಣ್ಣುತ್ತಾರೆ-ನಿರೀಕ್ಷೆಯ
ರೊಟ್ಟಿ ಯಾಕೆಂದರೆ ಈ ಲೋಕದ ಮಧ್ಯೆ
ಜೀವಂತವಾಗಿದ್ದಾಳೆ, ಲೆನಿನ್‌ನ ಮಗಳು,
ತನ್ನ ಬೆಳಕಿನಿಂದ ಎಲ್ಲವನ್ನೂ ವಿಶ್ಲೇಷಿಸುತ್ತಾರೆ.

- ಪಾಬ್ಲೊ ನೆರೂದ

ಲೆನಿನ್

ಲೆನಿನ್, ನಿನ್ನ ಕೈಗಳು ಕೆಲಸ ಮಾಡುತ್ತಲೇ ಇದ್ದವು
ನಿನ್ನ ಮನಸ್ಸೆಂದೂ ವಿಶ್ರಾಂತಿ ಅರಿತಿರಲಿಲ್ಲ.
ಕೊನೆಗೆ
ದಿಗಂತದ ಅಗಲದಲ್ಲಿ
ಹೊಳೆಯುವ ಪ್ರತಿಮೆಯೊಂದೆದ್ದಿತು
ಮೂರ್ತಿಯ ಹಾಗೆ,
ರಕ್ತಮಯವಾಗಿತ್ತು ಅದು:
ಚಿಂದಿ ಬಟ್ಟೆ ಹೊದ್ದ ವಿಜಯ.
ಸೂರ್ಯಪ್ರಭೆಗಿಂತ ಸುಂದರ ಹೆಂಗಸು,
ಮೈಯೆಲ್ಲ ಗಾಯದ ಕಲೆ, ಹೊಗೆ
ಮುಸುಕಿದವಳು
ಬಲುದೂರ ದೇಶಗಳ ಜನ ತಲೆ ಎತ್ತಿ
ನೋಡಿದರು.
ಹೌದು, ಆಕೆಯೇ, ನಿಸ್ಸಂದೇಹವಾಗಿ - ಅದು
ಕ್ರಾಂತಿ.
ವಿಶ್ವದ ಹಳೆ ಹೃದಯ ಹೊಸ ತಾಳ ಹಾಕಿತು.

ಲೆನಿನ್ ಭೂಮಿಯ ಮಾನವ,
ನಿನ್ನ ಕೈಯೇ
ಇವತ್ತು ನಕ್ಷತ್ರಗಳ ಚಾಲಕ
ಜನತೆಗೆ ನೆಲವನ್ನು, ರೊಟ್ಟಿಯನ್ನು ಕೊಡುವ
ಆಜ್ಞೆಗಳ ಮೇಲೆ ಮುದ್ರೆ ಒತ್ತಿದ ಕೈ
ಈಗ ಅದೇ ಕೈ
ಬಾನಿನ ತಾರೆಗಳನ್ನು ಮುಟ್ಟಿದೆ.

- ಪಾಬ್ಲೊ ನೆರೂದ

ಸಿನಿಮಾ

ಅಂಜಲಿ-ಗೀತಾಂಜಲಿ: ನಾಯಕನದ್ದೇ ಜೋರು



ಬಟ್ಟೆ ಕೊಳೆಯಾದರೆ ಒಗೆದು ಮತ್ತೆ ಹಾಕಿಕೊಳ್ಳುತ್ತೇವೆ, ಚಪ್ಪಲಿ ಹೊಲಸಾದರೆ ತೊಳೆದು ಮತ್ತೆ ಮೆಟ್ಟಿಕೊಳ್ಳುತ್ತೇವೆ. ಆದರೆ ಒಂದು ಹೆಣ್ಣನ್ನು ....?

ಗಂಡ ಸತ್ತ ಹೆಣ್ಣನ್ನು ಯಾಕೆ ಮದುವೆಯಾಗ ಬಾರದು? ಅದರಲ್ಲಿ ತಪ್ಪೇನು? ಇದು ಎಸ್.ನಾರಾಯಣರ ಪ್ರಶ್ನೆ. ವಿಧವಾ ವಿವಾಹವನ್ನು ಪ್ರೋತ್ಸಾಹಿಸುವ ಸಂದೇಶ ಹೊತ್ತ ಈ ಚಿತ್ರದಲ್ಲಿ ನಾರಾಯಣ್ ಗೊಂದಲಕ್ಕೊಳಗಾದಂತಿದೆ. ಸಂಪ್ರದಾಯಗಳನ್ನು ಧಿಕ್ಕರಿಸುವವರಂತೆ ಮಾತನಾಡುತ್ತಾ, ವಿಧವೆಯನ್ನು ಮದುವೆಯಾಗಲು ಮನಸ್ಸು ಮಾಡಿದ್ದನ್ನು ಬಿಟ್ಟರೆ ಉಳಿದೆಲ್ಲವನ್ನು ಸಂಪ್ರದಾಯದ ಚೌಕಟ್ಟಿನೊಳಗೇ ನೋಡುತ್ತಾರೆ. ಉದಾ: ಹೆಣ್ಣಿಗೆ ಕುಂಕುಮವೇ ಶೋಭೆ, ಪ್ರತಿ ಹೆಣ್ಣಿಗೂ ಗಂಡಿನ ಆಸರೆಯಿರಬೇಕು ಇತ್ಯಾದಿ, ಇತ್ಯಾದಿ.... ನಾಗರ ಪಂಚಮಿಯಂದು ಹುತ್ತದ ಹಾವಿಗೆ ಹಾಲೆರೆಯುವ ಬಾಲೆಯರೊಂದಿಗೆ ಹಾಡಿ ಕುಣಿಯುತ್ತಾನೆ ಕೂಡ.

ಛಾಯಾಗ್ರಾಹಕನಾದ ನಾರಾಯಣ್ ಕರಿಬಸಯ್ಯನೊಂದಿಗೆ ಅಶ್ವತ್ಥರ ಮನೆಯಲ್ಲಿ ನೆಲೆಸುತ್ತಾನೆ. ಮೊಮ್ಮಗಳನ್ನು ಮಾನಭಂಗದಿಂದ ಪಾರು ಮಾಡಿದ್ದಕ್ಕಾಗಿ ಅವರಿಗೆ ಅಲ್ಲಿ ಆಶ್ರಯ ಸಿಕ್ಕಿರುತ್ತದೆ. ಮೂವರು ಮೊಮ್ಮಕ್ಕಳಲ್ಲಿ ಇಬ್ಬರು ನಾರಾಯಣರ ಚರ್ವಿತಚರ್ವಣ ನಡವಳಿಕೆಗೆ ಮನಸೋಲುತ್ತಾರೆ. ಅದರಲ್ಲೂ ಮಾತಿನ ಮಲ್ಲಿಯಾದ ಅನುಪ್ರಭಾಕರ್ ಪ್ರೀತಿ ಅತಿರೇಕದ್ದಾಗಿದೆ. ಆದರೆ ಮೂಕಿಯಾಗಿ ಮೂಲೆ ಸೇರಿದ, ಕವನಗಳನ್ನು ಗೀಚುವ ಪ್ರೇಮಳ ಮೇಲೆ ನಾಯಕನಿಗೆ ಮನಸ್ಸಾಗುತ್ತದೆ. ನಂತರದಲ್ಲಿ ಅವಳು ವಿಧವೆಯೆಂದು ತಿಳಿದು, ಅವಳನ್ನೇ ಮದುವೆಯಾಗುವ ಸಂಕಲ್ಪ ತೊಟ್ಟು ಘರ್ಷಣೆಗಿಳಿಯುತ್ತಾನೆ, ಕೊನೆಯಲ್ಲಿ ಸುಖಾಂತ್ಯ. ಇದಿಷ್ಟು ಚಿತ್ರದ ಕಥೆ.

ವಿಧವೆ ಹೆಣ್ಣಿನ ಕಥೆಯನ್ನು ವಸ್ತುವಾಗಿಟ್ಟುಕೊಂಡ ಈ ಚಿತ್ರದಲ್ಲಿ ಹೆಣ್ಣಿನ ಸಮಾನತೆ, ಸ್ವಾಭಿಮಾನದ ಬದುಕನ್ನು ಪ್ರತಿಪಾದಿಸುವುದಿಲ್ಲ. ಬದಲಿಗೆ ಸಮಾಜದ ಕೆಟ್ಟ ನೋಟಗಳಿಂದ ರಕ್ಷಿಸಿಕೊಳ್ಳಲು ಹೆಣ್ಣಿಗೆ ಗಂಡಿನ ಆಸರೆಯಿರಬೇಕು ಎನ್ನುತ್ತಾನೆ ನಾಯಕ ಮತ್ತು ಆತನಿಗೆ ಹೆಣ್ಣಿನ ಬಗ್ಗೆ ಗೌರವಾದರಗಳೇನು ಇದ್ದಹಾಗೆ ಕಾಣುವುದಿಲ್ಲ. ಮಾತಿನ ಜಟಾಪಟಿಯಲ್ಲಿ ಮಧ್ಯೆ ಮಾತನಾಡಲು ಬಂದ ಅಜ್ಜಿಗೆ "ತೆಗೆದು ಬಿಟ್ಟರೆ ಚಟ್ಟದ ಮೇಲೆ ಮಲಕ್ಕಬೇಕು" ಎನ್ನುತ್ತಾನೆ. ಕಾಮುಕರಿಂದ ರಕ್ಷಣೆ ಕೇಳಿ ಬಂದ ಹುಡುಗಿಗೆ "ನೀನೆ ಸ್ವಲ್ಪ ಅಡ್ಜೆಸ್ಟ್ ಮಾಡ್ಕೋ" ಎನ್ನುತ್ತಾನೆ(ಅನಂತರ ಹೊಡೆದಾಡಿ ಅವಳನ್ನು ಪಾರು ಮಾಡುತ್ತಾನೆ ಅನ್ನೋದು ಬೇರೆ ಮಾತು).

ಒಬ್ಬ ವಿಧವೆಯ ಮಾನಸಿಕ ತುಮುಲ ಗಳಿಗಿಂತ ತಾನೊಬ್ಬ ಲಾಯಕ್ಕಾದ ಹೀರೋ ಎಂದು ಪ್ರೇಕ್ಷಕರಿಗೆ ಮನದಟ್ಟು ಮಾಡಿ ಕೊಡಲೇಬೇಕೆಂದು ಹೊರಟಂತಿದ್ದಾರೆ ನಿರ್ದೇಶಕ ಎಸ್. ನಾರಾಯಣ್. ಆಕರ್ಷಕ ಉಡುಗೆ- ತೊಡುಗೆ, ಹೊಡೆದಾಟ- ಬಡಿದಾಟ, ಕುಣಿತ ಎಲ್ಲಕ್ಕೂ ಸೈ ಈ ನಾಯಕ. ಚಿತ್ರದಲ್ಲಿ ಮೂವರು ನಾಯಕಿಯರಿದ್ದರೂ ಚಿತ್ರದ ತುಂಬ ನಾರಾಯಣ್ ತುಂಬಿಕೊಳ್ಳುತ್ತಾರೆ. ಕನ್ನಡಕ್ಕೆ ಉತ್ತಮ ನಾಯಕ ಸಿಗುತ್ತಾನೋ ಇಲ್ಲವೋ ಆದರೆ ಉತ್ತಮ ನಿರ್ದೇಶಕನನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ.

ಸಾಮಾನ್ಯ ಪ್ರೇಕ್ಷಕರನ್ನು ಅದರಲ್ಲೂ ಮಹಿಳೆಯರನ್ನು ಆಕರ್ಷಿಸುವ ಎಲ್ಲಾ ಮಸಾಲೆ ಸೂತ್ರಗಳು ಚಿತ್ರದಲ್ಲಿ ಇರುವುದರಿಂದ ಅವರಿಗೆ ಈ ಚಿತ್ರ ಇಷ್ಟವಾಗಬಹುದು. ಹೆಂಗೆಳೆಯರ ಕಣ್ಣೀರಿಳಿಸಬಹುದಾದ ಸೆಂಟಿಮೆಂಟ್ ದೃಶ್ಯಗಳು, ಎಲ್ಲೋ ಕೇಳಿದಂತಿರುವ ಹಾಡುಗಳು, ಈಗಾಗಲೇ ನೋಡಿದಂತಿರುವ ಹಾಸ್ಯದ ಸನ್ನಿವೇಶಗಳು, ಅದರಲ್ಲೂ ಕೆಲವು ಹಾಸ್ಯ ದೃಶ್ಯಗಳಂತೂ ಸದಭಿರುಚಿಯವಲ್ಲ. ಧೀರೇಂದ್ರ ಗೋಪಾಲ್, ಕರಿಬಸಯ್ಯ ಮತ್ತು ಅವನು ಮದುವೆಯಾಗುವ ಹೆಣ್ಣು ಈ ಮೂವರ ನಡುವಿನ ಸನ್ನಿವೇಶಗಳು ಅತಿರೇಕದ್ದಾಗಿದೆ.

ಧೀರೇಂದ್ರಗೋಪಾಲ್ ಬಹಳ ಪ್ರಾಯಾಸ ಪಟ್ಟು ಅಭಿನಯಿಸಿದಂತೆ ಕಾಣುತ್ತದೆ. ಅವರ ಮುಖದಲ್ಲಿ ಅಂತಿಮ ದಿನಗಳ ಕಳೆ ಸ್ಪಷ್ಟವಾಗಿ ಗೋಚರಿಸುತ್ತದೆ. ಇದೇ ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಅವರು ಮೃತರಾದದ್ದು ನೆನಪಿಗೆ ಬಂದು, ಅವರ ಉತ್ತಮ ಅಭಿನಯದ ಚಿತ್ರಗಳ ದೃಶ್ಯಗಳು ಕಣ್ಮುಂದೆ ಬರುತ್ತವೆ.

ಇನ್ನುಳಿದಂತೆ ಅಭಿನಯದಲ್ಲಿ ಜಗಳಗಂಟಿಯಾಗಿ ಅನುಪ್ರಭಾಕರ್ ಗಮನ ಸೆಳೆಯುತ್ತಾರೆ, ಪ್ರೇಮಾರದ್ದು ಸಂಯಮದ ಅಭಿನಯ. ಅಶ್ವತ್ಥರದ್ದೂ ಉತ್ತಮ ನಟನೆ. ಎಸ್.ನಾರಾಯಣ್ ತಮ್ಮನ್ನು ತಾವು ಚೆನ್ನಾಗಿ ಪ್ರದರ್ಶಿಸಿಕೊಂಡಿದ್ದಾರೆ.

- ರಾಮು

ಬಯೋನೆಟ್ಟನ್ನು ಮೆಟ್ಟಿದ ಮೇ ದಿನ....

ಪುಟ 11 ರಿಂದ

ಹಾರಲು ಸಿದ್ಧವಾಗಿ ರೆಕ್ಕೆ ಬಿಡಿಸಿದ್ದ ಕಪ್ಪು ಹಕ್ಕಿಯನ್ನು ಆ ಮೆರವಣಿಗೆ ಹೋಲುತ್ತಿತ್ತು. ಪಾವೆಲ್ ಆ ಹಕ್ಕಿಯ ಕೊಕ್ಕಿನಂತೆ ನಿಂತಿದ್ದ...

ಪಾವೆಲ್ ಸ್ವರ ಕೇಳಿಬಂತು

"ಬಾಂಧವರೇ!, ನಮ್ಮ ಜೀವಮಾನವೆಲ್ಲಾ ನಾವು ಮುನ್ನುಗ್ಗುತ್ತಲೇ ಇರ್ಬೇಕು. ಬೇರೆ ಹಾದಿಯೇ ಇಲ್ಲ ನಮಗೆ"

ವಾತಾವರಣ ಶಾಂತವಾಯಿತು. ನಿರೀಕ್ಷಣೆಯಿಂದ ತುಂಬಿತು. ಮೇಲಕ್ಕೆ ಏರಿಕೊಂಡಿತು ಬಾವುಟ. ಕ್ಷಣಕಾಲ ಚಂಚಲವಾದರೂ ಜನರ ತಲೆಗಳ ಮೇಲ್ಗಡೆ ಅದು ತೇಲಾಡಿತು. ಸೈನಿಕರ ಬೂದುಗೋಡೆಯ ಕಡೆಗೆ ದೃಢವಾಗಿ ಮುಂದಕ್ಕೆ ಅದನ್ನೊಯ್ದರು. ತಾಯಿಯ ಶರೀರ ಕಂಪಿಸಿತು. ಉಸಿರು ಕಟ್ಟಿದಂತಾಗಿ ಆಕೆ ಕಣ್ಣು ಮುಚ್ಚಿ ಕೊಂಡಳು. ಪಾವೆಲ್, ಅಂದ್ರೇಯ್, ಸಮೋಯ್‌ಲೊವ್ ಮತ್ತು ಮಾಜಿನ್ - ಈ ನಾಲ್ವರು ಮಾತ್ರ ಜನಸಂದಣಿಯಿಂದ ಪ್ರತ್ಯೇಕಗೊಂಡು ಮುಂದೆ ನಡೆದಿದ್ದರು.

ಗಾಳಿಯನ್ನು ಭೇದಿಸಿಕೊಂಡು ಫ್ಯೋಧೊರ್ ಮಾಜಿರ್‌ನ ಸ್ಪಷ್ಟ ಸ್ವರ ಕೇಳಿಸಿತು.

'ದೇಹವಿಟ್ಟಿರಿ ನೀವು ಮಹಾ ತ್ಯಾಗದೀ...

ಆಳವಾದ ನಿಟ್ಟುಸಿರಿನಂತೆ ತಗ್ಗಿದ ಸ್ವರದಲ್ಲಿ ಉತ್ತರ ಬಂತು

"ಅಸಮವೆನಿಸುವ ರುದ್ರ ಸಮರದೀ.....

ಗೀತದ ತಾಳಕ್ಕೆ ಸರಿಯಾಗಿ ಅವರು ಮುಂದೆ ಸಾಗಿದರು.

ಫ್ಯೋದೊರ್‌ನಸ್ವರ, ನಿರ್ಧಾರದಿಂದ ತುಂಬಿ ಘೋಷಿಸುತ್ತ, ಪ್ರಕಾಶಮಾನವಾದ ಸುರುಳಿಯಂತೆ ಬಿಚ್ಚಿಕೊಂಡಿತು.

"ಇದ್ದುದೆಲ್ಲವನ್ನೂ ಕೊಟ್ಟಿರಿ ನೀವೂ....

ಅವನ ಸಂಗಾತಿಗಳು ಎರಡನೆಯ ಚರಣದಲ್ಲಿ ಧ್ವನಿಗೂಡಿಸಿದರು.

"ಸ್ವಾತಂತ್ರ್ಯಕ್ಕಾಗಿ....

"ಆಹಾ! ಶೋಕಗಿತೆ ಹಾಡ್ತಿದ್ದಾರೆ ಹಾದರಕ್ಕೆ ಹುಟ್ಟಿದವರು!" ಎಂದು ಯಾರೋ ಒಂದೆಡೆ ಅರಚಿದರು.

"ಬಿಗಿಯಿರಿ ಅವನಿಗೊಂದು" ಎಂದೊಂದು ಸಿಟ್ಟಿನ ಸ್ವರ ಗರ್ಜಿಸಿತು.

ಹಿಂದೆ ಜನಸಂದಣಿ ಮಹಾಪೂರದಂತೆ ಬೀದಿಯನ್ನು ತುಂಬಿತ್ತು. ಈಗ ಬಾವುಟದೊಡನೆ ಆ ನಾಲ್ವರು ಮುಂದುವರಿಯುತ್ತಿದ್ದುದನ್ನು ಈಕ್ಷಿಸುತ್ತಿದ್ದಂತೆ ಜನಸಂದಣಿ ಅಸ್ಥಿರವಾಯಿತು. ಹತ್ತಾರು ಜನ ಆ ನಾಲ್ವರ ಹಿಂದೆಯೇ ಸಾಗುತ್ತಿದ್ದರು. ಆದರೆ ಉರಿಯುವ ನೆಲ ಅವರ ಹಿಮ್ಮಡಿಗಳನ್ನು ಸುಡುತ್ತಿತ್ತೊ ಎಂಬಂತೆ. ಪ್ರತಿಹೆಜ್ಜೆ ಮುಂದಿಟ್ಟಾಗಲೂ ಒಬ್ಬೊಬ್ಬರೇ ಹಿಂದೆ ನಿಂತರು.

'ಹಿಂಸೆಗೊದಗುವುದು ಕೊನೆಗಾಲ..."

ಎಂದು ಫ್ಯೋದೊರ್ ಭವಿಷ್ಯವಾಣಿ ನುಡಿಯುತ್ತ ಹಾಡಿದನು. ಅದಕ್ಕೆ ಉತ್ತರವಾಗಿ ಉಳಿದವರ ಏರುಸ್ವರದ ಅನುಪಲ್ಲವಿ ಬಂತು

"ಜನರೇಳುವರು. ಏಳುವರು.."

ಆದರೆ ಹಾಡಿನ ಜೊತೆಯಲ್ಲಿ ಮುನ್ನೆಚ್ಚರಿಕೆಯ ಪಿಸುಮಾತುಗಳು ಕೇಳಿಸಿದವು.

"ಆಜ್ಞೆ ಕೊಡೋದರಲ್ಲಿದ್ದಾರೆ!"

ಅದು ಸರಿ ಎಂಬಂತೆ, ಎದುರುಗಡೆಯಿಂದ ತೀಕ್ಷ್ಣ ಸ್ವರವೊಂದು ಕೇಳಿಸಿತು

"ಬಂದೂಕು ಕೈಯಲ್ಲಿ ಹಿಡಿಯಿರಿ"

ತೆರೆಯ ಏರು ತಗ್ಗಿನಂತೆ ಬಯನೆಟುಗಳು ಬಾಗಿ ಮುಂಬರುತ್ತಿದ್ದ ಬಾವುಟವನ್ನು, ಉಕ್ಕಿನ ಕುಟಿಲ ಅಣಕದೊಡನೆ ಇದಿರ್ಗೊಂಡವು.

"ಮುನ್ನಡೆಯಿರಿ"

"ಚೆದುರಿಹೋಗಿ" ಎಂದು ಗಿರುಗಾತ್ರದ ಅಧಿಕಾರಿಯೊಬ್ಬ ತನ್ನ ತಲವಾರನ್ನು ಝಳಪಿಸುತ್ತಾ ಸಣ್ಣ ಸ್ವರದಲ್ಲಿ ಆಜ್ಞಾಪಿಸಿದ. ನಡೆಯುತ್ತಿದ್ದಾಗ ಮೊಣಕಾಲು ಬಗ್ಗಿಸದೆಯೇ ಕಾಲುಗಳನ್ನೆತ್ತಿ ಇಡುತ್ತ, ಬೂಟುಗಳ ಹಿಮ್ಮಡಿಯಿಂದ ನೆಲಕ್ಕೆ ಬಲವಾಗಿ ಬಡಿಯುತ್ತಿದ್ದ.

ಕೆಂಪು ಬಾವುಟ ಹಿಡಿದಿದ್ದ ಗುಂಪು ಮುಂದು ಮುಂದಕ್ಕೆ ಹೋಯಿತು. ಅದಕ್ಕೆದುರಾಗಿ ಬೂದು ಜನರ ಘನವಾದ ತೆರೆಯೂ ಮುಂದು ಮುಂದಕ್ಕೆ ಬಂತು. ಸೈನಿಕರ ಮುಖವೂ ಸ್ಪಷ್ಟವಾಗಿ ಕಾಣಿಸಿತು. ವಿರೂಪದ ವಿಶಾಲವಾದ ಅವರ ಮುಖ ಹಳದಿ ಪಟ್ಟಿಯಂತೆ ತೋರುತ್ತಿತ್ತು. ಬೀದಿಯ ಅಗಲಕ್ಕೂ ವಿವಿಧ ಬಣ್ಣಗಳ ಕಣ್ಣುಗಳಿದ್ದವು. ಅವರಿಗಿಂತಲೂ ಮುಂದೆ ಹೊಳೆಯುವ ಉಕ್ಕಿನ ಕ್ರೂರ ಚುಕ್ಕಿಗಳಿದ್ದವು. ಮೆರವಣಿಗೆಯಲ್ಲಿ ಬರುತ್ತಿದ್ದವರ ಎದೆಗಳಿಗಿದಿರು ಮಟ್ಟವಾಗಿ ಅವು ನಿಂತಿದ್ದವು. ಜನರನ್ನು ಮುಟ್ಟದೆಯೇ ಆ ಉಕ್ಕು ಒಬ್ಬರ ಅನಂತರ ಒಬ್ಬರನ್ನಾಗಿ ಮಗುಚಿಹಾಕಿತು. ಹೀಗೆ ಗುಂಪನ್ನು ಮುರಿದುಬಿಟ್ಟಿತು.

ತನ್ನ ಹಿಂಭಾಗದಲ್ಲಿ ಜನರು ಓಡುತ್ತಿದ್ದ ಸದ್ದು ತಾಯಿಗೆ ಕೇಳಿಸಿತು. ಉದ್ವಿಗ್ನಗೊಂಡ ಸ್ವರಗಳೂ ಕೇಳಿಸಿದವು.

'ಚದುರಿರಿ.. ಸಂಗಾತಿಗಳೇ...."

'ವ್ಲಾಸೊವ್, ಓಡು!"

'ಹಿಂದಕ್ಕೆ ಬಾ, ಪಾವೆಲ್"

ವೆಸೊವ್‌ಶ್ಚಿಕೊವ್ ವ್ಯಗ್ರವಾಗಿ ಹೇಳಿದ.

"ಬಾವುಟ ಬಿಟ್ಬಿಡು ಪಾವೆಲ್, ಇಲ್ಲಿಕೊಡು, ಬಚ್ಚಿಡ್ತೀನಿ"

ಆತ ಧ್ವಜಕೋಲಿನತ್ತ ಕೈ ಚಾಚಿ ಅದನ್ನೆಳೆದ. ಬಾವುಟ ಹಿಂದಕ್ಕೆ ಸರಿಯಿತು.

"ಬಿಡು, ದೂರಹೋಗು" ಎಂದು ಪಾವೆಲ್ ಗದರಿದ.

ಸುಟ್ಟುಹೋಯಿತೇನೋ. ಎಂಬಂತೆ ಸರಕ್ಕನೆ ನಿಕೊಲಾಯ್ ಕೈಯನ್ನು ಹಿಂದಕ್ಕೆಳೆದ. ಹಾಡು ನಿಂತಿತು. ಜನರು ಅಲ್ಲೆತಡೆದು, ಪಾವೆಲ್‌ನ ಸುತ್ತಲೂ ಭದ್ರವಾದ ಗೋಡೆಯಾಗಿ ನಿಂತರು. ಆದರೆ ಪಾವೆಲ್ ಎಲ್ಲರಿಗಿಂತ ಮುನ್ನುಗ್ಗಿದನು. ಮೇಲಿನಿಂದುದುರಿ, ತೆಳ್ಳನೆಯ ಮೋಡದ ಹಾಗೆ ಎಲ್ಲರನ್ನೂ ಮುಚ್ಚಿಕೊಂಡಂತೆ, ಮಹಾ ಮೌನ ಒಮ್ಮೆಲೆ ನೆಲೆಸಿತು.

ಹೆಚ್ಚಿಲ್ಲ, ಸುಮಾರು ಇಪ್ಪತ್ತು ಜನರಷ್ಟೇ ಬಾವುಟದ ಸುತ್ತಲೂ ನಿಂತಿದ್ದರು. ಆದರೆ ಅಷ್ಟು ಜನ ದೃಢವಾಗಿ ಕದಲದೆ ನಿಂತರು.

ಎತ್ತರದ ಆ ವೃದ್ಧ ಮನುಷ್ಯ, ಬಾವುಟದತ್ತ ಬೊಟ್ಟು ಮಾಡುತ್ತ, "ಅದನ್ನು ಅವನಿಂದ ಕಿತ್ತುಕೊ, ಲೆಫ್ಟಿನೆಂಟ್" ಎಂದ.

ಆ ಕಿರಿಯ ಗಾತ್ರದ ಅಧಿಕಾರಿ ಪಾವೆಲ್‌ನ ಬಳಿಗೋಡಿ ಧ್ವಜಕ್ಕೆ ಕೈ ಹಾಕಿದ.

"ಇಲ್ಲಿ ಕೊಡು" ಎಂದು ಕಿರಿಚಿದ.

"ನಿನ್ನ ಕೈ ತೆಗೆ" ಎಂದು ಪಾವೆಲ್ ಗಟ್ಟಿಯಾದ ಸ್ವರದಲ್ಲಿ ಉತ್ತರವಿತ್ತು. ಏರಿತು ಕೊನೆಗೊಮ್ಮೆ ಗಾಳಿಯಲ್ಲಿ ಹಾರಾಡಿತು. ಬಲಕ್ಕೂ ಎಡಕ್ಕೂ, ಇಳಿದು ಹಾರಿ ಬಿದ್ದುಬಿಟ್ಟ. ನಿಕೊಲಾಯ್ ಮುಷ್ಟಿಯಲುಗಿಸುತ್ತಾ ತಾಯಿಯನ್ನು ಹಾದುಹೋದ

"ಅವರನ್ನು ಬಂಧಿಸಿರಿ" ಎಂದು ಮುದುಕ ಕಾಲ್ತುಳಿದ ಸದ್ದಿನೊಡನೆ ಗರ್ಜಿಸಿದ.

ಹಲವು ಸೈನಿಕರು ಮುಂದಕ್ಕೋಡಿದರು. ಅವರಲ್ಲೊಬ್ಬ ಬಂದೂಕಿನ ಹಿಡಿಯನ್ನು ಬೀಸಿದ ಬಾವುಟ ಕಂಪಿಸಿ, ಮುಂದಕ್ಕೆ ಬಿದ್ದು, ಸೈನಿಕರ ಬೂದು ಸಮೂಹದಲ್ಲಿ ಅದೃಶ್ಯವಾಯಿತು.

"ಆ" ಎಂದು ಯಾರೋ ಕಡು ವಿಷಾದದ ಉದ್ಗಾರವೆತ್ತಿದರು.

'ವಂದನೆ ಬಾಂಧವರೇ" ಎಂದು ಅವರೆಲ್ಲ, ಸೈನಿಕರೆಡೆಯಿಂದ, ಗಟ್ಟಿಯಾಗಿ ಅಂದರು.

ವಿವಿಧ ಸ್ವರಗಳ ಪ್ರತಿಧನಿಯೊಂದು ಅವರಿಗೆ ಮರುವಂದನೆಯನ್ನಿತ್ತಿತ್ತು. ಕಿಟಕಿಗಳಿಂದ, ಎಲ್ಲೋ ಮೇಲಿನಿಂದ, ಮಾಡಗಳಿಂದಲೂ ಆ ಪ್ರತಿಧ್ವನಿ ಬಂತು.

ಸೈನಿಕರ ನಡುವಿನಿಂದ ಹಾಡು ಕೇಳಿಸಿತು

"ಹೋರಾಡಲೇಳಿ, ಓ ಕಾರ್ಮಿಕರೇ, ಏಳಿ"

ಪ್ರತಿಯೊಂದು ವಸ್ತುವೂ ತತ್ತರಿಸಿತು, ಓಲಾಡಿತು. ಕಂಪಿಸಿತು. ಟೆಲಿಗ್ರಾಫ್ ತಂತಿಗಳ ಗುಂಯ್ ಗುಂಯ್‌ಗುಟ್ಟದಂಥ ಸದ್ದು ವಾತಾವರಣವನ್ನು ತುಂಬಿತು. ಅಧಿಕಾರಿ ಅಲ್ಲಿಗೆ ಧಾವಿಸಿದ.

"ಹಾಡು ನಿಲ್ಲಿಸಿ" ಎಂದು ಕ್ರೋಧದಿಂದ ಅವನು ಕಿರಿಚಿದ.

"ಬಯನೇಟುಗಳ ಸಾಲನ್ನು ಇದಿರಿಸಿ ಹೋಗೋದು ತಮಾಷೆಯಲ್ಲ. ಸೋದರರೇ! ಅದಕ್ಕೆ ಧೈರ್ಯ ಬೇಕು" ಎಂದು ಯಾರೋ ಗಟ್ಟಿಯಾಗಿ ಶಕ್ತಿಪೂರ್ಣವಾದ ಸ್ವರದಲ್ಲಿ ಹೇಳಿದರು.

"ಅಬ್ಬ, ಅವರನ್ನು ನೋಡಿದಿಯಾ ನೀನು. ಬಯನೇಟುಗಳು ನೇರವಾಗಿ ಅವರಿಗಿದಿರು ಬರ್ತಿದ್ದವು. ಆದರೂ ಅವರು ಅಲುಗಾಡದೆ ನಿಂತಿದ್ರು. ಅಲ್ಲೆ ! ಕಲ್ಲಿನ ಹಾಗೆ ದೃಢವಾಗಿ, ಒಂದಿಷ್ಟೂ ಹೆದರದೆ"

"ಪಾವೆಲ್ ವ್ಲಾಸೊವ್ ಸಾಮಾನ್ಯನಲ್ಲ"

"ಮತ್ತೆ ಅಂದ್ರೇಯ್ ಕಡಿಮೆಯೇ"

"ಬೆನ್ನ ಹಿಂದೆ ಕೈ ಕಟ್ಟಿಕೊಂಡು ಮುಗುಳ್ನಗುತ್ತಲೇ ನಿಂತಿದ್ದ ಭೂಪ"

(ಮಾಕ್ಸಿಂ ಗಾರ್ಕಿಯವರ ಜಗದ್ವಿಖ್ಯಾತ ಕಾಂದಬರಿ 'ತಾಯಿ' ಯಿಂದ)

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : S.Y.GURUSHANTH